# ಪ್ರಚಲಿತ ವಿದ್ಯಮಾನಗಳು- ಮಾರ್ಚ್, 2017

www.karunaduexams.com

# Contents

ಅಂತರ್ ರಾಷ್ಟ್ರೀಯ .......... 2
ಪ್ರಶಸ್ತಿಗಳು .......... 11
ಪರಿಸರ .......... 17
ಸುದ್ದಿಯಲ್ಲಿರುವ ವ್ಯಕ್ತಿಗಳು .......... 23
ವ್ಯವಹಾರ .......... 24
ರಾಜ್ಯ .......... 31
ರಾಷ್ಟ್ರೀಯ .......... 38
ವಿಜ್ಞಾನ-ತಂತ್ರಜ್ಞಾನ .......... 59
ಕ್ರೀಡೆ .......... 68

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,
WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9844915689 (Technical and Marketing related queries)

Ramakant: Mobile: +91-9972355744(Management related queries)

# ಅಂತರ್ ರಾಷ್ಟ್ರೀಯ

## ಕಲುಷಿತ ಪರಿಸರದಿಂದ ಪ್ರತಿ ವರ್ಷ 1.7 ಮಿಲಿಯನ್ ಮಕ್ಕಳು ಸಾವು



ವಿಶ್ವಸಂಸ್ಥೆ ಬಿಡುಗಡೆಗೊಳಿಸಿರುವ ವರದಿಯ ಪ್ರಕಾರ ಪರಿಸರ ಮಾಲಿನ್ಯದಿಂದ ಪ್ರತಿ ವರ್ಷ 1.7 ಮಿಲಿಯನ್ ಮಕ್ಕಳು ಮರಣ ಹೊಂದುತ್ತಿರುವುದಾಗಿ ಹೇಳಲಾಗಿದೆ. ವಿಶ್ವಸಂಸ್ಥೆ ಹೊರತಂದಿರುವ "ಇನ್ ಹೆರಿಟೆಂಗ್ ಅ ಸಸ್ಟನೈಬಲ್ ವರ್ಲ್ಡ್: ಅಟ್ಲಾಸ್ ಆನ್ ಚಿಲ್ಡ್ರನ್ಸ್ ಹೆಲ್ತ್ ಅಂಡ್ ದಿ ಎನ್ವಿರನ್ಮೆಂಟ್" ಶೀರ್ಷಿಕೆಯಡಿ ಹೊರತಂದಿರುವ ವರದಿಯಡಿ ಈ ಅಂಶ ಬಯಲಾಗಿದೆ. ವರದಿಯಲ್ಲಿ ಪರಿಸರ ಮಾಲಿನ್ಯದಿಂದ ಅದರಲ್ಲೂ ಮುಖ್ಯವಾಗಿ ವಾಯು ಮಾಲಿನ್ಯದಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮದ ಬಗ್ಗೆ ಮುಖ್ಯವಾಗಿ ಕೇಂದ್ರಿಕರಿಸಲಾಗಿದೆ.

**ಪ್ರಮುಖಾಂಶಗಳು**:

- ಪ್ರತಿ ವರ್ಷ ಜಾಗತಿಕವಾಗಿ ಸಾವನ್ನಪ್ಪುವ ಐದು ವರ್ಷದೊಳಗಿನ ಮಕ್ಕಳಲ್ಲಿ ಶೇ 1/3 ರಷ್ಟು ಮಕ್ಕಳು ಹೊರ ಮತ್ತು ಒಳಾಂಗಣ ವಾಯು ಮಾಲಿನ್ಯ, ನೈರ್ಮಲ್ಯದ ಕೊರತೆ, ಅಶುದ್ಧ ಕುಡಿಯುವ ನೀರಿನ ಬಳಕೆಯಿಂದ ಸಾವನ್ನಪ್ಪುತ್ತಿದ್ದಾರೆ.
- ಡಯೋರಿಯಾ, ಮಲೇರಿಯಾ ಹಾಗೂ ನ್ಯೂಮೋನಿಯಾ ಕಾಯಿಲೆಗಳು ಮಕ್ಕಳ ಸಾವಿಗೆ ಪ್ರಮುಖವಾಗಿ ಕಾರಣವಾದ ರೋಗಗಳು.
- ಹಾನಿಕಾರಿಕ ರಾಸಾಯನಿಕಗಳಿಗೆ ಒಡ್ಡುವುದು ಅವಧಿಪೂರ್ವ ಜನನಕ್ಕೆ ಕಾರಣವಾಗುತ್ತಿದೆ. ವಾಯು ಮಾಲಿನ್ಯದಿಂದಾಗಿ ಶಿಶುಗಳು ಹಾಗೂ ಶಾಲಾ ಮಕ್ಕಳಲ್ಲಿ ಅಸ್ತಮಾದಂತಹ ತೀವ್ರ ಉಸಿರಾಟ ಸಂಬಂಧಿತ ಕಾಯಿಲೆಗಳು ಹೆಚ್ಚಳವಾಗಲು ಕಾರಣವಾಗುತ್ತಿದೆ.
- ವಾಯು ಮಾಲಿನ್ಯದಿಂದ ಹೃದಯ ಸಂಬಂಧಿ ಕಾಯಿಲೆಗಳು, ಪಾರ್ಶ್ವವಾಯು ಮತ್ತು ಕ್ಯಾನ್ಸರ್ ನಂತಹ ರೋಗಗಳು ದುಪ್ಪಟ್ಟವಾಗುತ್ತಿವೆ.

## ವಿಶ್ವದ ಅತ್ಯಂತ ಹಳೆಯ ವಿಮಾನ ವಾಹಕ ನೌಕೆ ಐಎನ್ಎಸ್ ವಿರಾಟ್ ಗೆ ವಿದಾಯ



ಸರಿಸುಮಾರು ಆರು ದಶಕಗಳ ಕಾಲ ನೌಕಾಸೇನೆಯಲ್ಲಿ ಸೇವೆ ಸಲ್ಲಿಸಿದ ಸಮರ ವಿಮಾನ ವಾಹಕ ನೌಕೆ ಐಎನ್ಎಸ್ ವಿರಾಟ್‌ಗೆ ಮುಂಬೈ, ಮಹಾರಾಷ್ಟ್ರದಲ್ಲಿ ವಿದಾಯ ಹೇಳಲಾಯಿತು. ದೀರ್ಘಾವಧಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಹೊಂದಿರುವ ಈ ಯುದ್ಧನೌಕೆ ಸೇನೆಯ ಶಕ್ತಿಯ ಪ್ರತೀಕವಾಗಿತ್ತು. ಹಲವಾರು ಕಠಿಣ ಸಂದರ್ಭಗಳಲ್ಲಿ ದೇಶದ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು.

**ಪ್ರಮುಖಾಂಶಗಳು**:

- ದೀರ್ಘಕಾಲ ಸೇವೆ ಸಲ್ಲಿಸಿರುವ ವಿರಾಟ್ ವಿಮಾನ ವಾಹಕ ನೌಕೆ "ಗಿನ್ನಿಸ್ ದಾಖಲೆ"ಯನ್ನು ಹೊಂದಿದೆ. ಬ್ರಿಟಿಷರು ನಿರ್ಮಿಸಿ ಭಾರತ ನೌಕಪಡೆಯ ಸೇವೆಯಲ್ಲಿರುವ ಕೊನೆಯ ನೌಕೆ ಸಹ ಇದಾಗಿದೆ.
- 1943ರಲ್ಲಿ ಎರಡನೇ ವಿಶ್ವ ಮಹಾಯುದ್ಧ ಸಂದರ್ಭದಲ್ಲಿ ನೌಕೆಯನ್ನು ನಿರ್ಮಿಸಲಾಯಿತು. ನವೆಂಬರ್ 1959ರಲ್ಲಿ ವಿರಾಟ್ ಬ್ರಿಟಿಷ್ ರಾಯಲ್ ನೌಕಾದಳದಲ್ಲಿ ಎಚ್‌ಎಂಎಸ್ ಹರ್ವೆಸ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು.
- 1982 ರಲ್ಲಿ ನಡೆದ ಫಲ್ಕಲ್ಯಾಂಡ್ ಯುದ್ಧದಲ್ಲಿ ಐಎನ್‌ಎಸ್ ವಿರಾಟ್ ನೌಕೆ ಬ್ರಿಟಿಷ್ ರಾಯಲ್ ನೌಕಪಡೆಯನ್ನು ಮುನ್ನೆಡೆಸಿತ್ತು. 1985 ರಲ್ಲಿ 27 ವರ್ಷಗಳ ಸತತ ಸೇವೆಯ ನಂತರ ಬ್ರಿಟಿಷ್ ನೌಕಪಡೆ ನೌಕೆಯನ್ನು ಸೇವೆಯಿಂದ ಮುಕ್ತಗೊಳಿಸಿತು. ಐಎನ್‌ಎಸ್ ವಿರಾಟ್ ನೌಕಾಪಡೆಯ 'ಗ್ರ್ಯಾಂಡ್ ಓಲ್ಡ್ ಲೇಡಿ' ಅಂತಲೇ ಖ್ಯಾತಿ ಪಡೆದಿತ್ತು.
- ಆ ಬಳಿಕ 1987ರ ಮೇ 12ರಂದು ಭಾರತ ಸರ್ಕಾರ ಈ ಹಡಗನ್ನು 6.5 ಕೋಟಿ ರೂಪಾಯಿಗಳಿಗೆ ಖರೀದಿಸಿ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಗೊಳಿಸಿತು. ಆ ಮೂಲಕ ನೌಕಾಪಡೆಗೆ ಸೇರಿದ ಅತ್ಯಂತ ಹಳೆಯ ಹಡಗು ಎಂದು ಗಿನ್ನೆಸ್ ದಾಖಲೆಗೂ ಸೇರ್ಪಡೆಯಾಗಿ, ಅಂತಾರಾಷ್ಟ್ರೀಯ ವಲಯದಲ್ಲಿ ಸುದ್ದಿ ಮಾಡಿತು.
- 1989 ರಲ್ಲಿ ಶ್ರೀಲಂಕಾದಲ್ಲಿ ಶಾಂತಿ ಸ್ಥಾಪಿಸುವ ಕಾರ್ಯಾಚರಣೆ "ಆಪರೇಷನ್ ಜುಪಿಟರ್" ಹಾಗೂ ಸಂಸತ್ತಿನ ಮೇಲಿನ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನ ನಡುವಿನ "ಆಪರೇಷನ್ ಪರಾಕ್ರಮ್" ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು.

**27 ಬಾರಿ ವಿಶ್ವಪರ್ಯಟನೆ!**

ಐಎನ್‌ಎಸ್ ವಿರಾಟ್ 27 ಬಾರಿ ವಿಶ್ವ ಪರ್ಯಟನೆ ಮಾಡಿದ್ದು, 11 ಲಕ್ಷ ಕಿಲೋಮೀಟರ್ ದೂರವನ್ನು ಕ್ರಮಿಸಿದೆ. ಅಲ್ಲದೆ, 2,250 ದಿನಗಳನ್ನು ಸಮುದ್ರದಲ್ಲೇ ಕಳೆದಿದೆ.

**<u>ಭಾರತ-ನೇಪಾಳ ಮಿಲಿಟರಿ ಸಮರಭ್ಯಾಸ ಸೂರ್ಯ ಕಿರಣ್-XI ಗೆ ಚಾಲನೆ</u>**



ಭಾರತ ಮತ್ತು ನೇಪಾಳ ನಡುವಿನ 11ನೇ ಮಿಲಿಟರಿ ಸಮರಭ್ಯಾಸ ಸೂರ್ಯ ಕಿರಣ್-XI ಉತ್ತರಖಂಡದ ಪಿಥೊರಗರ್ ನಲ್ಲಿ ಆರಂಭಗೊಂಡಿದೆ. ಉಭಯ ದೇಶಗಳ ಸೇನೆ ನಡುವೆ ಎರಡು ವಾರಗಳ

ಕಾಲ ನಡೆಯುವ ಸಮರಭ್ಯಾಸ ಇದಾಗಿದೆ. ನೈಸರ್ಗಿಕ ವಿಪತ್ತು ನಿರ್ವಹಣೆ, ಒಳನಸುಳುವಿಕೆಯನ್ನು ತಡೆಯುವುದು ಹಾಗೂ ಅರಣ್ಯ ಸಮರಕ್ಕೆ ಅಗತ್ಯ ಕೌಶಲ್ಯಗಳ ಮೇಲೆ ಸಮರಭ್ಯಾಸದಲ್ಲಿ ಕೇಂದ್ರಿಕರಿಸಲಾಗುವುದು.

**ಪ್ರಮುಖಾಂಶಗಳು**:

- ಸೂರ್ಯ ಕಿರಣ್-XI ಸಮರಭ್ಯಾಸದಲ್ಲಿ ಬಂಡುಕೋರರ ನಿಗ್ರಹ ಕಾರ್ಯಾಚರಣೆ ಬಗ್ಗೆ ವಿವಿಧ ಪ್ರದೇಶಗಳಲ್ಲಿ ಎರಡು ದೇಶದ ಸೇನಾ ಪಡೆಗಳಿಗೆ ತರಭೇತಿಯನ್ನು ನೀಡಲಾಗುವುದು.
- ನೈಸರ್ಗಿಕ ವಿಕೋಪ ಸಂದರ್ಭಗಳಲ್ಲಿ ಮಾನವೀಯ ನೆರವು ನೀಡುವುದು ಸೇರಿದಂತೆ ಪರಿಸರ ಸಂರಕ್ಷಣೆಗೂ ಈ ಸಮರಭ್ಯಾಸದಲ್ಲಿ ಒತ್ತು ನೀಡಲಾಗುವುದು.
- ಈ ಸಮರಭ್ಯಾಸದಲ್ಲಿ ಭಾರತೀಯ ಸೇನಾಪಡೆ ಅಧಿಕಾರಿಗಳು ಹಾಗೂ ಪಂಜಾಬ್ ಸೇನಾತುಕಡಿಯ ಎಕ್ತಾ ಶಕ್ತಿ ಬೆಟಾಲಿಯನ್ ಭಾಗವಹಿಸಲಿವೆ. ಇನ್ನು ನೇಪಾಳದ ಪರವಾಗಿ ದುರ್ಗ ಬಕ್ಷ್ ಬೆಟಾಲಿಯನ್ ಭಾಗವಹಿಸಲಿದೆ.
- ಸಮರಭ್ಯಾಸದಲ್ಲಿ ಉಭಯ ದೇಶಗಳ ಸೇನಾ ಪಡೆಗಳು ತಮ್ಮ ಅನುಭವ ಹಾಗೂ ಕೌಶಲ್ಯವನ್ನು ಹಂಚಿಕೊಳ್ಳುವ ಮೂಲಕ ಎರಡು ದೇಶಗಳ ನಡುವಿನ ಸ್ನೇಹ ಸಂಬಂದ ಬಲಗೊಳಿಸಲು ನೆರವಾಗಲಿವೆ.

**ಹಿನ್ನಲೆ**:

- ಸೂರ್ಯ ಕಿರಣ್ ಸಮರಭ್ಯಾಸ ಭಾರತ ಮತ್ತು ನೇಪಾಳ ಸೇನಾ ಪಡೆಗಳ ನಡುವೆ ವಾರ್ಷಿಕ ಎರಡು ಬಾರಿ ನಡೆಯುವ ಸಮರಭ್ಯಾಸ. ಸೂರ್ಯ ಕಿರಣ್ ಸಮರಭ್ಯಾಸದ 10ನೇ ಆವೃತಿ ಕಳೆದ ನವೆಂಬರ್ 2016 ರಲ್ಲಿ ನೇಪಾಳದ ಸಲ್ಜಹಂಡಿಯಲ್ಲಿ ನಡೆದಿತ್ತು.

## <u>ಹಿಮಾಚಲ ಪ್ರದೇಶದಲ್ಲಿ ಭಾರತ-ಒಮನ್ ಜಂಟಿ ಸಮರಭ್ಯಾಸ ಅಲ್-ನಗಹ್-II 2017</u>



ಭಾರತ ಮತ್ತು ಒಮನ್ ನಡುವಿನ ಜಂಟಿ ಸಮರಭ್ಯಾಸ್ ಅಲ್-ನಗಹ್-II, 2017 ಹಿಮಾಚಲ ಪ್ರದೇಶದ ದೌಲಧರ್ ಶ್ರೇಣಿ ಪ್ರದೇಶದಲ್ಲಿ ಜರುಗಿತು. ಉಭಯ ದೇಶಗಳ ನಡುವೆ ಮಿಲಿಟರಿ ಸಂಬಂಧವನ್ನು ಬಲಪಡಿಸುವುದು ಸಮರಭ್ಯಾಸದ ಧ್ಯೇಯವಾಗಿದೆ. ಅಲ್-ನಗಹ್-I ಸಮರಭ್ಯಾಸ ಒಮೆನ್ ನ ಮಸ್ಕಟ್ ನಲ್ಲಿ 2015 ರಲ್ಲಿ ಆಯೋಜಿಸಲಾಗಿತ್ತು.

**ಪ್ರಮುಖಾಂಶಗಳು**:

- ಒಳನುಸುಳುವಿಕೆ ಹಾಗೂ ಭಯೋತ್ಪಾದನೆಯನ್ನು ಹತ್ತಿಕ್ಕುವ ಕಾರ್ಯಾಚರಣೆಯನ್ನು ಉಭಯ ದೇಶಗಳ ಸೇನಾ ಪಡೆಗಳು ಸಮರಭ್ಯಾಸದಲ್ಲಿ ತಾಲೀಮು ನಡೆಸಲಿವೆ. ಒಟ್ಟು 14 ದಿನಗಳ ಕಾಲ ಸಮರಭ್ಯಾಸ ನಡೆಯಲಿದೆ.
- ಸುಮಾರು 60 ಮಿಲಿಟರಿ ಪಡೆಗಳು ಸಮರಭ್ಯಾಸದಲ್ಲಿ ಭಾಗವಹಿಸಲಿವೆ.

**<u>ಏಷ್ಯಾ-ಫೆಸಿಫಿಕ್ ರಾಷ್ಟ್ರಗಳ ಪೈಕಿ ಭಾರತ ಅತ್ಯಂತ ಭ್ರಷ್ಟ ರಾಷ್ಟ್ರ: ಸಮೀಕ್ಷೆ</u>**



ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಇತ್ತೀಚಿನ ವರದಿಯ ಪ್ರಕಾರ ಏಷ್ಯಾ ಪೆಸಿಫಿಕ್ ರಾಷ್ಟ್ರಗಳಲ್ಲಿ ಭಾರತದಲ್ಲೇ ಹೆಚ್ಚು ಭ್ರಷ್ಟಾಚಾರವಿದೆ ಎನ್ನಲಾಗಿದೆ. ಜುಲೈ 2015 ರಿಂದ ಜನವರಿ 2017ರವರೆಗೆ ನಡೆಸಲಾದ ಸಮೀಕ್ಷೆಯಲ್ಲಿ 16 ಏಷ್ಯಾ-ಫೆಸಿಫಿಕ್ ರಾಷ್ಟ್ರಗಳ ಪೈಕಿ ಭ್ರಷ್ಟಾಚಾರದಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಸರಿಸುಮಾರು 21000 ಜನರನ್ನು ಈ ವಲಯದಲ್ಲಿ ಸಮೀಕ್ಷೆಗೆ ಒಳಪಡಿಸಲಾಗಿದ್ದು, ಪ್ರತಿ ನಾಲ್ವರಲ್ಲಿ ಒಬ್ಬರು ಮೂಲಭೂತ ಸೇವೆಗಳಿಗೆ ಲಂಚ ಕೊಡಲೇಬೇಕಾದ ಪರಿಸ್ಥಿತಿಯಿದೆ.

**ಪ್ರಮುಖಾಂಶಗಳು**:

- **ಅತಿ ಹೆಚ್ಚು ಭ್ರಷ್ಟಾಚಾರವಿರುವ ರಾಷ್ಟ್ರಗಳು**: ಭಾರತದಲ್ಲಿ ಸಮೀಕ್ಷೆಗೆ ಒಳಪಡಿಸಲಾದ ಗುಂಪುಗಳ ಪೈಕಿ ಶೇ 69% ರಷ್ಟು ಜನರು ಲಂಚ ನೀಡಿರುವುದಾಗಿ ಹೇಳಿದ್ದಾರೆ. ನಂತರದ ಸ್ಥಾನದಲ್ಲಿ ವಿಯೆಟ್ನಾಂ (ಶೇ 65%), ಥಾಯ್ಲೆಂಡ್ (ಶೇ 41%) ಮತ್ತು ಪಾಕಿಸ್ತಾನ (ಶೇ 40%). ಚೀನಾದಲ್ಲಿ ಶೇ 26% ರಷ್ಟು ಅತಿ ಕಡಿಮೆ ವರದಿಯಾಗಿದೆ.
- **ಅತಿ ಕಡಿಮೆ ಭ್ರಷ್ಟಾಚಾರವಿರುವ ರಾಷ್ಟ್ರಗಳು:** ಜಪಾನ್ (ಶೇ 0.2%), ದಕ್ಷಿಣ ಕೊರಿಯಾ ಮತ್ತು ಆಸ್ಟ್ರೇಲಿಯಾ (ಶೇ 3%) ಮತ್ತು ತೈವಾನ್ ಶೇ 6%.
- **ಭಾರತಕ್ಕೆ ಸಂಬಂಧಿಸಿದಂತೆ**: ಭಾರತದಲ್ಲಿ ಪ್ರತಿ 10 ಜನರಲ್ಲಿ 7 ಜನರು ಸಾರ್ವಜನಿಕ ಸೇವೆಯನ್ನು ಪಡೆದುಕೊಳ್ಳುವಾಗ ಲಂಚ ನೀಡುತ್ತಿರುವುದಾಗಿ ಹೇಳಿದ್ದಾರೆ.
- **ಶೇ 46**-60% ಜನರು ಸಾರ್ವಜನಿಕ ಸೇವೆಗಳಾದ ಸರ್ಕಾರಿ ಶಾಲೆ, ಆಸ್ಪತ್ರೆ, ಇತರೆ ಅನುಮತಿ ಪಡೆಯುವ ವೇಳೆ ಲಂಚವನ್ನು ನೀಡುತ್ತಿದ್ದಾರೆ.
- **ಸಾಂಸ್ಥಿಕವಾಗಿ**: ಪೊಲೀಸ್ ಇಲಾಖೆ ಅತ್ಯಂತ ಭ್ರಷ್ಟಾಚಾರ ಹೊಂದಿರುವ ಇಲಾಖೆ ಎನ್ನಲಾಗಿದೆ. ಐದು ಜನರ ಪೈಕಿ ಇಬ್ಬರು ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ವರದಿ ನೀಡಿದ್ದಾರೆ.

**ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್:**

ಇದೊಂದು ಅಂತಾರಾಷ್ಟ್ರೀಯ ಸರ್ಕಾರೇತರ ಸಂಸ್ಥೆಯಾಗಿದ್ದು, ಜರ್ಮನಿಯ ಬರ್ಲಿನ್ ನಲ್ಲಿದೆ. ಪ್ರತಿ ವರ್ಷ ಈ ಸಂಸ್ಥೆ ಗ್ಲೋಬಲ್ ಕರ್ಪಶನ್ ಬರೋಮೀಟರ್ ಹಾಗೂ ಕರ್ಪಶನ್ ಪರ್ಸೆಪಶನ್ ಇಂಡೆಕ್ಸ್ ಹೊರತರುತ್ತಿದೆ.

## ಭಾರತ ಮತ್ತು ವಿಶ್ವಸಂಸ್ಥೆ ಮಹಿಳಾ ಸಬಲೀಕರಣ ನಡುವಿನ ಒಪ್ಪಂದಕ್ಕೆ ಕೇಂದ್ರ ಸಂಪುಟ ಒಪ್ಪಿಗೆ

ಭಾರತ ಮತ್ತು ವಿಶ್ವ ಸಂಸ್ಥೆ ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣ (UN-Women) ನಡುವಿನ ಒಪ್ಪಂದವನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಒಪ್ಪಂದ ಅನ್ವಯ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ಹಾಗೂ ಯುಎನ್-ವುಮೆನ್ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಪರಸ್ಪರ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ.

**ಪ್ರಮುಖಾಂಶಗಳು**:

- ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಲಿಂಗ ಸಮಾನತೆ ಕಾಪಾಡಲು ಅಗತ್ಯವಿರುವ ತಾಂತ್ರಿಕ ಬೆಂಬಲವನ್ನು ಪಂಚಾಯತ್ ರಾಜ್ ಸಚಿವಾಲಯಕ್ಕೆ ನೀಡುವ ಉದ್ದೇಶವನ್ನು ಒಪ್ಪಂದ ಹೊಂದಿದೆ.
- ಲಿಂಗ ಪ್ರತಿಕ್ರಿಯಾಶೀಲ ಆಡಳಿತವನ್ನು ಉತ್ತೇಜಿಸಲು ನಿಯಮ ಹಾಗೂ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ಹಾಗೂ ಯುಎನ್-ವುಮೆನ್ ಕೈಜೋಡಿಸಲಿವೆ.
- MoPR ಮತ್ತು ಯುಎನ್ ವುಮೆನ್ ಜಂಟಿಯಾಗಿ ಗುರುತಿಸಲಾಗಿರುವ ನಿರ್ದಿಷ್ಟ ಚಟುವಟಿಕೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ ಫಲಿತಾಂಶಗಳು ಸಾಧಿಸಲು ಒಪ್ಪಂದ ಅನುಕೂಲ ಮಾಡಲಿದೆ.
- ಒಪ್ಪಂದದಡಿ ಗುರುತಿಸಲಾಗಿರುವ ಚಟುವಟಿಕೆಗಳನ್ನು ಆರು ರಾಜ್ಯಗಳಲ್ಲಿ ಜಿಲ್ಲಾ ಹಾಗೂ ಜಿಲ್ಲಾ ಮಟ್ಟಕ್ಕಿಂತ ಕೆಳಹಂತಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಆರು ರಾಜ್ಯಗಳೆಂದರೆ ಒಡಿಶಾ, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಣ, ರಾಜಸ್ಥಾನ ಮತ್ತು ಮಧ್ಯ ಪ್ರದೇಶ.

## ಶತ್ರು ಆಸ್ತಿ (ತಿದ್ದುಪಡಿ ಮತ್ತು ಪರಿಷ್ಕರಣೆ) ಮಸೂದೆ-2016ಗೆ ಸಂಸತ್ತು ಅಂಗೀಕಾರ



ಶತ್ರು ಆಸ್ತಿ ಮಸೂದೆ (Enemy Property Bill) 2016ಗೆ ಸಂಸತ್ತಿನಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಲಾಗಿದೆ. ಈ ಮಸೂದೆಯು ಶತ್ರು ಆಸ್ತಿ ಕಾಯಿದೆ, 1968ಕ್ಕೆ ತಿದ್ದುಪಡಿ ತರಲಿದೆ. ಅಲ್ಲದೇ ರಾಷ್ಟ್ರಪತಿಯವರು ಐದು ಬಾರಿ ಹೊರಡಿಸಿದ್ದ ಸುಗ್ರೀವಾಜ್ಞೆ ಸಹ ತೆರವಾಗಲಿದೆ.

**ಹಿನ್ನಲೆ:**

ಲೋಕಸಭೆಯಲ್ಲಿ ಈಗಾಗಲೇ ಅನುಮೋದನೆ ನೀಡಲಾಗಿತ್ತು. ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯ ಸಭೆ ಕೆಲವು ಶಿಫಾರಸ್ಸುಗಳನ್ನು ಮಾಡಿತ್ತು. ಈ ತಿದ್ದುಪಡಿಗಳನ್ನು ಲೋಕಸಭೆಯಲ್ಲಿ ಅಳವಡಿಸಿಕೊಂಡು ಮಸೂದೆಯನ್ನು ಅಂಗೀಕರಿಸಲಾಗಿದೆ.

**ಮಸೂದೆಯ ಪ್ರಮುಖಾಂಶಗಳು:**

- **ಶತ್ರು ಆಸ್ತಿ ಬಗ್ಗೆ ವ್ಯಾಖ್ಯಾನ**: ಮಸೂದೆಯಲ್ಲಿ ಶತ್ರು ಆಸ್ತಿ ಎಂದರೆ ಏನು ಎಂದು ವಿವರಿಸಲಾಗಿದೆ. ಶತ್ರುಗಳ ಪರವಾಗಿ ಯಾವುದೇ ಆಸ್ತಿಯನ್ನು ಸಂಬಂಧಿಕರು ಅಥವಾ ಸಂಸ್ಥೆ ನೋಡಿಕೊಳ್ಳುತ್ತಿದ್ದರೆ ಅದನ್ನು ಶತ್ರು ಆಸ್ತಿ ಎಂದು ಪರಿಗಣಿಸಲಾಗುವುದು. ಶತ್ರು ಎಂದರೆ 1962 ಭಾರತ-ಪಾಕ್ ಯುದ್ಧದ ನಂತರ ಭಾರತವನ್ನು ಬಿಟ್ಟು ಪಾಕಿಸ್ತಾನ ಮತ್ತು ಚೀನಾ ದೇಶದಲ್ಲಿ ನೆಲೆಸಿರುವವರು.
- **ಶತ್ರು ಆಸ್ತಿಯ ಮೇಲಿನ ಹಕ್ಕು**: ಮಸೂದೆಯ ಪ್ರಕಾರ ಶತ್ರುಗಳ ಸಂಬಂಧಿಕರು ಅಥವಾ ಅವರ ಪರವಾಗಿ ಯಾರು ನೋಡಿಕೊಳ್ಳುತ್ತಿರುತ್ತಾರೋ ಅವರಿಗೆ ಇನ್ನು ಮುಂದೆ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಈ ಆಸ್ತಿಗಳನ್ನು ಸರ್ಕಾರ ತನ್ನ ವಶಕ್ಕೆ ಪಡೆದುಕೊಳ್ಳಲಿದೆ. ಇದಕ್ಕಾಗಿ ಕೇಂದ್ರ ಸರ್ಕಾರದ ಅಡಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗುವುದು.

**ಭಾರತ-ಬ್ರೆಜಿಲ್ ಸಾಮಾಜಿಕ ಭದ್ರತೆ ಒಪ್ಪಂದಕ್ಕೆ ಅನುಮೋದನೆ**



ಭಾರತ ಮತ್ತು ಬ್ರೆಜಿಲ್ ನಡುವಿನ ಸಾಮಾಜಿಕ ಭದ್ರತೆ ಒಪ್ಪಂದಕ್ಕೆ ಉಭಯ ದೇಶಗಳು ಅನುಮೋದನೆ ನೀಡಿವೆ. 2018ರ ಪ್ರಾರಂಭದಲ್ಲಿ ಈ ಒಪ್ಪಂದ ಜಾರಿಗೆ ಬರಲಿದೆ. ಬ್ರಿಕ್ಸ್ ರಾಷ್ಟ್ರವೊಂದರ ಜೊತೆ ಭಾರತ ಇಂತಹ ಒಪ್ಪಂದಕ್ಕೆ ಸಹಿ ಹಾಕುತ್ತಿರುವುದು ಇದೇ ಮೊದಲು. ಈ ಒಪ್ಪಂದ ಗೋವಾದಲ್ಲಿ ನಡೆದ 8ನೇ ಬ್ರಿಕ್ಸ್ ಶೃಂಗಸಭೆಯ ಫಲವೆಂದು ಬಣ್ಣಿಸಲಾಗಿದೆ.


**ಒಪ್ಪಂದದ ಪ್ರಮುಖಾಂಶಗಳು:**

- ತಮ್ಮ ದೇಶಗಳಿಂದ ಬೇರ್ಪಟ್ಟು ಎರಡು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕೊಡುಗೆಯಿಂದ ವಿನಾಯಿತಿ ನೀಡಲಾಗಿದೆ. ತಮ್ಮ ಸ್ವಂತ ದೇಶದಲ್ಲಿ ಸಾಮಾಜಿಕ ಭದ್ರತೆಗೆ ಕೊಡುಗೆ ನೀಡುವವರೆಗೆ ಮಾತ್ರ ಈ ವಿನಾಯಿತಿ ಜಾರಿಯಲ್ಲಿರುತ್ತದೆ.
- ಉಭಯ ದೇಶಗಳ ಪ್ರಜೆಗಳಿಗೆ ಸಮಾನ ಹಕ್ಕು ಮತ್ತು ನಿರ್ಬಂಧಗಳನ್ನು ವಿಧಿಸಲಾಗಿದೆ.

**ಹಿನ್ನಲೆ:**

ಭಾರತ ಇಲ್ಲಿಯವರೆಗೆ ಒಟ್ಟು 18 ರಾಷ್ಟ್ರಗಳೊಂದಿಗೆ ಸಾಮಾಜಿಕ ಭದ್ರತಾ ಒಪ್ಪಂದಕ್ಕೆ ಸಹಿ ಹಾಕಿದೆ. ಈ ರಾಷ್ಟ್ರಗಳೆಂದರೆ ಆಸ್ಟ್ರೇಲಿಯಾ, ಬೆಲ್ಜಿಯಂ, ಆಸ್ಟ್ರೀಯಾ, ಕೆನಡಾ, ಡೆನ್ಮಾರ್ಕ್, ಫಿನ್ಲ್ಯಾಂಡ್, ಝೆಜ್ ರಿಪಬ್ಲಿಕ್, ಫ್ರಾನ್ಸ್, ಜರ್ಮನಿ, ಜಪಾನ್, ಲುಕ್ಸಂಬರ್ಗ್, ಹಂಗೇರಿ, ನೆದರ್ ಲ್ಯಾಂಡ್, ಪೋರ್ಚುಗಲ್, ಸ್ವೀಡನ್, ನಾರ್ವೆ, ಸ್ವಿಟ್ಜರ್ಲ್ಯಾಂಡ್ ಮತ್ತು ದಕ್ಷಿಣ ಕೊರಿಯ.

## ವಿಶ್ವಸಂಸ್ಥೆಗೆ ಭಾರತ ನೀಡುವ ದೇಣಿಗೆಯಲ್ಲಿ ಶೇ 55% ಹೆಚ್ಚಳ



ವಿಶ್ವಸಂಸ್ಥೆಯ ನಿಯಮಿತ ಹಾಗೂ ಶಾಂತಿ ಪಾಲನೆ ಬಜೆಟ್ ಗೆ ಭಾರತ ನೀಡುವ ದೇಣಿಗೆಯಲ್ಲಿ ಭಾರಿ ಹೆಚ್ಚಳವಾಗಿದೆ. 2015-16ನೇ ಸಾಲಿನಲ್ಲಿ ಭಾರತ ವಿಶ್ವಸಂಸ್ಥೆಗೆ ರೂ 256 ಕೋಟಿ ದೇಣಿಗೆ ನೀಡಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 55% ಹೆಚ್ಚಳವಾಗಿದೆ. 2014-15 ರಲ್ಲಿ ಭಾರತ 157 ಕೋಟಿಯನ್ನು ನೀಡಿತ್ತು. ಈ ಮಾಹಿತಿಯನ್ನು ವಿದೇಶಾಂಗ ವ್ಯವಹಾರ ಸಚಿವೆ ಸುಷ್ಮಾ ಸ್ವರಾಜ್ ಅವರು ಲೋಕಸಭೆಗೆ ತಿಳಿಸಿದ್ದಾರೆ. ಇದೇ ಅವಧಿಯಲ್ಲಿ ರೂ 22 ಕೋಟಿ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಗಳಿಗೆ ಭಾರತ ವೈಯುಕ್ತಿಕವಾಗಿ ದೇಣಿಗೆಯನ್ನು ನೀಡಿದೆ.

**ವಿಶ್ವಸಂಸ್ಥೆಗೆ ದೇಣಿಗೆ ಹೇಗೆ ನೀಡಲಾಗುತ್ತದೆ?**

- ವಿಶ್ವಸಂಸ್ಥೆಯ ನಿಯಮಿತ ಹಾಗೂ ಶಾಂತಿ ಪಾಲನ ಕಾರ್ಯಾಚರಣೆಗಳಿಗೆ ಸದಸ್ಯ ರಾಷ್ಟ್ರಗಳು ಕಡ್ಡಾಯವಾಗಿ ನಿಗದಿತ ದೇಣಿಗೆಯನ್ನು ನೀಡಬೇಕು.
- ಎಷ್ಟು ಮೊತ್ತವನ್ನು ನೀಡಬೇಕು ಎಂಬದನ್ನು ಆ ರಾಷ್ಟ್ರದ ಸಾಮರ್ಥ್ಯವನ್ನು ಅನುಸರಿಸಿ ನಿಗದಿಪಡಿಸಲಾಗುತ್ತದೆ.
- ರಾಷ್ಟ್ರದ ಒಟ್ಟಾರೆ ಆದಾಯವನ್ನು ಜಾಗತಿಕ ಮಟ್ಟದ ಆದಾಯಕ್ಕೆ ಹೋಲಿಸಿ ದೇಶದ ಸಾಮರ್ಥ್ಯವನ್ನು ಅಳೆಯಲಾಗುವುದು.

## ಮಹಿಳಾ ಸಂಸದರ ಪ್ರಮಾಣ: ಭಾರತಕ್ಕೆ 148ನೇ ಸ್ಥಾನ



ಇತ್ತೀಚೆಗೆ ಬಿಡುಗಡೆಗೊಂಡ 2017 ರಾಜಕೀಯದಲ್ಲಿ ಮಹಿಳೆಯರು ವರದಿಯಲ್ಲಿ ವಿಶ್ವದಲ್ಲಿ ಮಹಿಳಾ ಸಂಸದರ ಸಂಖ್ಯೆಯಲ್ಲಿ ಭಾರತ 148ನೇ ಸ್ಥಾನ ಹೊಂದಿದೆ. ವಿಶ್ವಸಂಸ್ಥೆ ವುವೆನ್ ಹಾಗೂ ಇಂಟರ್-ಪಾರ್ಲಿಯಮೆಂಟರಿ ಯೂನಿಯನ್ ಈ ವರದಿಯನ್ನು ಬಿಡುಗಡೆಗೊಳಿಸಿದೆ.

**ವರದಿಯ ಪ್ರಮುಖಾಂಶಗಳು:**

- 2015 ರಿಂದ ಜಾಗತಿಕವಾಗಿ ಸಂಸತ್ತು ಹಾಗೂ ಕಾರ್ಯನಿರ್ವಾಹಕ ಸರ್ಕಾರದಲ್ಲಿ ಮಹಿಳೆಯರ ಪಾಲು ಸ್ಥಿರವಾಗಿದ್ದು, ಗಮನಾರ್ಹ ಬದಲಾವಣೆ ಆಗಿಲ್ಲವೆಂದು ವರದಿಯಲ್ಲಿ ಹೇಳಲಾಗಿದೆ.
- **ಟಾಪ್ ಹತ್ತು ರಾಷ್ಟ್ರಗಳು**: ಹೆಚ್ಚು ಮಹಿಳಾ ಸಂಸದರನ್ನು ಒಳಗೊಂಡಿರುವ ಟಾಪ್ ಹತ್ತು ರಾಷ್ಟ್ರಗಳೆಂದರೆ ರಾವಂಡ, ಬೊಲಿವಿಯಾ, ಕ್ಯೂಬಾ, ಐಸ್ ಲ್ಯಾಂಡ್, ನಿಕಾರಗುವ, ಸ್ವೀಡನ್, ಸೆನೆಗಲ್, ಮೆಕ್ಸಿಕೋ, ಫಿನ್ಲ್ಯಾಂಡ್ ಮತ್ತು ದಕ್ಷಿಣ ಆಫ್ರಿಕಾ.
- ಭಾರತದಲ್ಲಿ ಲೋಕಸಭೆಯಲ್ಲಿ 542 ಮಂದಿ ಸದಸ್ಯರಲ್ಲಿ 64 ಮಂದಿ ಮಹಿಳಾ ಸಂಸದರು ಇರುವ ಮೂಲಕ ಶೇಕಡಾ 11.8ರಷ್ಟು ಮತ್ತು ರಾಜ್ಯಸಭೆಯ 245 ಮಂದಿ ಸದಸ್ಯರ ಪೈಕಿ 27 ಮಂದಿ ಮಹಿಳೆಯರಿದ್ದು ಅವರ ಪ್ರಮಾಣ ಶೇಕಡಾ 11ರಷ್ಟಿದೆ.

- ಮಹಿಳಾ ಸಚಿವರ ವಿಚಾರ ಬಂದಾಗ ಭಾರತ 88ನೇ ಸ್ಥಾನದಲ್ಲಿದ್ದು, ಸಂಪುಟದಲ್ಲಿ ಐವರು ಅಥವಾ ಶೇಕಡಾ 18.5ರಷ್ಟು ಮಹಿಳಾ ಸಚಿವೆಯರಿದ್ದಾರೆ.
- ಆದರೂ ಭಾರತದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ ಇಬ್ಬರು ಮಹಿಳೆಯರು ಪ್ರಮುಖ ಸ್ಥಾನ ಹೊಂದಿದ್ದಾರೆ. ಸುಮಿತ್ರಾ ಮಹಾಜನ್ ಸ್ಪೀಕರ್ ಆದರೆ ಸುಷ್ಮಾ ಸ್ವರಾಜ್ ವಿದೇಶಾಂಗ ಸಚಿವೆಯಾಗಿದ್ದಾರೆ.
- 2015ರ ಅಂಕಿಅಂಶ ಪ್ರಕಾರ ಸಂಸತ್ತಿನಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಶೇಕಡಾ 22.6 ಇದ್ದರೆ, 2016ರಲ್ಲಿ ಶೇಕಡಾ 23.3 ಆಗಿದೆ. ವಿಶ್ವದ ಮಹಿಳಾ ಸಂಸದರ ಅರ್ಧದಷ್ಟು ಭಾರತದಲ್ಲಿದ್ದಾರೆ.

## 2030ಕ್ಕೆ ಕ್ಷಯರೋಗ ನಿರ್ಮೂಲನೆ ಮಾಡುವ ವಿಶ್ವ ಆರೋಗ್ಯ ಸಂಸ್ಥೆಯ ಕರೆಗೆ ಭಾರತ ಸಹಿ

World Health Organization

ವಿಶ್ವಸಂಸ್ಥೆ-ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ 2030ರ ವೇಳೆಗೆ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ವಿಶ್ವ ಆರೋಗ್ಯ ಸಂಸ್ಥೆಯ ಕರೆಗೆ (Call to End Tuberculosis by 2030) ಭಾರತ ಹಾಗೂ ಇತರೆ ರಾಷ್ಟ್ರಗಳು ಸಹಿ ಹಾಕಿವೆ. ನವದೆಹಲಿಯಲ್ಲಿ ಕ್ಷಯರೋಗ ನಿರ್ಮೂಲನೆ ಸಲುವಾಗಿ ನಡೆದ ಎರಡು ದಿನಗಳ ಸಭೆಯಲ್ಲಿ ಭಾಗವಹಿಸಿದ್ದ ವಿಶ್ವಸಂಸ್ಥೆ-ಆಗ್ನೇಯ ಏಷ್ಯಾ ರಾಷ್ಟ್ರಗಳ ಆರೋಗ್ಯ ಸಚಿವರ ಸಭೆಯಲ್ಲಿ ಸಹಿ ಮಾಡಲಾಯಿತು.

- 2030ರ ವೇಳಗೆ ವಿಶ್ವಸಂಸ್ಥೆ ಆಗ್ನೇಯ ಏಷ್ಯಾ ವಲಯ(WHO-SEARO)ವನ್ನು ಕ್ಷಯರೋಗದಿಂದ ಮುಕ್ತಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಲಾಯಿತು.
- ಕ್ಷಯರೋಗ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿ ಹಾಗೂ ಸಂಪನ್ಮೂಲ ವಿನಿಮಯಕ್ಕೆ ಸಂಬಂಧಿಸಿದಂತೆ "ವಲಯ ಅನುಷ್ಠಾನ ನಿಧಿ"ಯನ್ನು ಸ್ಥಾಪಿಸಲು ತೀರ್ಮಾನ ಕೈಗೊಳ್ಳಲಾಯಿತು.
- 2030ರ ವೇಳಗೆ ಜಾಗತಿಕ ಮಟ್ಟದಲ್ಲಿ ಕ್ಷಯರೋಗದಿಂದಾಗುವ ಮರಣ ಪ್ರಮಾಣವನ್ನು ಶೇ 90% ಹಾಗೂ ಹೊಸ ಪ್ರಕರಣಗಳನ್ನು ಶೇ 80% ಕಡಿಮೆಗೊಳಿಸುವ ಗುರಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಹೊಂದಿದೆ.

**ಹಿನ್ನಲೆ**:

ಜಗತ್ತಿನ ಅರ್ಧದಷ್ಟು ಕ್ಷಯರೋಗ ಪ್ರಕರಣಗಳು ವಿಶ್ವಸಂಸ್ಥೆ-ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಕಂಡುಬಂದಿವೆ. ಈ ಭಾಗದ ಆರು ದೇಶಗಳಾದ ಬಾಂಗ್ಲದೇಶ, ದಕ್ಷಿಣ ಕೊರಿಯಾ, ಭಾರತ, ಇಂಡೋನೇಷಿಯಾ, ಮಯನ್ಮಾರ್ ಮತ್ತು ಥಾಯ್ಲೆಂಡ್ ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಕ್ಷಯರೋಗ ಪ್ರಕರಣಗಳನ್ನು ಹೊಂದಿರುವ 30 ರಾಷ್ಟ್ರಗಳ ಪಟ್ಟಿಯಲ್ಲಿವೆ.

- ವಿಶ್ವಸಂಸ್ಥೆ-ಆಗ್ನೇಯ ಏಷ್ಯಾ ರಾಷ್ಟ್ರಗಳ ವಲಯ ಭೂತಾನ್, ಬಾಂಗ್ಲದೇಶ, ದಕ್ಷಿಣ ಕೊರಿಯಾ, ಭಾರತ, ಇಂಡೋನೇಷಿಯಾ, ಮಯನ್ಮಾರ್, ಮಾಲ್ಡೀವ್ಸ್, ನೇಪಾಳ, ಶ್ರೀಲಂಕಾ, ಥಾಯ್ಲೆಂಡ್ ಮತ್ತು ತಿಮೊರ್-ಲೆಸ್ಟೆ ರಾಷ್ಟ್ರಗಳನ್ನು ಒಳಗೊಂಡಿದೆ.

## ಮಾರ್ಚ್ 23: ವಿಶ್ವ ಪವನಶಾಸ್ತ್ರ ದಿನ



ವಿಶ್ವ ಪವನಶಾಸ್ತ್ರ ದಿನವನ್ನು ಮಾರ್ಚ್ 23 ರಂದು ಪ್ರತಿ ವರ್ಷ ಆಚರಿಸಲಾಗುತ್ತದೆ. 1950 ರಲ್ಲಿ ವಿಶ್ವ ಪವನಶಾಸ್ತ್ರ ಸಂಸ್ಥೆಯನ್ನು ಸ್ಥಾಪಿಸಿದ ಸ್ಮರಣಾರ್ಥ ಈ ದಿನವನ್ನು ವಿಶ್ವ ಪವನಶಾಸ್ತ್ರ ದಿನವೆಂದು ಆಚರಿಸಲಾಗುತ್ತದೆ.

**2017 ಧ್ಯೇಯವಾಕ್ಯ:**

- "ಮೋಡಗಳನ್ನು ಅರ್ಥಮಾಡಿಕೊಳ್ಳುವುದು (Understanding Clouds)" ಇದು ಈ ವರ್ಷದ ಧ್ಯೇಯವಾಕ್ಯ. ವಾತಾವರಣ ಹಾಗೂ ಜಲ ಸಂಪನ್ಮೂಲ ನಿರ್ವಹಣೆಯಲ್ಲಿ ಮೋಡಗಳು ಹೇಗೆ ಪ್ರಾಮುಖ್ಯವಾಗಿವೆ ಎನ್ನುವುದನ್ನು ಸಾರುವುದು ಇದರ ಉದ್ದೇಶ. ಮೋಡಗಳ ಜಲ ಚಕ್ರದಲ್ಲಿ ಪ್ರಮುಖ ಪಾತ್ರವಹಿಸುವ ಮೂಲಕ ಜಲ ಸಂಪನ್ಮೂಲಕ್ಕೆ ಆಗಾಧ ಕೊಡುಗೆಯನ್ನು ನೀಡುತ್ತಿವೆ.
- ಈ ದಿನದ ಅಂಗವಾಗಿ ವಿಶ್ವ ಪವನಶಾಸ್ತ್ರ ಸಂಸ್ಥೆ "ಅಂತಾರಾಷ್ಟ್ರೀಯ ಮೋಡ ಅಟ್ಲಾಸ್" ಅನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಇತ್ತೀಚೆಗೆ ಹೆಸರಿಸಲಾಗಿರುವ ಮೋಡಗಳು ಸೇರಿದಂತೆ ನೂರಾರು ಬಗೆಯ ಮೋಡಗಳ ಚಿತ್ರಗಳನ್ನು ಒಳಗೊಂಡಿದೆ.
- ಅಲ್ಲದೇ ಇತರೆ ಹವಾಮಾನ ವಿದ್ಯಮಾನಗಳಾದ ಸಿಡಿಲು, ಕಾಮನಬಿಲ್ಲು, ಹಿಮಪಾತಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

**ವಿಶ್ವ ಪವನಶಾಸ್ತ್ರ ಸಂಸ್ಥೆ:**

- ವಿಶ್ವ ಪವನಶಾಸ್ತ್ರ ಸಂಸ್ಥೆ ಒಂದು ಅಂತಾರಾಷ್ಟ್ರೀಯ ಸಂಸ್ಥೆಯಾಗಿದ್ದು, ಹವಾಮಾನ, ವಾತಾವರಣ ಹಾಗೂ ಜಲ ಸಂಪನ್ಮೂಲಗಳ ಮಾಹಿತಿಯನ್ನು ಕ್ರೋಢಿಕರಿಸುವ ಜವಬ್ದಾರಿಯನ್ನು ಹೊಂದಿದೆ.
- ವಿಶ್ವ ಪವನಶಾಸ್ತ್ರ ಸಂಸ್ಥೆ 191 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ.
- ಇದರ ಕೇಂದ್ರ ಕಚೇರಿ ಸ್ವಿಟ್ಜರ್ಲ್ಯಾಂಡಿನ ಜಿನಿವಾದಲ್ಲಿದೆ.

## ಕ್ಯಾರಿ ಲ್ಯಾಮ್ ಹಾಂಕಾಂಗ್ ನ ಮೊದಲ ಮಹಿಳಾ ಸಿಇಓ



ಚೀನಾದ ವಿಶೇಷ ಆಡಳಿತ ಭಾಗವಾಗಿರುವ ಹಾಂಕಾಂಗ್ ನ ಮೊದಲ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ಕ್ಯಾರಿ ಲ್ಯಾಮ್ ಅವರು ನೇಮಕಗೊಂಡಿದ್ದಾರೆ. ಲ್ಯಾಮ್ ಅವರು ಜುಲೈ 1, 2017 ರಿಂದ ಅಧಿಕಾರ ವಹಿಸಿಕೊಳ್ಳಲಿದ್ದು, ಲಿಯಾಂಗ್ ಚುನ್-ಯಿಂಗ್ ಅವರ ಉತ್ತರಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

- ಮುಖ್ಯಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ನಡೆದ ಚುನಾವಣೆಯಲ್ಲಿ ಲ್ಯಾಮ್ ಅವರು 777 ಮತಗಳನ್ನು ಪಡೆದುಕೊಂಡರೆ, ಅವರ ಪ್ರತಿ ಸ್ಪರ್ಧಿ 365 ಮತಗಳನ್ನು ಪಡೆಯುವಲ್ಲಿ ಶಕ್ತರಾದರು.

- ಈ ನೇಮಕಾತಿಗೆ ಮುನ್ನ ಲ್ಯಾಮ್ ಅವರು ಹಾಂಕಾಂಗ್ ಎಸ್ಎಆರ್ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು.
- ಹಾಂಕಾಂಗ್ ನ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಂಕಾಂಗ್ ಸರ್ಕಾರದ ಪ್ರತಿನಿಧಿ ಹಾಗೂ ಮುಖ್ಯಸ್ಥರಾಗಿರಲ್ಲಿದ್ದಾರೆ.

## ಪ್ರಶಸ್ತಿಗಳು

**89ನೇ ಅಕಾಡೆಮಿ ಪ್ರಶಸ್ತಿಗಳು (ಆಸ್ಕರ್ ಪ್ರಶಸ್ತಿ) ಪ್ರಕಟ**




89ನೇ ಅಕಾಡೆಮಿ ಪ್ರಶಸ್ತಿ ಅಥವಾ ಆಸ್ಕರ್ ಪ್ರಶಸ್ತಿಯೆಂದೇ ಪ್ರಸಿದ್ಧವಾಗಿರುವ ಪ್ರಶಸ್ತಿಗಳನ್ನು ಲಾಸ್ ಏಂಜಲೀಸ್ ನ ಡಾಲ್ಬಿ ಥಿಯೇಟರ್ ನಲ್ಲಿ ವಿತರಿಸಲಾಯಿತು. ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸ್ (AMPAS) ಪ್ರಶಸ್ತಿಗಳನ್ನು ಒಟ್ಟು 24 ವಿಭಾಗಗಳಲ್ಲಿ ನೀಡುತ್ತಿದೆ. ಸಂಗೀತ ನಾಟಕ 'ಲಾ ಲಾ ಲ್ಯಾಂಡ್'' ಚಿತ್ರ ಒಟ್ಟು ಆರು ವಿಭಾಗದಲ್ಲಿ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಅತ್ಯಂತ ಹೆಚ್ಚು ಪ್ರಶಸ್ತಿಗಳನ್ನು ಗೆದ್ದ ಗೌರವಕ್ಕೆ ಪಾತ್ರವಾಯಿತು.

**ಪ್ರಶಸ್ತಿ ವಿಭಾಗ:**

- ಅತ್ಯುತ್ತಮ ಚಿತ್ರ : ಮೂನ್ ಲೈಟ್
- ಅತ್ಯುತ್ತಮ ನಟಿ: ಲಾ ಲಾ ಲ್ಯಾಂಡ್ ನಟಿ ಎಮ್ಮಾ ಸ್ಟೋನ್
- ಅತ್ಯುತ್ತಮ ನಟ : ಕ್ಯಾಸಿ ಅಫ್ಲೆಕ್ (ಮ್ಯಾಂಚೆಸ್ಟರ್ ಬೈ ದಿ ಸೀ)
- ಅತ್ಯುತ್ತಮ ನಿರ್ದೇಶನ: ಲಾ ಲಾ ಲ್ಯಾಂಡ್ ಚಿತ್ರಕ್ಕೆ ಡೇನಿಯಲ್ ಛಾಜೆಲ್
- ಅತ್ಯುತ್ತಮವಾಗಿ ಅಳವಡಿಸಿಕೊಂಡ ಚಿತ್ರ ಕಥೆ: ಮೂನ್ ಲೈಟ್
- ಅತ್ಯುತ್ತಮ ಮೂಲ ಚಿತ್ರಕಥೆ: ಮ್ಯಾಂಚೆಸ್ಟರ್ ಬೈ ದಿ ಸಿಟಿ
- ಅತ್ಯುತ್ತಮ ಡ್ಯಾಕುಮೆಂಟರಿ (ಕಿರು ಚಿತ್ರ) : ದಿ ವೈಟ್ ಹೆಲ್ಮೆಟ್ಸ್
- ಅತ್ಯುತ್ತಮ ಸಂಗೀತ (ಮೂಲ) : ಲಾ ಲಾ ಲ್ಯಾಂಡ್ (ಜಸ್ಟೀನ್ ಹರ್ವಿಟ್ಜ್)
- ಅತ್ಯುತ್ತಮ ಗೀತೆ: ಸಿಟಿ ಆಫ್ ಸ್ಟಾರ್ಸ್ : ಲಾ ಲಾ ಲ್ಯಾಂಡ್ , ಜಸ್ಟೀನ್ ಹರ್ವಿಟ್ಜ್ ಸಂಗೀತ, ಬೆನ್ಜ್ ಪಸೆಕ್ ಹಾಗೂ ಜಸ್ಟೀನ್ ಪಾಲ್ ಗೀತ ರಚನೆ
- ಅತ್ಯುತ್ತಮ ಕಿರುಚಿತ್ರ (ಲೈವ್ ಆಕ್ಷನ್) : ಸಿಂಗ್, ಕ್ರಿಸ್ಟೊಫ್ ಡೀಕ್ ಹಾಗೂ ಅನ್ನಾ ಉದ್ವಾರ್ಡಿ
- ಅತ್ಯುತ್ತಮ ಸಿನಿಮಾಟೋಗ್ರಾಫಿ: ಲಾ ಲಾ ಲ್ಯಾಂಡ್ ಚಿತ್ರ
- ಅತ್ಯುತ್ತಮ ಸಂಕಲನ : ಹಾಕ್ಸಾ ರಿಡ್ಜ್ ಚಿತ್ರ

- ಅತ್ಯುತ್ತಮ ವಿಷ್ಯುವಲ್ ಎಫೆಕ್ಟ್ : ದಿ ಜಂಗಲ್ ಬುಕ್
- ಅತ್ಯುತ್ತಮ ಪ್ರೊಡಕ್ಷನ್ ಡಿಸೈನ್: ಲಾ ಲಾ ಲ್ಯಾಂಡ್
- ಅತ್ಯುತ್ತಮ ಅನಿಮೇಷನ್ ಚಿತ್ರ: ಜೂಟೊಪಿಯಾ
- ಅತ್ಯುತ್ತಮ ವಿದೇಶಿ ಚಿತ್ರ: ದಿ ಸೇಲ್ಸ್ ಮನ್ (ಇರಾನ್)
- ಪೋಷಕ ಪಾತ್ರ ನಟಿ: ವಿಯೋಲಾ ಡೇವಿಸ್ (ಫೆನ್ಸಸ್)
- ಅತ್ಯುತ್ತಮ ಸೌಂಡ್ ಎಡಿಟಿಂಗ್ : ಅರೈವಲ್
- ಅತ್ಯುತ್ತಮ ಸೌಂಡ್ ಮಿಕ್ಸಿಂಗ್ : ಹಾಕ್ಸಾ ರಿಡ್ಜ್

**<u>2015-16ನೇ ಸಾಲಿನ ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರಶಸ್ತಿ ಪ್ರಕಟ</u>**



2015-16ನೇ ಸಾಲಿನ ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರಶಸ್ತಿ ಪ್ರಕಟವಾಗಿದ್ದು, ಹಿರಿಯ ನಟರಾದ ಜೆ.ಕೆ.ಶ್ರೀನಿವಾಸಮೂರ್ತಿ, ನಟಿ ಆದವಾನಿ ಲಕ್ಷ್ಮೀದೇವಿ, ಹಾಸ್ಯನಟ ಎಂ.ಎಸ್.ಉಮೇಶ್, ಎಸ್.ದೊಡ್ಡಣ್ಣ ಸೇರಿದಂತೆ 15 ಕಲಾವಿದರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

- ಚಲನಚಿತ್ರ ಅಕಾಡೆಮಿ ಪ್ರಶಸ್ತಿಯು 50 ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರ ಒಳಗೊಂಡಿದ್ದು, ಇದೇ ಮಾರ್ಚ್ 3 ರಂದು ಸಂಜೆ 6 ಗಂಟೆಗೆ ಪುರಭವನದಲ್ಲಿ ನಡೆಯಲಿರುವ ವಿಶೇಷ ಕಾರ್ಯಕ್ರಮದಲ್ಲಿ ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

**ಪ್ರಶಸ್ತಿ ಪುರಸ್ಕೃತರ ಪಟ್ಟಿ ಇಂತಿದೆ.**

- ಆರ್ ನಾಗೇಂದ್ರ ರಾವ್ ಪ್ರಶಸ್ತಿ: ಅಭಿನಯ ನಟ- ಜೆಕೆ ಶ್ರೀನಿವಾಸ ಮೂರ್ತಿ
- ಎಂ.ವಿ.ರಾಜಮ್ಮ ಪ್ರಶಸ್ತಿ: ಆದವಾನಿ ಲಕ್ಷ್ಮೀದೇವಿ
- ಬಾಲಕೃಷ್ಣ ಪ್ರಶಸ್ತಿ (ಹಾಸ್ಯ) : ಎಂ.ಎಸ್ ಉಮೇಶ್
- ತೂಗುದೀಪ ಶ್ರೀನಿವಾಸ್ ಪ್ರಶಸ್ತಿ(ಖಳ): ಎಸ್ ದೊಡ್ಡಣ್ಣ
- ಬಿಆರ್ ಪಂತುಲು (ನಿರ್ದೇಶನ): ಕೆ.ವಿ ರಾಜು
- ಶಂಕರ್ ಸಿಂಗ್ ಪ್ರಶಸ್ತಿ (ನಿರ್ಮಾಣ): ಸಿ.ಜಯರಾಂ
- ಬಿ ಜಯಮ್ಮ(ಪ್ರದರ್ಶನ): ಕುಮಾರ್ ಶೆಟ್ಟರ್
- ವೀರಾಸ್ವಾಮಿ ಪ್ರಶಸ್ತಿ (ಹಂಚಿಕೆ) : ಪಟೆಲ್ ಎಸ್ ಚಂದಾನಿ
- ಜಿವಿ ಅಯ್ಯರ್ ಪ್ರಶಸ್ತಿ (ಸಂಗೀತ, ಗಾಯನ): ಬಿ.ಕೆ.ಸುಮಿತ್ರಾ
- ಹುಣಸೂರು ಕೃಷ್ಣಮೂರ್ತಿ ಪ್ರಶಸ್ತಿ (ಚಿತ್ರ ಸಾಹಿತ್ಯ): ಡಾ.ಬಿ.ಎಲ್ ವೇಣು

- ಬಿ.ಎಸ್. ರಂಗ ಪ್ರಶಸ್ತಿ(ಛಾಯಾಗ್ರಾಹಣ): ಎಸ್ ವಿ ಶ್ರೀಕಾಂತ್
- ಪಂಡರೀಬಾಯಿ ಪ್ರಶಸ್ತಿ (ಪೋಷಕ) ಬಿ.ವಿ. ರಾಧಾ
- ಎಂ.ಪಿ ಶಂಕರ್ ಪ್ರಶಸ್ತಿ(ತಂತ್ರಜ್ಞಾನ): ದೇವಿ(ನೃತ್ಯ)
- ಶಂಕರ್ ನಾಗ್ ಪ್ರಶಸ್ತಿ (ಕಾರ್ಮಿಕ): ಎನ್ ಎಲ್ ರಾಮಣ್ಣ
- ಕೆ.ಎನ್. ಟೈಲರ್ ಪ್ರಶಸ್ತಿ (ಪ್ರಾದೇಶಿಕ ಭಾಷಾ ಚಿತ್ರ): ರಾಮ್ ಶೆಟ್ಟಿ

**ಟೈಮ್ಸ್ ಹೈಯರ್ ಎಜುಕೇಶನ್ ಸಂಸ್ಥೆ ಸಮೀಕ್ಷೆ: ಬೆಂಗಳೂರಿನ ಐಐಎಸ್‌ಸಿ ಗೆ 8ನೇ ಸ್ಥಾನ**



ಟೈಮ್ಸ್ ಹೈಯರ್ ಎಜುಕೇಶನ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯು ‘ಜಗತ್ತಿನ ಅತ್ಯುತ್ತಮ ಸಣ್ಣ ವಿಶ್ವವಿದ್ಯಾಲಯ’ಗಳ ಪಟ್ಟಿಯಲ್ಲಿ 8ನೇ ಸ್ಥಾನ ಗಳಿಸಿದೆ.

**ಪ್ರಮುಖಾಂಶಗಳು**:

- ಐಐಎಸ್‌ಸಿಯು 2011ರಲ್ಲಿ ಇದೇ ಸಂಸ್ಥೆ ನಡೆಸಿದ್ದ ಸಮೀಕ್ಷೆಯಲ್ಲಿ 91ರಿಂದ 100ನೇ ಸ್ಥಾನ ಗಳಿಸಿತ್ತು.
- ಕಳೆದ ವರ್ಷ ಕ್ರಮವಾಗಿ 14 ಮತ್ತು 18ನೇ ಸ್ಥಾನ ಗಳಿಸಿದ್ದ ಗುವಾಹತಿಯ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಹಾಗೂ ಪುಣೆಯ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯಗಳು ಈ ಬಾರಿ ಆ ಸ್ಥಾನ ಕಾಯ್ದುಕೊಳ್ಳುವಲ್ಲಿ ವಿಫಲವಾಗಿವೆ.
- ಭಾರತದ ಯಾವುದೇ ಉನ್ನತ ಶಿಕ್ಷಣ ಸಂಸ್ಥೆಯೂ ಜಗತ್ತಿನ ಅತ್ಯುತ್ತಮ 200 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಗಳಿಸಲು ಸಫಲವಾಗಿಲ್ಲ

**ಐಐಎಸ್ಸಿ ಬೆಂಗಳೂರು:**

ಭಾರತೀಯ ವಿಜ್ಞಾನ ಸಂಸ್ಥೆಯು (Indian Institute of Science (IISc)) ಭಾರತದ ಪ್ರಮುಖ ಸ್ನಾತಕೋತ್ತರ, ಸಂಶೋಧನೆ ಹಾಗೂ ಉಚ್ಚ ಶಿಕ್ಷಣ ಸಂಸ್ಥೆಯಾಗಿ ಹೆಸರುವಾಸಿಯಾಗಿದ್ದು, ಬೆಂಗಳೂರಿನಲ್ಲಿದೆ. ಜಮ್ಸೇಟ್ಜಿ ಟಾಟಾ ಹಾಗೂ ಮೈಸೂರಿನ ಮಹಾರಾಜ ಎಚ್.ಎಚ್ ಶ್ರೀ ಕೃಷ್ಣರಾಜ ಒಡೆಯರ್ ರವರ ಸಕ್ರಿಯ ನೆರವಿನೊಂದಿಗೆ 1909 ರಲ್ಲಿ ಸ್ಥಾಪಿಸಲಾಯಿತು. ಕೃಷ್ಣರಾಜ ಒಡೆಯರ್ 321 ಎಕರೆ (೧.೫೦ ಕಿಮೀ ಚದರಡಿ) ಭೂಮಿ ದಾನ ಮಾಡಿದರು. ಹಾಗೇ ಜೆಮ್ಶೇಟ್ಜೀ ಟಾಟಾರವರು ಐಐಎಸ್ಸಿ ಸೃಷ್ಟಿಗೆ ಹಲವಾರು ಕಟ್ಟಡಗಳ ಯೋಜನೆಯನ್ನು ನೀಡಿದರು. ಈ ಸಂಸ್ಥೆಯನ್ನು ಸ್ಥಳೀಯವಾಗಿ "ಟಾಟಾ ಇನ್ಸ್ಟಿಟ್ಯೂಟ್" ಎಂದು ಕರೆಯಲಾಗುತ್ತದೆ.

## **ಜೀವನ ಗುಣಮಟ್ಟ: ಭಾರತ ನಗರಗಳ ಪೈಕಿ ಹೈದ್ರಾಬಾದ್ ಗೆ ಮೊದಲ ಸ್ಥಾನ**



ಮರ್ಸರ್ ಕ್ವಾಲಿಟಿ ಆಫ್ ಲೀವಿಂಗ್ ಇಂಡೆಕ್ಸ್ '(Mercer Quality of Living Index)"-2017 ರಲ್ಲಿ ಜೀವನ ಗುಣಮಟ್ಟ ವಿಷಯದಲ್ಲಿ ಹೈದ್ರಾಬಾದ್ ಭಾರತದ ಅತ್ಯುತ್ತಮ ನಗರವಾಗಿ ಹೊರಹೊಮ್ಮಿದೆ. ಜಾಗತಲಿ ಮಟ್ಟದಲ್ಲಿ ಆಸ್ಟ್ರೀಯಾದ ವಿಯೆನ್ನಾ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಸತತವಾಗಿ ನಾಲ್ಕು ವರ್ಷ ವಿಯೆನ್ನಾ ಈ ಗೌರವಕ್ಕೆ ಪಾತ್ರವಾಗಿದೆ.

**ಪ್ರಮುಖಾಂಶಗಳು**:

- ಪ್ರಸ್ತುಕ ಸಾಲಿನ ಸೂಚ್ಯಂಕದಲ್ಲಿ ಯುರೋಪ್ ನ ಎಂಟು ನಗರಗಳು ಟಾಪ್ ಹತ್ತು ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿವೆ. ಅವುಗಳೆಂದರೆ ವಿಯೆನ್ನಾ (1), ಜೂರಿಚ್ (2), ಮುನಿಚ್ (4), ಡಸ್ಸೆಲ್ ಡೊರ್ಫ್ (6), ಫ್ರಾನ್ಕ್ಫರ್ಟ್ (7), ಜಿನೆವಾ (8), ಕೊಪೆನ್ ಹೆಗ್ (9) ಮತ್ತು ಬೇಸೆಲ್ (10).
- ಅಕ್ ಲ್ಯಾಂಡ್ ಮತ್ತು ವಾಂಕೊವರ್ ಟಾಪ್ ಹತ್ತು ನಗರಗಳ ಪೈಕಿ ಸ್ಥಾನ ಪಡೆದಿರುವ ಯುರೋಪೇತರ ನಗರಗಳು.
- ಏಷ್ಯಾ ಖಂಡದಲ್ಲಿ ಸಿಂಗಾಪುರ (25) ಅತಿ ಹೆಚ್ಚು ಶ್ರೇಯಾಂಕ ಪಡೆದಿರುವ ನಗರ.
- **ನಗರ ಮೂಲಸೌಕರ್ಯ ಶ್ರೇಯಾಂಕದಲ್ಲಿ** ಸಿಂಗಪುರ ಮೊದಲ ಸ್ಥಾನದಲ್ಲಿದೆ. ಫ್ರಾನ್ಕ್ಫರ್ಟ್ ಮತ್ತು ಮುನಿಚ್ ಜಂಟಿಯಾಗಿ ಎರಡನೇ ಸ್ಥಾನವನ್ನು ಪಡೆದುಕೊಂಡಿವೆ.
- ನಗರ ಮೂಲ ಸೌಕರ್ಯ ವಿಭಾಗದಲ್ಲಿ ಮುಂಬೈ (141) ಭಾರತದಲ್ಲಿ ಮೊದಲ ಸ್ಥಾನದಲ್ಲಿದೆ. ಬೆಂಗಳೂರು 177ನೇ ಸ್ಥಾನವನ್ನು ಪಡೆಯುವ ಮೂಲಕ ಕಡೆಯ ಸ್ಥಾನದಲ್ಲಿದೆ.

**ಹಿನ್ನಲೆ:**

ಮರ್ಸರ್ ಒಂದು ಜಾಗತಿಕ ಮಾನವ ಸಂಪನ್ಮೂಲ ಸಲಹಾ ಸಂಸ್ಥೆಯಾಗಿದ್ದು, ಜಗತ್ತಿನಾದ್ಯಂತ 230 ನಗರಗಳಲ್ಲಿ ಸಮೀಕ್ಷೆಯನ್ನು ನಡೆಸಿ ಸೂಚ್ಯಂಕವನ್ನು ಹೊರತರುತ್ತಿದೆ.

**ಇಂದ್ರಾಣಿ ದಾಸ್ ಗೆ ಪ್ರತಿಷ್ಠಿತ ರೀಜನರೇಷನ್ ಸೈನ್ಸ್ ಟಾಲೆಂಟ್ ಸರ್ಚ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ**



ಭಾರತೀಯ ಮೂಲದ ಅಮೆರಿಕದ ಬಾಲಕಿ ಇಂದ್ರಾಣಿ ದಾಸ್ ರವರು ಪ್ರತಿಷ್ಠಿತ ರೀಜನರೇಷನ್ ಸೈನ್ಸ್ ಟಾಲೆಂಟ್ ಸರ್ಚ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಮೆದುಳಿನ ಗಾಯಗಳು ಮತ್ತು ರೋಗಕ್ಕೆ ಚಿಕಿತ್ಸೆ ನೀಡುವುದಕ್ಕೆ ಸಂಬಂಧಪಟ್ಟ ಮಹತ್ವದ ಸಂಶೋಧನೆಗಾಗಿ ಈ ಪ್ರಶಸ್ತಿ ಲಭಿಸಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಇದೊಂದು ಮಹತ್ತರ ಸಂಶೋಧನೆ ಎನಿಸಿದೆ.

**ಪ್ರಶಸ್ತಿ ಪಡೆದ ಇತರ ಭಾರತೀಯರು**:

- ಭಾರತೀಯ ಮೂಲದ ಬಾಲಕ ಅರ್ಜುನ್ ರಮಣಿ ತೃತ್ತೀಯ ಸ್ಥಾನ ಗಳಿಸಿದ್ದಾರೆ. ಮ್ಯಾಥೆಮ್ಯಾಟಿಕಲ್ ಫೀಲ್ಡ್ ಆಫ್ ಗ್ರಾಫ್ ಥಿಯರಿ ಮತ್ತು ಕಂಪ್ಯೂಟರ್ ಪ್ರೋಗ್ರಾಮಿಂಗ್ ಆಧಾರಿತ ನೆಟ್‌ವರ್ಕ್‌ಗಳ ಕುರಿತ ಸಂಶೋಧನೆಗಾಗಿ ಈ ಗೌರವ ಲಭಿಸಿದೆ. ಈ ಪ್ರಶಸ್ತಿಯು 1.5 ಲಕ್ಷ ಡಾಲರ್ (98 ಲಕ್ಷ ರೂ.ಗಳು) ನಗದು ಬಹುಮಾನ ಹೊಂದಿದೆ.
- ಭಾರತದ ಬಾಲಕಿ ಅರ್ಚನಾ ವರ್ಮಾ ಐದನೇ ಸ್ಥಾನ ಪಡೆದುಕೊಂಡಿದ್ದಾರೆ. ಸೌರಶಕ್ತಿಯನ್ನು ಉತ್ಪಾದಿಸಬಹುದಾದ ಕಿಟಕಿಗಳಿಗೆ ಕಾರಣವಾಗುವ ಸಂಶೋಧನೆಗಾಗಿ ಈ ಪ್ರತಸ್ತಿ ಲಭಿಸಿದೆ. ಈ ಪ್ರಶಸ್ತಿಯು 90,000 ಡಾಲರ್ (58.89 ಲಕ್ಷ ರೂ.ಗಳು) ನಗದು ಬಹುಮಾನ ಪಡೆದಿದ್ದಾರೆ.
- ಪ್ರತೀಕ್ ನಾಯ್ದು (ಜೀನೋಮ್ ಮತ್ತು ಕ್ಯಾನ್ಸರ್ ಚಿಕಿತ್ಸೆ ಅಧ್ಯಯನ) ಹಾಗೂ ವೃಂದಾ ಮದನ್ (ಮಲೇರಿಯಾ ಚಿಕಿತ್ಸೆ ಸಂಶೋಧನೆ) ಕ್ರಮವಾಗಿ ಏಳು ಮತ್ತು ಒಂಭತ್ತನೇ ಸ್ಥಾನ ಪಡೆದಿದ್ದು, 50,000 ಡಾಲರ್ ಬಹುಮಾನ ಪಡೆದಿದ್ದಾರೆ. ಅಂತಿಮ ಸುತ್ತಿಗೆ ಬಂದ 40 ವಿದ್ಯಾರ್ಥಿಗಳಲ್ಲಿ ಭಾರತೀಯ ಮೂಲದ ಇತರ ಎಂಟು ವಿದ್ಯಾರ್ಥಿಗಳು ತಲಾ 25,000 ಡಾಲರ್ ನಗದು ಬಹುಮಾನ ಗೆದ್ದಿದ್ದಾರೆ.

**ಪ್ರಶಸ್ತಿಯ ಬಗ್ಗೆ**:

- ರೀಜನರೇಷನ್ ಸೈನ್ಸ್ ಟಾಲೆಂಟ್ ಸರ್ಚ್ ಸ್ಪರ್ಧೆ ಅಮೆರಿಕದ ಹಳೆಯ ವಿಜ್ಞಾನ ಸ್ಪರ್ಧೆಯಾಗಿದೆ. ಇದನ್ನು ಜ್ಯೂನಿಯರ್ ನೊಬೆಲ್ ಪ್ರಶಸ್ತಿ ಎಂದೇ ಕರೆಯಲಾಗುತ್ತದೆ.

**ಫ್ರಾನ್ಸ್ ಗಣಿತಶಾಸ್ತ್ರಜ್ಞ ವ್ಯಾಸ್ ಮೆಯೇರ್ ಗೆ ಪ್ರತಿಷ್ಠಿತ ಅಬೆಲ್ ಪ್ರಶಸ್ತಿ**



ಫ್ರಾನ್ಸ್ ನ ಪ್ರಖ್ಯಾತ ಗಣಿತಶಾಸ್ತ್ರಜ್ಞ ವ್ಯಾಸ್ ಮೆಯೇರ್ ಅವರಿಗೆ 2017ನೇ ಸಾಲಿನ ಪ್ರತಿಷ್ಠಿತ ಅಬೆಲ್ ಪ್ರಶಸ್ತಿ ಲಭಿಸಿದೆ. ಅಬೆಲ್ ಅವರ ಸಣ್ಣ ತರಂಗ ಹಾಗೂ ಅಲೆಗಳ ಗಣಿತಶಾಸ್ತ್ರೀಯ ಸಿದ್ಧಾಂತಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅಬೆಲ್ ಅವರ ಈ ಸಿದ್ಧಾಂತ ಚಿತ್ರಗಳನ್ನು ಸಂಕುಚಿತಗೊಳಿಸುವ ಹಾಗೂ ಗುರುತ್ವಾಕರ್ಷಣ ಅಲೆಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಬಳಸಲಾಗುತ್ತಿದೆ.

**ಅಬೆಲ್ ಪ್ರಶಸ್ತಿ**:

- ನಾರ್ವೆನ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಲೆಟರ್ಸ್ ಈ ಪ್ರಶಸ್ತಿಯನ್ನು ಪ್ರತಿ ವರ್ಷ ಖ್ಯಾತ ಗಣಿತಶಾಸ್ತ್ರಜ್ಞರಿಗೆ ನೀಡುತ್ತಿದೆ. ನಾರ್ವೆಯ ಖ್ಯಾತ ಗಣಿತಶಾಸ್ತ್ರಜ್ಞ ನೀಲ್ಸ್ ಹೆನ್ರಿಕ್ ಅಬೆಲ್ ಅವರ ಸ್ಮರಣಾರ್ಥ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.
- ನಾರ್ವೆ ಸರ್ಕಾರ ಈ ಪ್ರಶಸ್ತಿಯನ್ನು 2001 ರಲ್ಲಿ ಸ್ಥಾಪಿಸಿದೆ. ಈ ಪ್ರಶಸ್ತಿಯನ್ನು ಗಣಿತಶಾಸ್ತ್ರದ ನೊಬೆಲ್ ಎಂದೇ ಪರಿಗಣಿಸಲಾಗಿದೆ.
- ಪ್ರಶಸ್ತಿಯು 6 ಮಿಲಿಯನ್ ನಾರ್ವೆಯನ್ ಕ್ರೊನರ್ (600,000 ಯುರೋ) ನಗದು ಒಳಗೊಂಡಿದೆ.
- ಭಾರತೀಯ ಅಮೆರಿಕ ಮೂಲದ ಗಣಿತಶಾಸ್ತ್ರಜ್ಞ ಆರ್ ಶ್ರೀನಿವಾಸನ್ ವರಧನ್ ಅವರಿಗೆ 2007 ರಲ್ಲಿ ಈ ಪ್ರಶಸ್ತಿಯನ್ನು ನೀಡಲಾಗಿತ್ತು. ವರಧನ್ ಅವರ ಸಂಭವನೀಯ ಸಿದ್ಧಾಂತಕ್ಕೆ ಪ್ರಶಸ್ತಿ ಲಭಿಸಿದೆ.

# ಪರಿಸರ

**ಮೂರು ಅರಣ್ಯ ಸಂಶೋಧನೆ ಸಂಸ್ಥೆಗಳಿಂದ ಅಧಿಕ ಇಳುವರಿ ಸಸ್ಯ ತಳಿಗಳನ್ನು ಅಭಿವೃದ್ಧಿ**



ಇಂಡಿಯನ್ ಕೌನ್ಸಿಲ್ ಆಫ್ ಫಾರೆಸ್ಟ್ ರಿಸರ್ಚ್ ಅಂಡ್ ಎಜುಕೇಷನ್ (ICFRE), ಡೆಹ್ರಾಡೂನ್ ನ ಮೂರು ಸಂಸ್ಥೆಗಳು 20 ಅಧಿಕ ಇಳುವರಿ ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸಿವೆ. ಡೆಹ್ರಾಡೂನ್ ನ ಫಾರೆಸ್ಟ್ ರಿಸರ್ಚ್ ಇನ್ಸ್ಟಿಟ್ಯೂಟ್, ಜಬಲ್ಪುರದ ಟ್ರಾಫಿಕಲ್ ಫಾರೆಸ್ಟ್ ರಿಸರ್ಚ್ ಇನ್ಸ್ಟಿಟ್ಯೂಟ್ ಮತ್ತು ಕೊಯಮುತ್ತೂರಿನ ಇನ್ಸ್ಟಿಟ್ಯೂಟ್ ಆಫ್ ಫಾರೆಸ್ಟ್ ಜೆನೆಟಿಕ್ಸ್ ಅಂಡ್ ಟ್ರೀ ಬ್ರೀಡಿಂಗ್ ಈ ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸಿರುವ ಸಂಸ್ಥೆಗಳಾಗಿವೆ. ICFREನ ತಳಿ ಬಿಡುಗಡೆ ಸಮಿತಿ ಈ ಹೊಸ ಸಸ್ಯ ತಳಿಗಳನ್ನು ಬಿಡುಗಡೆಗೊಳಿಸಲು ಅನುಮೋದನೆ ನೀಡಿದೆ. ಈ ಹೊಸ ತಳಿಗಳನ್ನು ಈಗಾಗಲೇ ದೀರ್ಘಕಾಲದ ಕಟ್ಟುನಿಟ್ಟಾದ ಕ್ಷೇತ್ರ ಪರೀಕ್ಷೆಗಳಿಗೆ ಒಳಪಡಿಸಲಾಗಿದ್ದು, ಉತ್ತಮ ಫಲಿತಾಂಶ ಬಂದಿರುವ ಕಾರಣ ಬಿಡುಗಡೆಗೊಳಿಸಲಾಗುತ್ತಿದೆ.

**ಪ್ರಮುಖಾಂಶಗಳು**:

- ಡೆಹ್ರಾಡೂನ್ ಮೂಲದ ಫಾರೆಸ್ಟ್ ರಿಸರ್ಚ್ ಇನ್ಸ್ಟಿಟ್ಯೂಟ್ ಮಲಬಾರ್ ಬೇವು ಅಥವಾ ಮೆಲಿಯ ದುಬಿಯಾದ 10 ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದೆ. ಅಲ್ಲದೇ ಯುಕಲ್ಪಿಟಸ್ ಟೆರೆಟಿಕೊರ್ನಿಸ್ (Eucolyptus Tereticornis)ನ ಮೂರು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದೆ. ಯುಕಲ್ಪಿಟಸ್ ಮರಗಳ ದಿಮ್ಮೆಗಳಿಗೆ ಕೈಗಾರಿಕೆಯಲ್ಲಿ ಭಾರಿ ಬೇಡಿಕೆ ಇದೆ.
- ಮಲಬಾರ್ ಬೇವಿನ ಹೊಸ ತಳಿಗಳು ಅಧಿಕ ಇಳುವರಿ ನೀಡುವ ವೈಶಿಷ್ಟ್ಯತೆಯನ್ನು ಹೊಂದಿವೆ. ಪ್ಲೈವುಡ್ ಉದ್ದಿಮೆಯಲ್ಲಿ ಇವುಗಳಿಗೆ ಹೆಚ್ಚು ಬೇಡಿಕೆಯಿದೆ.
- ಕೊಯಮುತ್ತೂರಿನ IFGTB ಸಂಸ್ಥೆ Casuarina equisetifolia ದ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಮರದ ದಿಮ್ಮೆಗಳಿಗೆ ಬಳಕೆಯಾಗಲಿದೆ.
- TFRI, ಜಬಲ್ಪುರ: ಔಷಧೀಯ ಗುಣವುಳ್ಳ ರಾವೊಲ್ಪಿಯ ಸರ್ಪೆಂಟಿನ (Rauvoflia Serpentina) ದ ಎರಡು ತಳಿಗಳನ್ನು ಟಿಎಫ್ಆರ್ ಐ ಅಭಿವೃದ್ಧಿಪಡಿಸಿದೆ.

**ಇಂಡಿಯನ್ ಕೌನ್ಸಿಲ್ ಆಫ್ ಫಾರೆಸ್ಟ್ ರಿಸರ್ಚ್ ಅಂಡ್ ಎಜುಕೇಷನ್:**

Indian Council of Forestry Research and Education

- ICFRE ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ.
- ಅರಣ್ಯ ಸಸ್ಯ ಪ್ರಭೇಧಗಳ ಅಭಿವೃದ್ದಿಗೆ ಸಂಶೋಧನೆಯನ್ನು ನಡೆಸುವುದು ಹಾಗೂ ಅಗತ್ಯ ತಂತ್ರಜ್ಞಾನವನ್ನು ರಾಜ್ಯಗಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಇದರ ಮುಖ್ಯ ಉದ್ದೇಶ.
- ICFRE ಯಡಿ ಒಟ್ಟು ಒಂಬತ್ತು ಸಂಶೋಧನಾ ಸಂಸ್ಥೆಗಳು ಹಾಗೂ 4 ಸುಧಾರಿತ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಮಾರ್ಚ್ 3: ವಿಶ್ವ ವನ್ಯಜೀವಿ ದಿನ (World Wildlife Day)**



ವಿಶ್ವ ವನ್ಯಜೀವಿ ದಿನವನ್ನು ಪ್ರತಿ ವರ್ಷ ಮಾರ್ಚ್ 3 ರಂದು ಆಚರಿಸಲಾಗುತ್ತದೆ. ಜಗತ್ತಿನ ಸಸ್ಯ ಹಾಗೂ ಪ್ರಾಣಿ ಪ್ರಭೇಧಗಳ ಬಗ್ಗೆ ಜಾಗೃತಿ ಮೂಡಿಸುವುದು ವಿಶ್ವ ವನ್ಯಜೀವಿ ದಿನಾಚರಣೆಯ ಧ್ಯೇಯ. 2013ರ ವಿಶ್ವಸಂಸ್ಥೆ ಸಮಾವೇಶದಲ್ಲಿ ಮಾರ್ಚ್ 3ನ್ನು ವಿಶ್ವ ವನ್ಯಜೀವಿಗಳ ದಿನವೆಂದು ಘೋಷಿಸಲಾಗಿದೆ. ಸಿಐಟಿಇಎಸ್ (Convention on International Trade in Endangered Species of Wild Fauna and Flora (CITES)) ಒಪ್ಪಂದಕ್ಕೆ ಮಾರ್ಚ್ 3, 1973ರಲ್ಲಿ ಸಹಿ ಹಾಕಲಾದ ಸ್ಮರಣಾರ್ಥ ಮಾರ್ಚ್ 3 ರಂದು ವನ್ಯಜೀವಿ ದಿನವನ್ನು ಆಚರಿಸಲಾಗುತ್ತಿದೆ.

**ಈ ದಿನದ ಮಹತ್ವ**: ವನ್ಯಜೀವಿಗಳ ಬೇಟೆ ಅಲ್ಲದೆ ಅವುಗಳ ಚರ್ಮ, ಉಗುರು, ಕೊಂಬು, ದಂತಗಳ ಮಾರಾಟ ಅಕ್ರಮವಾಗಿ ಎಗ್ಗಿಲ್ಲದೆ ಸಾಗಿದೆ. ಇದರಿಂದ ಹಲವು ವನ್ಯಜೀವಿಗಳ ಸಂತತಿ ಅಳಿವಿನಂಚಿಗೆ ಸಾಗುತ್ತಿದೆ. ಅರಣ್ಯ ಪ್ರದೇಶದ ಒತ್ತುವರಿ, ಮರಗಳ ಮಾರಣಹೋಮದಿಂದ ಕಾಡುಪ್ರಾಣಿಗಳು ಜನವಸತಿ ಪ್ರದೇಶಗಳ ಮೇಲೆ ಲಗ್ಗೆಯಿಡುತ್ತಿವೆ. ಹೀಗೇ ಮುಂದುವರಿದರೆ ಮುಂದಿನ ದಿನಗಳಲ್ಲಿ ಪ್ರಕೃತಿಯಲ್ಲಿ ಅಸಮತೋಲನ ಕಂಡುಬರಲಿದೆ. ಈ ಹಿನ್ನೆಲೆಯಲ್ಲಿ ವನ್ಯಜೀವಿಗಳು ಮತ್ತು ಅರಣ್ಯಸಂಪತ್ತಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮಹತ್ವ.

**2017 ಧ್ಯೇಯ:**

- Listen to the Young Voice (ಯುವಕರ ದನಿಗೆ ಕಿವಿಕೊಡಿ) ಇದು ಈ ವರ್ಷದ ಧ್ಯೇಯವಾಕ್ಯ. ಸಸ್ಯ ಪ್ರಾಣಿ ಸಂಕುಲಗಳ ಸಂರಕ್ಷಣೆಗೆ ಯುವಕರನ್ನು ಪ್ರೇರೆಪಿಸುವುದು ಈ ವರ್ಷದ ಆಚರಣೆಯ ಧ್ಯೇಯದ ಹಿನ್ನಲೆ.

**CITES ಬಗ್ಗೆ:**

- CITES ಒಂದು ಅಂತಾರಾಷ್ಟ್ರೀಯ ಒಪ್ಪಂದವಾಗಿದ್ದು, ವಿಶ್ವದಾದ್ಯಂತ ಸಸ್ಯ ಹಾಗೂ ವನ್ಯ ಜೀವಿ ಸಂಕುಲಗಳ ವಾಣಿಜ್ಯ ವ್ಯಾಪಾರವನ್ನು ನಿಯಂತ್ರಿಸುವ ಗುರಿ ಹೊಂದಿದೆ.
- ಅಂತಾರಾಷ್ಟ್ರೀಯ ಮಾರಾಟದಿಂದ ಜಗತ್ತಿನಲ್ಲಿ ಉಳಿದಿರುವ ಯಾವುದೇ ಜೀವ ಸಂಕುಲಗಳ ಮೇಲೆ ಹಾನಿ ಆಗದಂತೆ ನಿಗಾವಹಿಸುವುದು CITESನ ಮುಖ್ಯ ಉದ್ದೇಶ.
- CITES ಒಪ್ಪಂದ 1975 ರಿಂದ ಅಧಿಕೃತವಾಗಿ ಜಾರಿಗೆ ಬಂದಿದೆ. ಇದು ಒಂದು ಕಾನೂನು ಬದ್ದ (Legally Binding)ವಾದ ಒಪ್ಪಂದವಾಗಿದ್ದು, ಸದಸ್ಯ ರಾಷ್ಟ್ರಗಳು ಒಪ್ಪಂದದ ಗುರಿಯನ್ನು ಕಾರ್ಯಗತಗೊಳಿಸಲು ಸ್ಥಳೀಯವಾಗಿ ಕಾನೂನು ರೂಪಿಸಲು ಬದ್ದವಾಗಿರಬೇಕು.
- ಈ ಒಪ್ಪಂದದಡಿ ಪ್ರಾಣಿ ಹಾಗೂ ಸಸ್ಯ ಸಂಕುಲಗಳನ್ನು ಮೂರು ವಿಧವಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ.
- **Appendix I:** ಗಂಭೀರವಾಗಿ ಅಳಿವಿನ ಅಂಚಿನಲ್ಲಿರುವ ಪ್ರಾಣಿ, ಸಸ್ಯ ಪ್ರಭೇದಗಳನ್ನು ಇದರಡಿ ಸೇರಿಸಲಾಗಿದೆ. ಈ ಪಟ್ಟಿಯಲ್ಲಿರುವ ಜೀವಿಗಳನ್ನು ಯಾವುದೇ ರೀತಿ ವಾಣಿಜ್ಯ ವ್ಯಾಪಾರ ಮಾಡತಕ್ಕದ್ದಲ್ಲ. ವೈಜ್ಞಾನಿಕ ಅಥವಾ ಶೈಕ್ಷಣಿಕ ಅಧ್ಯಯನಕ್ಕೆ ಅತ್ಯಂತ ಅಗತ್ಯವೆನಿಸಿದರೆ ಮಾತ್ರ ಬಳಸಬಹುದು.
- **Appendix II**: ಅಪಾಯದ ಅಂಚಿನಲ್ಲಿ ಇರದ ಆದರೆ ಇವುಗಳ ವಾಣಿಜ್ಯ ಮಾರಾಟದ ಮೇಲೆ ನಿಗಾವಹಿಸದೆ ಇದ್ದರೆ ಅಳಿವಿನ ಅಂಚಿಗೆ ತಲುಪುವ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳನ್ನು ಇದರಡಿ ಪಟ್ಟಿ ಮಾಡಲಾಗಿದೆ.
- **Appendix III**: CITES ನ ಯಾವುದಾದರು ಒಂದು ಸದಸ್ಯ ರಾಷ್ಟ್ರದಲ್ಲಿ ಸಂರಕ್ಷಿತವಾಗಿರುವ ಪ್ರಭೇದಗಳು ಹಾಗೂ ಆ ಪ್ರಭೇದಗಳ ಮೇಲೆ ಅಂತಾರಾಷ್ಟ್ರೀಯ ವ್ಯಾಪಾರದ ಮೇಲೆ ಹತೋಟಿಗೆ ತರುವಂತೆ ಇತರೆ ಸದಸ್ಯ ರಾಷ್ಟ್ರಗಳಿಗೆ ಸಹಾಯ ನೀಡುವಂತೆ ಮನವಿ ಸಲ್ಲಿಸಿರುವ ಪ್ರಭೇದಗಳನ್ನು ಇದರಡಿ ಪಟ್ಟಿಮಾಡಲಾಗಿರುತ್ತದೆ.

## ಮೊಟ್ಟ ಮೊದಲ ನದಿ ಜಲಚರ ಜೀವಿಗಳ ಸಮೀಕ್ಷೆಗೆ ಕೇಂದ್ರ ಸರ್ಕಾರ ಚಾಲನೆ



ಇದೇ ಮೊದಲ ಬಾರಿಗೆ ಗಂಗಾ ಡಾಲ್ಫಿನ್ ಸೇರಿದಂತೆ ಗಂಗಾ ನದಿಯಲ್ಲಿನ ಜಲಚರ ಜೀವಿಗಳಿಗೆ ಸಮೀಕ್ಷೆಗೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಗಂಗಾ ನದಿಯ ನೀರಿನ ಗುಣಮಟ್ಟವನ್ನು ಹೆಚ್ಚಿಸಲು ಸಮೀಕ್ಷೆಯ ಫಲಿತಾಂಶವನ್ನು ವೈಜ್ಞಾನಿಕ ಮಾಹಿತಿಯನ್ನಾಗಿ ಬಳಸಿಕೊಳ್ಳಲಾಗುವುದು.

**ಪ್ರಮುಖಾಂಶಗಳು**:

- ನಮಾಮಿ ಗಂಗಾ ಯೋಜನೆಯಡಿ ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ ಈ ಸಮೀಕ್ಷೆಯನ್ನು ವೈಲ್ಡ್ ಲೈಫ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಮೂಲಕ ನಡೆಸುತ್ತಿದೆ.
- ಮಾರ್ಚ್ 1, 2017 ರಲ್ಲಿ ಮೊದಲ ಹಂತದ ಸಮೀಕ್ಷೆಗೆ ಉತ್ತರ ಪ್ರದೇಶದ ನರೋರದಿಂದ ಬಿಜ್ನೊರ್ ವರೆಗೆ ಚಾಲನೆ ನೀಡಲಾಗಿದೆ (165 ಕಿ.ಮೀ ಉದ್ದ). ಇದರಡಿ ರಾಷ್ಟ್ರೀಯ ಜಲಚರ ಪ್ರಾಣಿ ಗಂಗಾ ಡಾಲ್ಫಿನ್ ಗಳ ಸಂಖ್ಯೆಯನ್ನು ಲೆಕ್ಕಚಾರ ಮಾಡಲಾಗುವುದು.
- ಮುಂದಿನ ಹಂತದ ಸಮೀಕ್ಷೆಯನ್ನು ಉತ್ತರ ಪ್ರದೇಶದ ಅಲಾಹಬಾದ್ ನಿಂದ ವಾರಣಾಸಿ ವರೆಗೆ ನಡೆಸಲಾಗುವುದು (250 ಕಿ.ಮೀ).
- ಡಾಲ್ಫಿನ್ ಗಳ ವಾಸಸ್ಥಳ, ಅಲ್ಲಿನ ಪರಿಸ್ಥಿತಿ ಹಾಗೂ ಅವುಗಳ ಸಂತತಿಗೆ ಎದುರಾಗಿರುವ ಸಂಕಷ್ಟಗಳ ಬಗ್ಗೆ ಸಮೀಕ್ಷೆಯಡಿ ಗಮನಿಸಲಾಗುವುದು.
- ಅಲ್ಲದೇ 2225 ಕಿ.ಮೀ ಉದ್ದದ ಗಂಗಾ ನದಿಯಲ್ಲಿ ಮೀನಿನ ಪ್ರಬೇಧಗಳ ಬಗ್ಗೆ ಅಧ್ಯಯ ನಡೆಸಲು ಉತ್ತರಖಂಡದ ಹರ್ಶಿಲ್ ನಲ್ಲಿ ಸಮೀಕ್ಷೆಯನ್ನು ಸಹ ಆರಂಭಿಸಲಾಗಿದೆ.

## ಆನೆ ಗಣತಿಗೆ ಮುಂದಾದ ನಾಲ್ಕು ರಾಜ್ಯಗಳು



ಇದೇ ಮೊದಲ ಬಾರಿಗೆ ದೇಶದ ನಾಲ್ಕು ರಾಜ್ಯಗಳಲ್ಲಿ ಆನೆ ಗಣತಿ ನಡೆಸಲು ನಿರ್ಧರಿಸಲಾಗಿದೆ. ಈ ನಾಲ್ಕು ರಾಜ್ಯಗಳೆಂದರೆ ಒಡಿಶಾ, ಚತ್ತೀಸಗರ್. ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್. ಮೇ 2017 ರಿಂದ ಆನೆ ಗಣತಿಯನ್ನು ಆರಂಭಿಸಲಾಗುವುದು. ಈ ನಾಲ್ಕು ರಾಜ್ಯಗಳಲ್ಲಿ ದೇಶದಲ್ಲಿ ಅತಿ ಹೆಚ್ಚು ಆನೆ ಮತ್ತು ಮಾನವ ನಡುವಿನ ಸಂಘರ್ಷಣೆ ದಾಖಲಾಗಿವೆ.

**ಪ್ರಮುಖಾಂಶಗಳು**:

- ಪ್ರತ್ಯಕ್ಷ ಮತ್ತು ಪರೋಕ್ಷ ಮತ ಎಣಿಕೆ ವಿಧಾನಗಳನ್ನು ಬಳಸಿ ಗಣತಿಯನ್ನು ನಡೆಸಲಾಗುವುದು.

- ಪ್ರತ್ಯಕ್ಷ ವಿಧಾನದಲ್ಲಿ ಆನೆಗಳನ್ನು ನೇರವಾಗಿ ನೋಡಿ ದಾಖಲು ಮಾಡಲಾಗುತ್ತದೆ. ಪರೋಕ್ಷ ವಿಧಾನದಲ್ಲಿ ಆನೆಗಳ ಲದ್ದಿಯ ವಿಶ್ಲೇಷಣೆಯನ್ನು ಆಧರಿಸಿ ಗಣತಿಯನ್ನು ನಡೆಸಲಾಗುವುದು.
- ಪರೋಕ್ಷ ವಿಧಾನವನ್ನು ಬಳಸಿ ಈಗಾಗಲೇ ತಮಿಳುನಾಡು ಮತ್ತು ಕರ್ನಾಟಕದಲ್ಲಿ ಗಣತಿಯನ್ನು ನಡೆಸಲಾಗಿದೆ.
- 2015 ರ ಸಮೀಕ್ಷೆಯ ಪ್ರಕಾರ ಒಡಿಶಾದಲ್ಲಿ 1,954 ಆನೆಗಳಿದ್ದು ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಜಾರ್ಖಂಡ್ 700, ಚತ್ತೀಸಘರ್ ಮತ್ತು ಪಶ್ಚಿಮ ಬಂಗಾಳದಲ್ಲಿ 275 ಹಾಗೂ 130 ಆನೆಗಳು ಇರುವುದಾಗಿ ತಿಳಿದುಬಂದಿದೆ.

**<u>ಗುಜರಾತ್ ಪ್ರಾಣಿ ಸಂರಕ್ಷಣೆ (ತಿದ್ದುಪಡಿ) ಮಸೂದೆ-2017</u>**



ಗುಜರಾತ್ ಪ್ರಾಣಿ ಸಂರಕ್ಷಣೆ (ತಿದ್ದುಪಡಿ) ಮಸೂದೆ-2017ಗೆ ಗುಜರಾತ್ ವಿಧಾನ ಸಭೆಯಲ್ಲಿ ಅನುಮೋದನೆ ದೊರೆತಿದೆ. ಈ ಮಸೂದೆಯು ಗುಜರಾತ್ ಪ್ರಾಣಿ ಸಂರಕ್ಷಣೆ ಕಾಯಿದೆ-1954ಕ್ಕೆ ತಿದ್ದುಪಡಿ ತರಲಿದೆ. ಆ ಮೂಲಕ ರಾಜ್ಯದಲ್ಲಿ ಗೋಹತ್ಯೆ ಮಾಡುವವರಿಗೆ ಕಠಿಣ ಶಿಕ್ಷೆ ಹಾಗೂ ಅಧಿಕ ದಂಡವನ್ನು ವಿಧಿಸಲು ಕಾಯಿದೆಯಡಿ ಅವಕಾಶ ಕಲ್ಪಿಸಲಾಗಿದೆ.

**ಪ್ರಮುಖಾಂಶಗಳು**:

- ಗೋಹತ್ಯೆ ನಡೆಸುವುದು ಹಾಗೂ ಗೋಹತ್ಯೆಗೆ ಹಸುಗಳ ಸಾಗಾಣಿಕೆ ಮಾಡುವ ಅಪರಾಧಗಳಿಗೆ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸುವ ಅವಕಾಶವನ್ನು ಮಸೂದೆಯಡಿ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರದ ಅಧಿಕೃತ ಪ್ರಾಧಿಕಾರದಿಂದ ಅನುಮತಿ ಪಡೆದು ಹಸುಗಳ ಸಾಗಾಣಿಕ ಮಾಡಬಹುದು.
- ಈ ಮುಂಚೆ 25 ಅಧಿಕಾರಿಗಳು ಅನುಮತಿ ನೀಡುವ ಅಧಿಕಾರವನ್ನು ಹೊಂದಿದ್ದರು, ಆದರೆ ಈಗ ಈ ಅಧಿಕಾರವನ್ನು 7 ಜನರಿಗೆ ಮಾತ್ರ ನೀಡಲಾಗಿದೆ.
- ರಾತ್ರಿ ವೇಳೆ ಹಸುಗಳ ಸಾಗಾಣಿಕೆ ಮಾಡುವಂತಿಲ್ಲ.
- ಕಾಯ್ದೆ ಉಲ್ಲಂಘಿಸಿದವರಿಗೆ ಕನಿಷ್ಠ 10 ವರ್ಷ ಜೈಲು ಶಿಕ್ಷೆಯಿಂದ ಹಿಡಿದು ಜೀವಾವಧಿವರೆಗೂ ಶಿಕ್ಷೆ ವಿಧಿಸಲು ಅವಕಾಶವಿದೆ. ಕಾನೂನುಬಾಹಿರವಾಗಿ ಹಸು, ಗೋಮಾಂಸ ಅಥವಾ ಗೋಮಾಂಸದ ಉತ್ಪನ್ನಗಳನ್ನು ಸಾಗಾಟ ಮಾಡುವವರಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಈ ಹಿಂದೆ ಮೂರು ವರ್ಷ ಮಾತ್ರ ಶಿಕ್ಷೆ ವಿಧಿಸಬಹುದಿತ್ತು.
- ಹಸುಗಳ ಸಾಗಾಣಿಕೆ ಮಾಡಲು ಬಳಸುವ ವಾಹನಗಳನ್ನು ಸರ್ಕಾರ ಶಾಶ್ವತವಾಗಿ ವಶಕ್ಕೆ ಪಡೆದುಕೊಳ್ಳಬಹುದಾಗಿದೆ. ಈ ಹಿಂದೆ ಆರು ತಿಂಗಳ ಕಾಲ ಮಾತ್ರ ಸರ್ಕಾರ ತನ್ನ ವಶಕ್ಕೆ ಪಡೆಯಬಹುದಿತ್ತು.

## **ಕನ್ಹಾ ಹುಲಿ ಸಂರಕ್ಷಣಾ ವಲಯ ಅಧಿಕೃತ ಚಿನ್ಹೆ ಹೊಂದಿದ ದೇಶದ ಮೊದಲ ಹುಲಿ ಸಂರಕ್ಷಣಾ ವಲಯ**



ಮಧ್ಯ ಪ್ರದೇಶದ ಕನ್ಹಾ ಹುಲಿ ಸಂರಕ್ಷಣಾ ವಲಯ ಅಧಿಕೃತ ಚಿನ್ಹೆ ಹೊಂದಿದ ದೇಶದ ಮೊದಲ ಹುಲಿ ಸಂರಕ್ಷಣಾ ವಲಯವೆಂಬ ಗೌರವಕ್ಕೆ ಪಾತ್ರವಾಗಿದೆ. "ಬೂರ್ಸಿಂಗ್ ದಿ ಬರಸಿಂಘ (Bhoorsingh the Barasingha)" ವನ್ನು ಇದರ ಅಧಿಕೃತ ಚಿನ್ಹೆ ಎಂದು ಘೋಷಿಸಲಾಗಿದೆ. ಈ ಚಿನ್ಹೆಯನ್ನು ಇನ್ನುಮುಂದೆ ಪಾರ್ಕಿನ ಜಾಹೀರಾತು ಪೋಸ್ಟರ್ ಗಳಲ್ಲಿ ಬಳಸಲಾಗುವುದು.

**ಪ್ರಮುಖಾಂಶಗಳು**:

- ಯುವ ಜನತೆಗೆ ವನ್ಯಜೀವಿಗಳೊಂದಿಗೆ ಸಂಪರ್ಕ ಬೆಸೆಯುವ ಮೂಲಕ ಅವುಗಳ ಸಂರಕ್ಷಣೆಗೆ ಮುಂದಾಗಿಸುವ ಸಲುವಾಗಿ ಚಿನ್ಹೆಯನ್ನು ಅಳವಡಿಸಿಕೊಳ್ಳಲಾಗಿದೆ.
- ಬರಸಿಂಗ ಅಥವಾ ಜೌಗು ಜಿಂಕೆ (Swamp Deer) ಬಗ್ಗೆ ಅರಿವು ಮೂಡಿಸಿ ಸಾಧ್ಯವಾದಷ್ಟು ಸಂರಕ್ಷಿಸುವುದು.
- ಅಲ್ಲದೇ ಕನ್ಹಾ ಹುಲಿ ಸಂರಕ್ಷಣಾ ವಲಯಕ್ಕೂ ಇದೊಂದು ವಿಶಿಷ್ಠ ಗುರುತು ನೀಡಲಿದೆ.
- ಈ ಚಿನ್ಹೆಯನ್ನು ಪ್ರಖ್ಯಾತ ವ್ಯಂಗಚಿತ್ರಕಾರ ರೋಹನ್ ಚಕ್ರವರ್ತಿ ಅವರು ರಚಿಸಿದ್ದಾರೆ.

**ಬರಸಿಂಘ**:

- ಬರಸಿಂಘ ಅಥವಾ ಜೌಗು ಪ್ರದೇಶದ ಜಿಂಕೆಗಳು ಭಾರತ ಉಪಖಂಡದಲ್ಲಿ ಕಂಡುಬರುವ ಜಿಂಕೆ ಪ್ರಭೇದಗಳಲ್ಲಿ ಒಂದು. ಬರಸಿಂಘ ಮಧ್ಯ ಪ್ರದೇಶದ ರಾಜ್ಯ ಪ್ರಾಣಿ.
- ಮಧ್ಯ ಪ್ರದೇಶದ ಕನ್ಹಾ ಹುಲಿ ಸಂರಕ್ಷಣಾ ತಾಣದಲ್ಲಿ ಮಾತ್ರ ಬರಸಿಂಘಗಳು ವಿಶ್ವದಲ್ಲಿ ಕಾಣ ಸಿಗುತ್ತವೆ.
- ಐಯುಸಿನ್ ಕೆಂಪು ಪಟ್ಟಿಯಲ್ಲಿ ಇವುಗಳನ್ನು ಅಪಾಯದಲ್ಲಿರುವ ಪ್ರಭೇದಗಳು ಎಂದು ಗುರುತಿಸಲಾಗಿದೆ.

# ಸುದ್ದಿಯಲ್ಲಿರುವ ವ್ಯಕ್ತಿಗಳು

**<u>ಕೇಂದ್ರ ಜಲ ಆಯೋಗದ ಮುಖ್ಯಸ್ಥರಾಗಿ ನರೇಂದ್ರ ಕುಮಾರ್ ನೇಮಕ</u>**



ಕೇಂದ್ರ ಜಲ ಆಯೋಗದ ಮುಖ್ಯಸ್ಥರಾಗಿ ನರೇಂದ್ರ ಕುಮಾರ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ.

**ನರೇಂದ್ರ ಕುಮಾರ್ ಬಗ್ಗೆ:**

- ನರೇಂದ್ರ ಕುಮಾರ್ ಅವರು ಕೇಂದ್ರ ಜಲ ಎಂಜನಿಯರಿಂಗ್ ಸೇವೆಯ 1979ನೇ ಬ್ಯಾಚ್ ನ ಅಧಿಕಾರಿ. ನೇಮಕಾತಿ ಮುಂಚೆ ಕುಮಾರ್ ಅವರು ಆಯೋಗದ ಸದಸ್ಯರಾಗಿ 2014 ರಿಂದ ಸೇವೆ ಸಲ್ಲಿಸುತ್ತಿದ್ದರು.
- ಕೇಂದ್ರ ಜಲ ಆಯೋಗದ ವಿನ್ಯಾಸ ಇಲಾಖೆಯ ಸಹಾಯಕ ನಿರ್ದೇಶಕರಾಗಿ, ಅಣೆಕಟ್ಟು ಸುರಕ್ಷತೆ ಸಂಸ್ಥೆಯ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ವಿವಿಧ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

**ಕೇಂದ್ರ ಜಲ ಆಯೋಗ:**

- ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ದಿ ಹಾಗೂ ಗಂಗಾ ಪುನರ್ಜ್ಜೀವನ ಸಚಿವಾಲಯದಡಿ ಈ ಆಯೋಗ ಕಾರ್ಯನಿರ್ವಹಿಸುತ್ತಿದೆ. ಜಲ ಸಂಪನ್ಮೂಲಕ್ಕೆ ಸಂಬಂಧಿಸಿದ ದೇಶದ ಅತ್ಯುನ್ನತ ತಾಂತ್ರಿಕ ಸಂಸ್ಥೆ ಇದಾಗಿದೆ.
- ದೇಶದಾದ್ಯಂತ ಜಲ ಸಂಪನ್ಮೂಲಗಳ ನಿಯಂತ್ರಣ, ಬಳಕೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ರಾಜ್ಯಗಳೊಂದಿಗೆ ಸಮಾಲೋಚಿಸಿ ಯೋಜನೆಗಳನ್ನು ಜಾರಿಗೆ ತರುವುದು ಆಯೋಗದ ಹೊಣೆಗಾರಿಕೆ.

# ವ್ಯವಹಾರ

**<u>ವಲಸಿಗರ ಹಿತಾಸಕ್ತಿ ಕಾಯಲು ಕಾನೂನು ಚೌಕಟ್ಟು ರೂಪಿಸುವಂತೆ ಸಮಿತಿ ಶಿಫಾರಸ್ಸು</u>**



ದೇಶದಲ್ಲಿ ವಲಸಿಗರ ಹಿತಾಸಕ್ತಿಯನ್ನು ಕಾಪಾಡಲು ಸೂಕ್ತ ಕಾನೂನು ಹಾಗೂ ನಿಯಮ ಚೌಕಟ್ಟನ್ನು ರೂಪಿಸುವಂತೆ ಪಾರ್ಥ ಮುಖೋಪಾಧ್ಯಯ ನೇತೃತ್ವದ "ವಲಸೆ ಮೇಲಿನ ಕಾರ್ಯಪಡೆ" ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ವಲಸಿಗರು ದೇಶದ ಆರ್ಥಿಕ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದು, ಅವರ ಸಂವಿಧಾನಿಕ ಹಕ್ಕುಗಳನ್ನು ಸಂರಕ್ಷಿಸುವುದು ಅತ್ಯವಶ್ಯಕ ಎಂದು ವರದಿಯಲ್ಲಿ ತಿಳಿಸಲಾಗಿದೆ. 18 ಸದಸ್ಯರನ್ನು ಒಳಗೊಂಡಿರುವ ಕಾರ್ಯಪಡೆಯನ್ನು ಕೇಂದ್ರ ವಸತಿ ಹಾಗೂ ಬಡತನ ನಿರ್ಮೂಲನೆ ಸಚಿವಾಲಯ 2015 ರಲ್ಲಿ ರಚಿಸಿತ್ತು.

**ಸಮಿತಿಯ ವರದಿ:**

- ಜಾತಿ ಆಧಾರಿತ ಜನಗಣತಿ ಕೈಗೊಳ್ಳಲು ರಿಜಿಸ್ಟ್ರರ್ ಜನರಲ್ ಆಫ್ ಇಂಡಿಯಾದ ಶಿಷ್ಟಚಾರಕ್ಕೆ ತಿದ್ದುಪಡಿ ತರವು ಮೂಲಕ ವಲಸಿಗರು ಯಾವುದೇ ರಾಜ್ಯಕ್ಕೆ ವಲಸೆ ಹೋದರು ಆ ರಾಜ್ಯದಲ್ಲಿನ ಪ್ರಯೋಜನವನ್ನು ಪಡೆದುಕೊಳ್ಳಲು ಅನುಕೂಲ ಮಾಡಿಕೊಡಬೇಕು.
- ಅಂತರ್ ರಾಜ್ಯಗಳ ಪಡಿತರ ವಿತರಣೆ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ವಲಸಿಗರು ಯಾವುದೇ ರಾಜ್ಯದಲ್ಲಿದ್ದರು ಪಡಿತರ ವ್ಯವಸ್ಥೆಯ ಉಪಯೋಗ ಪಡೆದುಕೊಳ್ಳಲು ಅವಕಾಶ ಕಲ್ಪಿಸಬೇಕು.
- ಕೆಲಸ ಮತ್ತು ಉದ್ಯೋಗದಲ್ಲಿ ಯಾವುದೇ ತಾರತಮ್ಯವನ್ನು ತಡೆಗಟ್ಟಲು ಸ್ಥಳೀಯರ ಮೀಸಲಾತಿ ಸ್ಥಾನಮಾನವನ್ನು ತೊಡೆದುಹಾಕಲು ರಾಜ್ಯಗಳು ಪ್ರೋತ್ಸಾಹಿಬೇಕು.
- ವಲಸಿಗರ ಮಕ್ಕಳನ್ನು ಸರ್ವ ಶಿಕ್ಷಣ ಅಭಿಯಾನದ ವಾರ್ಷಿಕ ಕ್ರಿಯಾ ಯೋಜನೆಯಡಿ ತರುವ ಮೂಲಕ ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯಲು ರಾಜ್ಯಗಳು ಶ್ರಮಿಸಬೇಕು.
- ವಲಸಿಗರು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಬ್ಯಾಂಕುಗಳು ಸಹಕರಿಸಬೇಕು. ಖಾತೆ ತೆರೆಯುವಾಗ "ನಿಮ್ಮ ಗ್ರಾಹಕನ ಬಗ್ಗೆ ತಿಳಿಯಿರಿ" ನಿಯಮಗಳನ್ನು ಪಾಲಿಸಬೇಕು ಆದರೆ ಅನಗತ್ಯ ದಾಖಲೆಗಳನ್ನು ಕೇಳಬಾರದು.

**ಹಿನ್ನಲೆ**:

2011 ಜನಗಣತಿ ಹಾಗೂ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ (NSSO) ಯ ವರದಿ ಪ್ರಕಾರ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ 30% ರಷ್ಟು ವಲಸಿಗರಿದ್ದಾರೆ. 2016-17 ಆರ್ಥಿಕ ಸಮೀಕ್ಷೆ ಪ್ರಕಾರ 2011 ರಲ್ಲಿ 3.30 ಮಿಲಿಯನಷ್ಟಿದ್ದ ವಾರ್ಷಿಕ ವಲಸೆ ಹೋಗುವವರ ಸಂಖ್ಯೆ 2016 ರಲ್ಲಿ 9.0 ಮಿಲಿಯನಷ್ಟಿದೆ.

## ತೇಜಸ್ವಿನಿ ಯೋಜನೆಯ ಅನುಷ್ಠಾನಕ್ಕೆ ವಿಶ್ವಬ್ಯಾಂಕ್ ಜೊತೆ ಆರ್ಥಿಕ ಒಪ್ಪಂದಕ್ಕೆ ಸಹಿ




ಹದಿಹರೆಯದ ಬಾಲಕಿಯರ ಹಾಗೂ ಯುವ ಮಹಿಳೆಯರ ಸಾಮಾಜಿಕ ಆರ್ಥಿಕ ಸಬಲೀಕರಣದ ಆಶಯ ಹೊಂದಿರುವ ತೇಜಸ್ವಿನಿ ಯೋಜನೆಯ ಆರ್ಥಿಕ ನೆರವಿಗೆ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್ ನೊಂದಿಗೆ ರೂ 63 ಮಿಲಿಯನ್ ಡಾಲರ್ ಆರ್ಥಿಕ ಒಪ್ಪಂದಕ್ಕೆ ಸಹಿ ಹಾಕಿದೆ. ಹದಿಹರೆಯದ ಹೆಣ್ಣು ಮಕ್ಕಳ ಹಾಗೂ ಯುವ ಮಹಿಳೆಯರ ಸಬಲೀಕರಣ ಯೋಜನೆಯೊಂದನ್ನು ವಿಶ್ವಬ್ಯಾಂಕ್ ಇದೇ ಮೊದಲ ಬಾರಿಗೆ ಭಾರತದಲ್ಲಿ ಅನುಷ್ಠಾನಗೊಳಿಸುತ್ತಿದೆ.

**ಪ್ರಮುಖಾಂಶಗಳು**:

- ಹದಿಹರೆಯದ ಹೆಣ್ಣುಮಕ್ಕಳಲ್ಲಿ ಮಾರುಕಟ್ಟೆ ಆಧಾರಿತ ಕೌಶಲ್ಯ ತರಭೇತಿಯನ್ನು ಪಡೆದುಕೊಳ್ಳಲು ಮೂಲ ಜೀವನ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು.
- ಇದು ಮುಖ್ಯವಾಗಿ ಮೂರು ಘಟಕಗಳನ್ನು ಒಳಗೊಂಡಿದೆ ಅವುಗಳೆಂದರೆ: ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅವಕಾಶಗಳನ್ನು ವಿಸ್ತರಿಸುವುದು. ಉತ್ತಮ ಸೇವೆ ನೀಡುವುದು ಹಾಗೂ ರಾಜ್ಯಗಳ ಸಾಮರ್ಥ್ಯ ಅಭಿವೃದ್ಧಿ.
- ಯೋಜನೆಯನ್ನು ಜಾರ್ಖಂಡ್ನ 17 ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ. ಸುಮಾರು 6,80,000 ಸಾವಿರ ಹದಿಹರೆಯದ ಬಾಲಕಿಯರು ಹಾಗೂ ಯುವ ಮಹಿಳೆಯರು ಇದರಿಂದ ಅನುಕೂಲ ಪಡೆದುಕೊಳ್ಳಲಿದ್ದಾರೆ.

## ಸೀಮೈ ಕರುವೇಲಂ (Seemai Karuvelam) ಮರಗಳನ್ನು ತೆರವುಗೊಳಿಸಲು ಕಾನೂನು ಜಾರಿಗೊಳಿಸುವಂತೆ ಮದ್ರಾಸ್ ಹೈಕೋರ್ಟ್ ಆದೇಶ



ಮದ್ರಾಸ್ ಹೈಕೋರ್ಟಿನ ಮಧುರೈ ಪೀಠ "ಸೀಮೈ ಕರುವೇಲಂ (Seemai Karuvelam)" ಮರಗಳನ್ನು ತೆರವುಗೊಳಿಸಲು ಎರಡು ತಿಂಗಳೊಳಗೆ ಸೂಕ್ತ ಕಾನೂನು ಜಾರಿಗೊಳಿಸುವಂತೆ ತಮಿಳುನಾಡು ಸರ್ಕಾರಕ್ಕೆ ಆದೇಶ ಮಾಡಿದೆ. ಸೀಮೈ ಕರುವೇಲಂ ಆಕ್ರಮಣಶೀಲ ಸಸ್ಯ ಪ್ರಭೇದವಾಗಿದ್ದು, ಅತಿಯಾದ ನೀರನ್ನು ಹೀರಿಕೊಳ್ಳುವುದರಿಂದ ಪರಿಸರ ಹಾಗೂ ಕೃಷಿ ಚಟುವಟಿಕೆ ಮೇಲೆ ಗಂಭೀರ ಹಾನಿಯನ್ನು ಉಂಟುಮಾಡುತ್ತಿದೆ.

**ಏನಿದು ವಿವಾದ:**

- ಪರಿಸರ ಹಾಗೂ ಕೃಷಿ ಚಟುವಟಿಕೆಗೆ ಮಾರಕವಾಗಿರುವ ಸೀಮೈ ಕರುವೇಲಂ ಮರಗಳನ್ನು ತೆರವುಗೊಳಿಸಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಡಿಸೆಂಬರ್, 2016 ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಅರ್ಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ರಾಜ್ಯದ 13 ಜಿಲ್ಲೆಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ಜಮೀನುಗಳಲ್ಲಿ

ವ್ಯಾಪಕವಾಗಿ ಬೆಳೆದಿರುವ ಕರುವೇಲಂ ಮರಗಳನ್ನು ಬುಡಸಮೇತ ಕೀಳುವಂತೆ ತಮಿಳುನಾಡು ರಾಜ್ಯ ಸರ್ಕಾರಕ್ಕೆ ಆದೇಶ ಮಾಡಲಾಗಿದೆ.

**ಆದೇಶದಲ್ಲಿ ಏನಿದೆ?**

- ರಾಜ್ಯದ 32 ಜಿಲ್ಲೆಗಳಲ್ಲಿ ಸೀಮೈ ಕರುವೇಲಂ ಮರಗಳನ್ನು ನಾಶಪಡಿಸಲು ಎರಡು ತಿಂಗಳೊಳಗೆ ಸೂಕ್ತ ಕಾನೂನನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದೆ.
- ಖಾಸಗಿ ಹಾಗೂ ಸರ್ಕಾರಿ ಜಮೀನುಗಳಿಂದ ಈ ಮರಗಳನ್ನು ಕಿತ್ತೊಗೆಯಲು ಜಿಲ್ಲಾಧಿಕಾರಿಗಳಿಗೆ ಸೂಕ್ತ ಅನುದಾನವನ್ನು ಬಿಡುಗಡೆಗೊಳಿಸಲು ಸಹ ಆದೇಶಿಸಲಾಗಿದೆ.

**ಸೀಮೈ ಕರುವೇಲಂ:**

ಸೀಮೈ ಕರುವೇಲಂ ಪಶ್ಚಿಮ ಆಫ್ರಿಕಾಕ್ಕೆ ಸೇರಿದ ಮರ ಪ್ರಭೇದ. 1960 ರಲ್ಲಿ ಉರುವಲು ಉದ್ದೇಶಕ್ಕಾಗಿ ತಮಿಳುನಾಡಿನಲ್ಲಿ ಈ ಪ್ರದೇಶವನ್ನು ಪರಿಚಯಿಸಲಾಯಿತು. ಅತಿಯಾಗಿ ನೀರನ್ನು ಹೀರಿಕೊಳ್ಳುವ ಈ ಪ್ರಬೇಧದಿಂದ ಸ್ಥಳೀಯ ಪರಿಸರ ವ್ಯವಸ್ಥೆಗೆ ಮಾರಕವಾಗಿ ಪರಿಣಮಿಸಿದೆ.

## “ದಿ ಸ್ಪೆಸಿಫೈಡ್ ಬ್ಯಾಂಕ್ ನೋಟ್ಸ್ ಆಕ್ಟ್, 2017” ಅಧಿಸೂಚನೆ ಹೊರಡಿಸಿದ ಸರ್ಕಾರ



ಅಮಾನ್ಯಗೊಂಡಿರುವ 500 ಮತ್ತು 1,000 ಮುಖಬೆಲೆಯ ನೋಟುಗಳನ್ನು ಡಿಸೆಂಬರ್ 31, 2016 ರಿಂದ ಇಟ್ಟುಕೊಳ್ಳುವುದು, ವ್ಯಗಾವಣೆ ಮಾಡುವುದು ಹಾಗೂ ಸ್ವೀಕರಸಿವುದನ್ನು ನಿರ್ಬಂಧಿಸುವ “ದಿ ಸ್ಪೆಸಿಫೈಡ್ ಬ್ಯಾಂಕ್ ನೋಟ್ಸ್ ಆಕ್ಟ್-2017” ಅನ್ನು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಅದರಂತೆ ಅಮಾನ್ಯಗೊಂಡಿರುವ 500 ಹಾಗೂ 1000 ಮುಖಬೆಲೆಯ ನೋಟುಗಳ ಬಳಕೆ ಕ್ರಿಮಿನಲ್ ಅಪರಾಧವೆಂದು ಪರಿಗಣಿಸಲಾಗುವುದು.

**ಕಾಯಿದೆಯ ಪ್ರಮುಖಾಂಶಗಳು:**

- ಅಮಾನ್ಯಗೊಂಡಿರುವ ರೂ 500 ಹಾಗೂ ರೂ 1000 ಮುಖಬೆಲೆಯ ನೋಟುಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಭಾರತ ಸರ್ಕಾರದ ಹೊಣೆಗಾರಿಕೆ ಅಂತ್ಯಗೊಳ್ಳಲಿದೆ.
- ಡಿಸೆಂಬರ್ 31, 2016ರಿಂದ ಅಮಾನ್ಯಗೊಂಡಿರುವ 500 ಮತ್ತು 1,000 ಮುಖಬೆಲೆಯ ನೋಟುಗಳನ್ನು ಇಟ್ಟುಕೊಳ್ಳುವುದು, ವ್ಯಗಾವಣೆ ಮಾಡುವುದು ಹಾಗೂ ಸ್ವೀಕರಸಿವುದನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಲಾಗುವುದು. ಪ್ರಥಮ ದರ್ಜೆ ನ್ಯಾಯಾಧೀಶರಿಗೆ ದಂಡ ವಿಧಿಸುವ ಅವಕಾಶವನ್ನು ಕಾಯಿದೆಯಡಿ ಕಲ್ಪಿಸಲಾಗಿದೆ.
- ಒಬ್ಬ ವ್ಯಕ್ತಿಯು 10ಕ್ಕಿಂತ ಹೆಚ್ಚು ಅಮಾನ್ಯಗೊಂಡ ನೋಟುಗಳನ್ನು ಅಥವಾ ವಿದ್ಯಾಭ್ಯಾಸ, ಸಂಶೋಧನೆಗೊಸ್ಕರ 25ಕ್ಕೂ ಹೆಚ್ಚು ನೋಟುಗಳನ್ನು ಇಟ್ಟುಕೊಂಡರೆ,

10 ಸಾವಿರ ರೂ. ಅಥವಾ ಅವನಲ್ಲಿರುವ ನಗದಿನ 5 ಪಟ್ಟು ದಂಡವನ್ನು ಪಾವತಿಸಬೇಕು.

- ಇನ್ನು ಅಪನಗದೀಕರಣದ ಅವಧಿಯಲ್ಲಿ ವಿದೇಶಗಳಲ್ಲಿ ಇದ್ದ ಭಾರತೀಯರಿಗೆ ಹಳೇ ನೋಟುಗಳ ಠೇವಣಿಗೆ ಮಾ.31ರವರೆಗೆ ಕಾಲಾವಕಾಶ ನೀಡಲಾಗಿದೆ. ಒಂದು ವೇಳೆ, ಇವರು ಸುಳ್ಳು ಮಾಹಿತಿ ನೀಡಿ ಠೇವಣಿ ಇಡಲು ಮುಂದಾಗಿದ್ದು ಗೊತ್ತಾದರೆ, ಅಂಥವರಿಗೆ 50 ಸಾವಿರ ರೂ. ದಂಡ ವಿಧಿಸಲಾಗುತ್ತದೆ ಎಂದು ಕಾಯ್ದೆಯಲ್ಲಿ ಹೇಳಲಾಗಿದೆ.

## ಟ್ರೇಡ್ ಮಾರ್ಕ್ ನಿಯಮ (Trade Mark Rule)-2017 ಜಾರಿಗೆ

Trademark

ವ್ಯಾಪಾರ ಚಿನ್ಹೆ ಬಳಕೆ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವ ಟ್ರೇಡ್ ಮಾರ್ಕ್ ನಿಯಮ-2017 ಜಾರಿಗೆ ಬಂದಿದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವಾಲಯ ಹೊಸ ನಿಯಮವನ್ನು ಬಿಡುಗಡೆಗೊಳಿಸಿದ್ದು, ಹಾಲಿ ಜಾರಿಯಲ್ಲಿದ್ದ 2002 ನಿಯಮದ ಬದಲಾಗಿ ಇದು ಜಾರಿಗೆ ಬಂದಿದೆ.

**ನಿಯಮದ ಪ್ರಮುಖ ಅಂಶಗಳು:**

- ಟ್ರೇಡ್ ಮಾರ್ಕ್ ನೋಂದಣಿ ಪ್ರತಿಗಳ ಸಂಖ್ಯೆಯನ್ನು 74 ರಿಂದ 8ಕ್ಕೆ ಇಳಿಸಲಾಗಿದೆ.
- ಇ-ನೋಂದಣಿಯನ್ನು ಪ್ರಸಿದ್ಧಗೊಳಿಸಲು ಆನ್ ಲೈನ್ ನಲ್ಲಿ ನೋಂದಣಿ ಮಾಡಿಕೊಳ್ಳುವವರಿಗೆ ಶೇ 10% ರಿಯಾಯತಿ ನೀಡಲಾಗಿದೆ.
- ಟ್ರೇಡ್ ಮಾರ್ಕ್ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಸಲುವಾಗಿ ದಾಖಲಾತಿ ಸಲ್ಲಿಕೆಯಿಂದ ನೋಂದಣಿ ಪ್ರಕ್ರಿಯೆ ವರೆಗೂ ಇ-ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಅರ್ಜಿದಾರರ ವಿಳಾಸದಲ್ಲಿ ಇ-ಮೇಲ್ ಅನ್ನು ಕಡ್ಡಾಯಗೊಳಿಸಲಾಗಿದೆ. ಆ ಮೂಲಕ ಕಚೇರಿ ವ್ಯವಹಾರವನ್ನು ಇ-ಮೇಲ್ ಮೂಲಕ ತ್ವರಿತವಾಗಿ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ವಿಡಿಯೋ ಸಂವಾದದ ಮೂಲಕ ಚಿನ್ಹೆ ಹಂಚಿಕೆ ಸಂಬಂಧಿಸಿದ ವಿವಾದಗಳನ್ನು ಶೀಘ್ರವಾಗಿ ಬಗೆಹರಿಸಲಾಗುವುದು.

## ಮಾರ್ಚ್ 15: ವಿಶ್ವ ಗ್ರಾಹಕ ಹಕ್ಕುಗಳ ದಿನ



ವಿಶ್ವ ಗ್ರಾಹಕ ಹಕ್ಕುಗಳ ದಿನವನ್ನು ಮಾರ್ಚ್ 15 ರಂದು ಆಚರಿಸಲಾಗುತ್ತದೆ. ಅಂತಾರಾಷ್ಟ್ರೀಯ ಗ್ರಾಹಕರ ಚಳುವಳಿಗೆ ಗೌರವ ಅರ್ಪಿಸುವುದು ಹಾಗೂ ಗ್ರಾಹಕರ ಮೂಲಭೂತ ಹಕ್ಕುಗಳನ್ನು ಪ್ರೋತ್ಸಾಹಿಸುವುದು ವಿಶ್ವ ಗ್ರಾಹಕರ ದಿನದ ಉದ್ದೇಶ.

**ವಿಶ್ವ ಗ್ರಾಹಕ ಹಕ್ಕುಗಳ ದಿನದ ವಿಶೇಷ:**

- ಪ್ರತಿಯೊಬ್ಬ ಗ್ರಾಹಕನ ಮೂಲಭೂತ ಹಕ್ಕುಗಳನ್ನು ಪ್ರೋತ್ಸಾಹಿಸುವುದು.

- ಅಂತಹ ಹಕ್ಕುಗಳನ್ನು ಗೌರವಿಸಲು ಮತ್ತು ರಕ್ಷಿಸಲು ಒತ್ತಾಯಿಸುವುದು.
- ಮಾರುಕಟ್ಟೆ ದುರುಪಯೋಗ ಮತ್ತು ಸಾಮಾಜಿಕ ಅನ್ಯಾಯಗಳನ್ನು ವಿರೋಧಿಸುವುದು.

**2017 ಧ್ಯೇಯವಾಕ್ಯ**: 'Building a Digital World Consumers can Trust'.

**ಹಿನ್ನಲೆ:**

ಗ್ರಾಹಕ ಹಕ್ಕುಗಳ ಪರಿಕಲ್ಪನೆ ಬಗ್ಗೆ ಮೊದಲು ಮಂಡಿಸಿದವರು ಅಮೆರಿಕಾದ ಮಾಜಿ ಅಧ್ಯಕ್ಷ ಜಾನ್ ಎಫ್ ಕೆನಡಿ ಅವರು. 1962 ರಲ್ಲಿ ಅಮೆರಿಕ ಕಾಂಗ್ರೆಸ್ ಅನ್ನು ಉದ್ದೇಶಿಸಿ ಮಾತನಾಡುವಾಗ ಗ್ರಾಹಕ ಹಕ್ಕುಗಳು ಎಂದರೇನೆಂಬ ವ್ಯಾಖ್ಯಾನವನ್ನು ನೀಡಿದರು. ಆ ಮೂಲಕ ಜಾನ್ ಎಫ್ ಕೆನಡಿ ಅವರು ಗ್ರಾಹಕ ಹಕ್ಕುಗಳ ಬಗ್ಗೆ ಮೊದಲು ಧ್ವನಿ ಎತ್ತಿದ ವಿಶ್ವದ ಮೊದಲ ನಾಯಕ. ಪ್ರಥಮ ವಿಶ್ವ ಗ್ರಾಹಕ ಹಕ್ಕು ದಿನವನ್ನು 15ನೇ ಮಾರ್ಚ್ 1983ರಲ್ಲಿ ಆಚರಿಸಲಾಯಿತು.

- ಭಾರತದಲ್ಲಿ ರಾಷ್ಟ್ರೀಯ ಗ್ರಾಹಕ ದಿನವನ್ನು ಡಿಸೆಂಬರ್ 24 ರಂದು ಆಚರಿಸಲಾಗುತ್ತದೆ. 1986ರಲ್ಲಿ ಗ್ರಾಹಕ ರಕ್ಷಣೆ ಕಾಯಿದೆ ಈ ದಿನದಂದು ಜಾರಿಗೆ ಬಂದ ಹಿನ್ನಲೆಯಲ್ಲಿ ರಾಷ್ಟ್ರೀಯ ಗ್ರಾಹಕ ದಿನವನ್ನು ಆಚರಿಸಲಾಗುತ್ತಿದೆ.

## ಹತ್ತು ರೂ ಮುಖಬೆಲೆಯ ಪ್ಲಾಸ್ಟಿಕ್ ನೋಟು ಮುದ್ರಿಸಲು ಆರ್‌ಬಿಐ ಗೆ ಅನುಮತಿ



ಹತ್ತು ರೂಪಾಯಿ ಮುಖಬೆಲೆಯ ಪ್ಲಾಸ್ಟಿಕ್ ನೋಟುಗಳನ್ನು ಪ್ರಾಯೋಗಿಕವಾಗಿ ಚಲಾವಣೆಗೆ ತರಲು ಆರ್‌ಬಿಐಗೆ ಕೇಂದ್ರ ಹಣಕಾಸಯ ಸಚಿವಾಲಯ ಅನುಮತಿ ನೀಡಿದೆ. ಈ ಬಗ್ಗೆ ಹಣಕಾಸು ಸಚಿವಾಲಯದ ಸಹಾಯಕ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.

**ಪ್ರಮುಖಾಂಶಗಳು**:

- ವಿಶಿಷ್ಟ ಭೌಗೋಳಿಕ ಹಾಗೂ ಹವಾಮಾನ ಗುಣಗಳನ್ನು ಹೊಂದಿರುವ ದೇಶದ ಐದು ನಗರಗಳಲ್ಲಿ ಪ್ರಾಯೋಗಿಕವಾಗಿ ಚಾಲನೆ ನೀಡಲಾಗುವುದು.
- ಪ್ಲಾಸ್ಟಿಕ್ ನೋಟುಗಳ ಮುದ್ರಣಕ್ಕೆ ಬೇಕಾದ ಪ್ಲಾಸ್ಟಿಕ್ ಅನ್ನು ಖರೀದಿಸಲು ಹಾಗೂ ಪ್ರಾಯೋಗಿಕವಾಗಿ ಮುದ್ರಿಸಲು ಹಣಕಾಸು ಸಚಿವಾಲಯ ಭಾರತೀಯ ರಿಸರ್ವ್ ಬ್ಯಾಂಕಿಗೆ ಅನುಮತಿ ನೀಡಿದೆ.
- ಪ್ಲಾಸ್ಟಿಕ್ ನೋಟುಗಳು ಕಾಗದದ ನೋಟುಗಳಿಗಿಂತ ಸುರಕ್ಷಿತವಾಗಿ ಇರಲಿದ್ದು, ದೀರ್ಘಕಾಲ ಬಾಳಿಕೆ ಬರಲಿವೆ. ಕನಿಷ್ಠ ಐದು ವರ್ಷಗಳ ಕಾಲ ಇವು ಬಾಳಿಕೆ ಬರಲಿದ್ದು, ನಕಲಿ ಮಾಡುವುದು ಸಹ ಕಷ್ಟ.

- ಪ್ಲಾಸ್ಟಿಕ್ ನೋಟುಗಳನ್ನು 1988 ರಲ್ಲಿ ಆಸ್ಟ್ರೇಲಿಯಾ ಮೊದಲ ಬಾರಿಗೆ ಅಳವಡಿಸಿಕೊಂಡಿತು. ಪ್ರಸ್ತುತ 20ಕ್ಕೂ ಹೆಚ್ಚು ದೇಶಗಳು ಪ್ಲಾಸ್ಟಿಕ್ ನೋಟುಗಳನ್ನು ಕರೆನ್ಸಿಯಾಗಿ ಅಳವಡಿಸಿಕೊಂಡಿವೆ.

**ಹಿನ್ನಲೆ**:

ಪ್ಲಾಸ್ಟಿಕ್ ನೋಟುಗಳನ್ನು ಮೊದಲು ಪ್ರಾಯೋಗಿಕವಾಗಿ ಚಲಾವಣೆಗೆ ತಂದು, ನಂತರ ದೇಶದಾದ್ಯಂತ ಚಲಾವಣೆಗೆ ತರುವ ಬಗ್ಗೆ ಆರ್‌ಬಿಐ ಈ ಮೊದಲೇ ಯೋಜನೆ ರೂಪಿಸಿತ್ತು. ಮೈಸೂರು, ಕೊಚ್ಚಿ, ಜೈಪುರ, ಶಿಮ್ಲಾ ಹಾಗೂ ಭುವನೇಶ್ವರದಲ್ಲಿ 10 ರೂ. ಮುಖಬೆಲೆಯ 100 ಕೋಟಿ ನೋಟನ್ನು ಪ್ರಾಯೋಗಿಕವಾಗಿ ಚಲಾವಣೆಗೆ ತರುವುದಾಗಿ ಬಿಜೆಪಿ ಸರ್ಕಾರ 2014ರಲ್ಲಿ ಸಂಸತ್ತಿಗೆ ಮಾಹಿತಿ ನೀಡಿತ್ತು. ಆದರೆ ಇನ್ನೂ ಅದು ಜಾರಿಗೆ ಬಂದಿಲ್ಲ. ಪ್ಲಾಸ್ಟಿಕ್ ನೋಟುಗಳನ್ನು ಸುಲಭವಾಗಿ ನಕಲು ಮಾಡಲು ಸಾಧ್ಯವಿಲ್ಲ.

## <u>ರಾಷ್ಟ್ರೀಯ ಜಲಶಾಸ್ತ್ರ ಯೋಜನೆಗೆ ವಿಶ್ವಬ್ಯಾಂಕಿನಿಂದ $175 ಮಿಲಿಯನ್ ನೆರವು</u>

ಭಾರತದ ಮಹತ್ವಕಾಂಕ್ಷಿ "ರಾಷ್ಟ್ರೀಯ ಜಲಶಾಸ್ತ್ರ ಯೋಜನೆ (National Hydrology Project)"ಗೆ ವಿಶ್ವಬ್ಯಾಂಕ್ $175 ಮಿಲಿಯನ್ ಆರ್ಥಿಕ ನೆರವನ್ನು ನೀಡಲು ಒಪ್ಪಿದೆ. ಪ್ರವಾಹ ಮುನ್ಸೂಚನೆ ಹಾಗೂ ತೀವ್ರವಾಗಿ ಕಾಡುವ ಬರಗಾಲ ಮತ್ತು ಪ್ರವಾಹದ ಭೀತಿಯನ್ನು ಕಡಿಮೆಗೊಳಿಸುವುದು ಯೋಜನೆಯ ಉದ್ದೇಶ. ಈ ನೆರವನ್ನು ಅಂತಾರಾಷ್ಟ್ರೀಯ ಪುನರ್ ನಿರ್ಮಾಣ ಹಾಗೂ ಅಭಿವೃದ್ಧಿ ಬ್ಯಾಂಕ್ 23 ವರ್ಷಗಳ ವಾಯಿದೆ ಅವಧಿಗೆ ನೀಡಲಿದೆ. ಇದರಲ್ಲಿ ಮೊದಲ ಆರು ವರ್ಷಗಳ ಅವಧಿಗೆ ಯಾವುದೇ ಬಡ್ಡಿಯನ್ನು ನೀಡಬೇಕಿಲ್ಲ.

**ರಾಷ್ಟ್ರೀಯ ಜಲಶಾಸ್ತ್ರ ಯೋಜನೆ:**

- ರಾಷ್ಟ್ರೀಯ ಜಲಶಾಸ್ತ್ರ ಯೋಜನೆಯು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಕೇಂದ್ರ ಸಚಿವ ಸಂಪುಟ 2016ರಲ್ಲಿ ಅನುಮೋದನೆ ನೀಡಿತು. ಆನಂತರ ವಿಶ್ವಬ್ಯಾಂಕ್ ಆಡಳಿತ ಮಂಡಳಿ ಸಹ ಯೋಜನೆಯನ್ನು ಅನುಮೋದಿಸಿತು. ಯೋಜನೆಯ ಒಟ್ಟು ವೆಚ್ಚ ರೂ 3679 ಕೋಟಿ.
- ಈ ಯೋಜನೆಯ ಒಟ್ಟು ಮೊತ್ತದಲ್ಲಿ ರೂ 3640 ಕೋಟಿಯನ್ನು ಯೋಜನೆಯ ಅನುಷ್ಠಾನಕ್ಕೆ ಬಳಸಲಾಗುವುದು. ಉಳಿದ ರೂ 39 ಕೋಟಿಯನ್ನು "ರಾಷ್ಟ್ರೀಯ ಜಲ ಮಾಹಿತಿ ಕೇಂದ್ರ (NWIC)" ಸ್ಥಾಪಿಸಲು ಬಳಸಲಾಗುವುದು. ರಾಷ್ಟ್ರವ್ಯಾಪ್ತಿ ಜಲಸಂಪನ್ಮೂಲ ಮಾಹಿತಿಯನ್ನು ಈ ಕೇಂದ್ರ ಹೊಂದಿರಲಿದೆ.
- ಹೈಡ್ರಾಲಜಿ-I ಹಾಗೂ ಹೈಡ್ರಾಲಜಿ-II ಯೋಜನೆ ಈಗಾಗಲೇ ಯಶಸ್ವಿಯಾಗಿದ್ದು, ಇದೇ ಮಾದರಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

- ಹೈಡ್ರಾಲಜಿ-I ಹಾಗೂ ಹೈಡ್ರಾಲಜಿ-II ಯೋಜನೆಗಳು ದೊಡ್ಡ ನದಿಗಳಾದ ಕೃಷ್ಣ ಮತ್ತು ಸಟ್ಲೇಜ್-ಬಿಯಾಸ್ ಮಾತ್ರ ಸಂಬಂಧಿಸಿತ್ತು. ಆದರೆ ಹೊಸ ಯೋಜನೆಯನ್ನು ಗಂಗಾ-ಬ್ರಹ್ಮಪುತ್ರ ನದಿ ದಡಗಳ ರಾಜ್ಯಗಳು ಸೇರಿದಂತೆ ದೇಶವ್ಯಾಪ್ತಿ ಅನುಷ್ಠಾನಗೊಳಿಸಲಾಗುವುದು.

**<u>ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರ ಶೇ 0.1 ರಷ್ಟು ಇಳಿಕೆ</u>**



ಕೇಂದ್ರ ಸರ್ಕಾರ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರಗಳನ್ನು ಏಪ್ರಿಲ್-ಜೂನ್ ತ್ರೈಮಾಸಿಕ ಅವಧಿಗೆ ಶೇ 0.1ರಷ್ಟು ಇಳಿಕೆ ಮಾಡಿದೆ. ಪಿಪಿಎಫ್, ಕಿಸಾನ್ ವಿಕಾಸ್ ಪತ್ರ ಮತ್ತು ಸುಕನ್ಯ ಸಮೃದ್ದಿ ಯೋಜನೆ, ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ ಇತ್ಯಾದಿ ಸಣ್ಣ ಉಳಿತಾಯ ಯೋಜನೆಗಳ ಮೇಲೆ ಏಪ್ರಿಲ್-ಜೂನ್ ತ್ರೈಮಾಸಿಕ ಅವಧಿಗೆ ಅನುಗುಣವಾಗಿ ಶೇ. 0.1ರಷ್ಟು ಬಡ್ಡಿದರವನ್ನು ಕಡಿಮೆ ಮಾಡಲಾಗಿದೆ. ಅಂಚೆ ಉಳಿತಾಯ ಖಾತೆಗೆ ಇದು ಅನ್ವಯಿಸುವುದಿಲ್ಲ.

**ಪ್ರಮುಖಾಂಶಗಳು**:

- ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಯೋಜನೆಯ ವಾರ್ಷಿಕ ಬಡ್ಡಿದರ 8% ಬದಲಿಗೆ 7.9% ಇರಲಿದೆ.
- ಐದು ವರ್ಷದ ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರದ ಮೇಲಿನ ಬಡ್ಡಿದರ ಸಹ ಶೇ 7.9% ತಗುಲಲಿದೆ.
- ಕಿಸಾನ್ ವಿಕಾಸ್ ಪತ್ರ ಪರಿಷ್ಕೃತ ದರ ಶೇ 7.6% ರಷ್ಟಿರಲಿದೆ.
- ಸುಕನ್ಯ ಸಮೃದ್ದಿ ಯೋಜನೆ ಬಡ್ಡಿದರ ಶೇ 8.5% ಬದಲು ಶೇ 8.4% ರಷ್ಟಿರಲಿದೆ.
- ಹಿರಿಯ ನಾಗರಿಕರ ಉಳಿತಾಯ ಯೋಜನೆ ಐದು ವರ್ಷದ ಅವಧಿಗೆ ಶೇ 8.4% ಇರಲಿದೆ.

ಬ್ಯಾಂಕ್‌ಗಳು ಠೇವಣಿ ಮೇಲಿನ ಬಡ್ಡಿದರ ಕಡಿತ ಮಾಡಲು ಉತ್ತೇಜಿಸುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರ ತಿಳಿಸಿದೆ. ಸರ್ಕಾರಿ ಬಾಂಡ್‌ಗಳ ಗಳಿಕೆ ಆಧರಿಸಿ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರ ನಿಗದಿ ಮಾಡಲಾಗುತ್ತದೆ.

# ರಾಜ್ಯ

**ರಾಜ್ಯದಲ್ಲಿ ಹೊಸದಾಗಿ 49 ತಾಲ್ಲೂಕುಗಳ ರಚನೆ**



ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ರಾಜ್ಯದಲ್ಲಿ ಹೊಸದಾಗಿ 49 ಹೊಸ ತಾಲ್ಲೂಕುಗಳ ರಚನೆಯನ್ನು ಘೋಷಿಸಲಾಗಿದೆ. 'ಭೌಗೋಳಿಕ ಹಾಗೂ ಆಡಳಿತಾತ್ಮಕ ಅಗತ್ಯಗಳನ್ನು ಪರಿಗಣಿಸಿ ಹೊಸ ತಾಲ್ಲೂಕುಗಳ ರಚನೆಗೆ ಕ್ರಮಕೈಗೊಳ್ಳಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

**ಹೊಸ ತಾಲ್ಲೂಕುಗಳು:**

* **ಚಾಮರಾಜನಗರ ಜಿಲ್ಲೆ**: ಹನೂರು

* **ದಾವಣಗೆರೆ ಜಿಲ್ಲೆ**: ನ್ಯಾಮತಿ

* **ಬೀದರ್ ಜಿಲ್ಲೆ**: ಬಿಟಗುಪ್ಪ, ಹುಲಸೂರು ಮತ್ತು ಕಮಲಾನಗರ

* **ಬಾಗಲಕೋಟೆ ಜಿಲ್ಲೆ**: ಗುಳೇದಗುಡ್ಡ, ರಬಕವಿ–ಬನಹಟ್ಟಿ ಮತ್ತು ಇಳಕಲ್

* **ಬೆಳಗಾವಿ ಜಿಲ್ಲೆ**: ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ

* **ಕೊಪ್ಪಳ ಜಿಲ್ಲೆ**: ಕುಕನೂರು, ಕನಕಗಿರಿ ಮತ್ತು ಕಾರಟಗಿ

* **ರಾಯಚೂರು ಜಿಲ್ಲೆ**: ಮಸ್ಕಿ ಮತ್ತು ಸಿರವಾರ

* **ಉಡುಪಿ ಜಿಲ್ಲೆ**: ಬ್ರಹ್ಮಾವರ, ಕಾಪು ಮತ್ತು ಬೈಂದೂರು

* **ದಕ್ಷಿಣ ಕನ್ನಡ ಜಿಲ್ಲೆ**: ಮೂಡುಬಿದರೆ ಮತ್ತು ಕಡಬ

* **ಬೆಂಗಳೂರು ನಗರ ಜಿಲ್ಲೆ**: ಯಲಹಂಕ

* **ವಿಜಯಪುರ ಜಿಲ್ಲೆ**: ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ

* **ಹಾವೇರಿ ಜಿಲ್ಲೆ**: ರಟ್ಟೀಹಳ್ಳಿ

* **ಮೈಸೂರು ಜಿಲ್ಲೆ**: ಸರಗೂರು

* **ಚಿಕ್ಕಮಗಳೂರು ಜಿಲ್ಲೆ**: ಅಜ್ಜಂಪುರ

* **ಉತ್ತರ ಕನ್ನಡ ಜಿಲ್ಲೆ**: ದಾಂಡೇಲಿ

* **ಕೋಲಾರ ಜಿಲ್ಲೆ**: ಕೆಜಿಎಫ್

* **ಬಳ್ಳಾರಿ ಜಿಲ್ಲೆ**: ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ

* **ಧಾರವಾಡ ಜಿಲ್ಲೆ**: ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರ

* **ಗದಗ ಜಿಲ್ಲೆ**: ಗಜೇಂದ್ರಗಡ ಮತ್ತು ಲಕ್ಷ್ಮೇಶ್ವರ

* **ಕಲಬುರಗಿ ಜಿಲ್ಲೆ**: ಕಾಳಗಿ, ಕಮಲಾಪುರ, ಯಡ್ರಾವಿ ಮತ್ತು ಶಹಾಬಾದ್

* **ಯಾದಗಿರಿ ಜಿಲ್ಲೆ**: ಹುಣಸಗಿ, ವಡಗೆರೆ ಮತ್ತು ಗುರುಮಿಟ್ಕಲ್

## ಕರ್ನಾಟಕ ಬಜೆಟ್ 2017-18: ಒಂದು ನೋಟ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2017-18ನೇ ಸಾಲಿನ ರಾಜ್ಯ ಆಯವ್ಯಯವನ್ನು ಮಂಡಿಸಿದರು. ಇದು ಸಿದ್ದರಾಮಯ್ಯ ಅವರು ಮಂಡಿಸಿದ ಒಂಬತ್ತನೇ ಆಯವ್ಯಯ ಆಗಿದೆ. ಬಜೆಟ್ ನ ಪ್ರಮುಖಾಂಶಗಳು ಇಂತಿವೆ.

**ಆಯವ್ಯಯ ಗಾತ್ರ (ಸಂಚಿತ ನಿಧಿ)-**1,86,561 ಕೋಟಿ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 14.16 ರಷ್ಟು ಹೆಚ್ಚಳ.

**ಒಟ್ಟು ಸ್ವೀಕೃತಿ:** 1,82,119 ಕೋಟಿ ರೂ, ರಾಜಸ್ವ ಸ್ವೀಕೃತಿ 1,44,892 ಕೋಟಿ ಮತ್ತು 37,092 ಕೋಟಿ ರೂ ಸಾಲ ಮತ್ತು 135 ಕೋಟಿ ರೂ ಬಂಡವಾಳ ಸ್ವೀಕೃತಿ.

**ಒಟ್ಟು ವೆಚ್ಚ:** 1, 86,561 ಕೋಟಿ ರೂ, ರಾಜಸ್ವ ವೆಚ್ಚ-1, 44, 75 ಕೋಟಿ ರೂ, ಬಂಡವಾಳ ವೆಚ್ಚ 33,630 ಕೋಟಿ ಹಾಗೂ ಸಾಲ ಮರು ಪಾವತಿ 8,176 ಕೋಟಿ.

ಯಾವ ಕ್ಷೇತ್ರಕ್ಕೆ ಎಷ್ಟು?

- ಜಲಸಂಪನ್ಮೂಲ್ ಕ್ಷೇತ್ರಕ್ಕೆ 11,349 ಕೋಟಿ ರೂ, ಶಿಕ್ಷಣ ಕ್ಷೇತ್ರಕ್ಕೆ 21,305 ಕೋಟಿ ರೂ, ಇಂಧನ ಕ್ಷೇತ್ರಕ್ಕೆ 11,693 ಕೋಟಿ ರೂ, ನಗರಾಭಿವೃದ್ಧಿಗೆ 9995 ಕೋಟಿ ರೂ, ಸಮಾಜ ಕಲ್ಯಾಣ ಕ್ಷೇತ್ರಕ್ಕೆ 6475 ಕೋಟಿ ರೂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕ್ಷೇತ್ರಕ್ಕೆ 3670 ಕೋಟಿ ರೂ, ಲೋಕೋಪಯೋಗಿ 6634 ಕೋಟಿ ರೂ, ಗ್ರಾಮೀಣಾಭಿವೃದ್ಧಿಗೆ 9361 ಕೋಟಿ ರೂ, ಬಿಬಿಎಂಪಿಗೆ 1527 ಕೋಟಿ ರೂ.

### ತೆರಿಗೆ ಪ್ರಸ್ತಾವನೆಗಳು

- ಸಿರಿಧಾನ್ಯಗಳಾದ ನವಣೆ, ಸಾಮೆ ಹಿಟ್ಟುಗಳಿಗೆ ತೆರಿಗೆ ವಿನಾಯಿತಿ;

### ಸರಕು ಮತ್ತು ಸೇವಾ ತೆರಿಗೆ

- ಸರಕು ಮತ್ತು ಸೇವಾ ತೆರಿಗೆಯನ್ನು 01ನೇ ಜುಲೈ 2017 ರಿಂದ ದೇಶದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.
- ಕರ್ನಾಟಕವು ಸರಕು ಮತ್ತು ಸೇವಾ ತೆರಿಗೆಯಲ್ಲಿ ದೇಶದಲ್ಲಿಯೇ ಅತೀ ಹೆಚ್ಚಿನ ಮಟ್ಟದ ಸ್ಥಿತ್ಯಂತರದ ಪ್ರಗತಿಯನ್ನು ಸಾಧಿಸಿದೆ.
- ಸರಕು ಮತ್ತು ಸೇವಾ ತೆರಿಗೆಯ ಕುರಿತು ಅರಿವು ಮೂಡಿಸಲು ಕರದಾತರು ಹಾಗೂ ವೃತ್ತಿನಿರತರೊಂದಿಗೆ ಸಂಹವನಕ್ಕಾಗಿ 100 ಕ್ಕೂಹೆಚ್ಚು ಕಾರ್ಯಾಗಾರಗಳ ಹಾಗೂ ರೋಡ್ ಶೋಗಳ ಮೂಲಕ ಬೃಹತ್ ಪ್ರಮಾಣದ ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
- ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸಾಕಷ್ಟು ಸಾಮರ್ಥ್ಯ ಸಂವರ್ಧನೆಗಾಗಿ ಇಲಾಖೆಯ 3000ಕ್ಕೂ ಹೆಚ್ಚಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

### ಮೌಲ್ಯವರ್ಧಿತ ತೆರಿಗೆ

- ಪರಿಹಾರಗಳು ಮತ್ತು ಸುಧಾರಣಾ ಕ್ರಮಗಳು
- ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ, ರಾಗಿರೈಸ್ (ಸಂಸ್ಕರಿಸಿದ ರಾಗಿ) ಮತ್ತು ಗೋಧಿ ಪದಾರ್ಥಗಳ ಮೇಲಿನ ತೆರಿಗೆಯ ವಿನಾಯಿತಿಗೊಳಿಸಲಾಗಿದೆ.

- ಸಿರಿಧಾನ್ಯಗಳಾದ ನವಣೆ, ಸಾಮೆ, ಆರಕ ಮತ್ತು ಬರಗು ಇವುಗಳ ಹಿಟ್ಟುಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲಾಗಿದೆ.
- ದ್ವಿದಳ ಧಾನ್ಯಗಳು ಮತ್ತು ತೆಂಗಿನಕಾಯಿಯ ಸಿಪ್ಪೆಯ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲಾಗಿದೆ.

**ಆಡಳಿತಾತ್ಮಕ ಕ್ರಮಗಳು**

- 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ 2012-13 ಹಾಗೂ 2013-14ರ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಕರನಿರ್ಧರಣೆ ಅಥವಾ ಮರುಕರ ನಿರ್ಧರಣೆಗಳನ್ನು ಅಂತಿಮಗೊಳಿಸಲು ಇದ್ದ ಟಡೆರತಯುಇಉಯತರೆಡೆಒಂದು ವರ್ಷ ವಿಸ್ತರಿಸಲಾಗಿದೆ.
- ಪ್ರಕರಣ 40 ಕ್ಕೆ ತಿದ್ದುಪಡಿ ಮಾಡುವ ಮೂಲಕ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗೆ ಕಾಲಮಿತಿಯನ್ನು ಪರಿಗಣಿಸುವಾಗ ಮರುಪರಿಶೀಲನಾ ನಡಾವಳಿಗಳನ್ನು ವಿಲೇ ಮಾಡಲು ತೆಗೆದುಕೊಳ್ಳುವ ಅವಧಿಯನ್ನು ಹೊರತುಪಡಿಸಲಾಗಿದೆ.
- ಬಾಕಿ ಇರುವ ಪೂರ್ಣ ತೆರಿಗೆ ಮತ್ತು ಬಾಕಿ ಇರುವ ಬಡ್ಡಿ ಮತ್ತು ದಂಡದ ಶೇಕಡಾ 10ರಷ್ಟನ್ನು 31ನೇ ಮೇ 2017 ರ ಒಳಗೆ ಪಾವತಿಸಿದಲ್ಲಿ, ಇನ್ನುಳಿದ ಶೇಕಡಾ 90 ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಅನುಕೂಲವಾಗುವಂತೆ ಕರಸಮಾಧಾನ ಯೋಜನೆಯನ್ನು ಜಾರಿಗೆ ತರಲಾಗಿದೆ

**ಬಜೆಟ್ ಪ್ರಸ್ತಾವನೆಗಳ ವಿವರ**

- ಜಿಲ್ಲೆಗಳಲ್ಲಿ ಹೊಸ ತಾಲೂಕುಗಳ ಘೋಷಣೆ
- ಅಮ್ಮಾ ಕ್ಯಾಂಟೀನ್ ಮಾದರಿಯಲ್ಲೇ ಬೆಂಗಳೂರಿನ ಪ್ರತೀ ವಾರ್ಡ್ ತಲಾ ಒಂದರಂತೆ 198 ನಮ್ಮ ಕ್ಯಾಂಟೀನ್ ಸ್ಥಾಪನೆ. 5 ರುಪಾಯಿಗೆ ತಿಂಡಿ, 10 ರುಪಾಯಿಗೆ ಊಟ..ಇದು ನಮ್ಮ ಕ್ಯಾಂಟೀನ್ ವಿಶೇಷತೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸವಿರುಚಿ ಸಂಚಾರಿ ಕ್ಯಾಂಟೀನ್.
- 2 ಲಕ್ಷ ಮಹಿಳೆಯರಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆ. ಹೊಸ ತಾಲೂಕು ಪಂಚಾಯಿತಿ ಕಚೇರಿ ನಿರ್ಮಾಣಕ್ಕೆ 300 ಕೋಟಿ ಅನುದಾನ.
- ರೈತರ ಸಾಲ ಮನ್ನಾ ಇಲ್ಲ. ಸಾಲ ಮರುಪಾವತಿ ಅವಧಿ ವಿಸ್ತರಣೆ. ಶೂನ್ಯ ಬಡ್ಡಿದರದಲ್ಲಿ 3 ಲಕ್ಷದವರೆಗೆ ಸಾಲ ಸೌಲಭ್ಯ ಮುಂದುವರಿಕೆ. 30 ಕೋಟಿ ವೆಚ್ಚದಲ್ಲಿ ಮೋಡ ಬಿತ್ತನೆ ಕಾರ್ಯ
- ಅಪಘಾತದಲ್ಲಿ ಹಸು, ಎತ್ತು ಸಾವನ್ನಪ್ಪಿದರೆ 10 ಸಾವಿರ ರೂಪಾಯಿ ಪರಿಹಾರ.
- ಅನ್ನಭಾಗ್ಯ ಅಕ್ಕಿ 5ಕೆಜಿಯಿಂದ 7ಕೆಜಿಗೆ ಏರಿಕೆ. ಅನ್ನಭಾಗ್ಯದ ಅಕ್ಕಿ ಕುಟಂಬಕ್ಕೆ 35ಕೆಜಿಗೆ ಏರಿಕೆ.
- ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನಲ್ಲಿ ಹೊಸ ಮೆಡಿಕಲ್ ಕಾಲೇಜು ಸ್ಥಾಪನೆ. ದಾವಣಗೆರೆ, ತುಮಕೂರು, ವಿಜಯಪುರ, ಕೋಲಾರ, ರಾಮನಗರದಲ್ಲಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ. ರಾಜ್ಯದ ಗ್ರಾಮೀಣ ಭಾಗಗಳಲ್ಲಿ ತಲಾ 4 ಕೋಟಿ ರೂ. ವೆಚ್ಚದಲ್ಲಿ 25 ಹೊಸ ಪಾಲಿಟೆಕ್ನಿಕ್ ಕಾಲೇಜು ಸ್ಥಾಪನೆ

- 2017-18ನೇ ಸಾಲಿನಲ್ಲಿ 1,86, 561 ಕೋಟಿ ರುಪಾಯಿ ಗಾತ್ರದ ಬಜೆಟ್ ಮಂಡನೆ. 25 ಲಕ್ಷ ರೈತರಿಗೆ 13, 500 ಕೋಟಿ ರುಪಾಯಿ ಕೃಷಿ ಸಾಲ ನೀಡುವ ಗುರಿ.
- ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ. ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 5ದಿನ ಮಕ್ಕಳಿಗೆ ಹಾಲು ವಿತರಣೆ.
- ಕೆರೆ ಸಂಜೀವಿನಿ ಯೋಜನೆ. 3 ಸಾವಿರ ಕೋಟಿ ರುಪಾಯಿ ವೆಚ್ಚದಲ್ಲಿ ನೀರಾವರಿ ಯೋಜನೆ. 42 ಕೋಟಿ ರೂಪಾಯಿ ವೆಚ್ಚದಲ್ಲಿ 10 ಕೆರೆಗಳ ಅಭಿವೃದ್ಧಿ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಚಿತ ಕುಡಿಯುವ ನೀರಿನ ಯೋಜನೆ. ತಿಂಗಳಿಗೆ 10 ಸಾವಿರ ಲೀಟರ್ ಉಚಿತ ಕುಡಿಯುವ ನೀರು ವಿತರಣೆ.
- ಸರಕು ಸೇವಾ ತೆರಿಗೆ ಜಾರಿ ಹಿನ್ನೆಲೆಯಲ್ಲಿ ತೆರಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಗೋಧಿ ಪದಾರ್ಥಗಳ ಮೇಲಿನ ತೆರಿಗೆ ವಿನಾಯ್ತಿ ಮುಂದುವರಿಕೆ.
- ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ತೆಯರಿಗಾಗಿ 145 ಚಿಕಿತ್ಸಾ ಘಟಕ ಸ್ಥಾಪನೆ.
- ಬೆಳೆಗಳ ಮೇಲಿನ ತೆರಿಗೆ ವಿನಾಯ್ತಿ ಮುಂದುವರಿಕೆ. ಭತ್ತ, ಅಕ್ಕಿ, ಗೋಧಿ, ಕಾಳುಗಳ ಮೇಲೆ ತೆರಿಗೆ ವಿನಾಯ್ತಿ.
- ತುಂತುರು ನೀರಾವರಿ ಯೋಜನೆಗೆ 375 ಕೋಟಿ ಅನುದಾನ. ಕೃಷಿ ಇಲಾಖೆಗೆ 5080 ಕೋಟಿ ರೂಪಾಯಿ ಅನುದಾನ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸವಿರುಚಿ ಸಂಚಾರಿ ಕ್ಯಾಂಟೀನ್.
- ಖಾಸಗಿ ಸಂಸ್ಥೆಗಳಲ್ಲಿ ಎಸ್ ಸಿ, ಎಸ್ ಟಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಆಶಾದೀಪ ಯೋಜನೆ. ಪರಿಶಿಷ್ಟ, ಜಾತಿ ಮತ್ತು ಪಂಗಡಗಳ ನಿರುದ್ಯೋಗಿಗಳಿಗೆ 3 ಲಕ್ಷ ಅನುದಾನ.
- ಶ್ರವಣಬೆಳಗೊಳ ಮಹಾಮಸ್ತಾಕಾಭಿಷೇಕಕ್ಕೆ 175 ಕೋಟಿ.
- 1 ಲಕ್ಷ ದ್ವಿಚಕ್ರ ವಾಹನಗಳ ಮೇಲಿನ ತೆರಿಗೆ ಹೆಚ್ಚಳ.
- ಮಲ್ಟಿಪ್ಲೆಕ್ಸ್ ಗಳಲ್ಲಿನ ಚಿತ್ರಮಂದಿರದ ಟಿಕೆಟ್ ದರ 200ಕ್ಕೆ ನಿಗದಿ. ಕನ್ನಡ ಚಿತ್ರೋದ್ಯಮ ಅಭಿವೃದ್ಧಿಗೆ ಮೈಸೂರಿನ ಹಿಮ್ಮಾವು ಎಂಬಲ್ಲಿ ಚಿತ್ರನಗರಿ ನಿರ್ಮಾಣ.
- ಎಪಿಎಂಪಿಸಿಯಲ್ಲಿ ವೈಜ್ಞಾನಿಕವಾಗಿ ಹಣ್ಣು ಮಾಗಿಸುವ ವ್ಯವಸ್ಥೆಗೆ 10 ಕೋಟಿ ಮೀಸಲು
- ಮದ್ಯದ ಮೇಲೆ ಹೆಚ್ಚುವರಿ ಅಬಕಾರಿ ಸುಂಕ. ಬಿಯರ್, ಫೆನ್ನಿ, ಲಿಕ್ಕರ್, ವೈನ್ ಮೇಲಿನ ಮೌಲ್ಯವರ್ಧಿತ ತೆರಿಗೆ ರದ್ದು. ಅಬಕಾರಿ ಶುಲ್ಕದಲ್ಲಿ ಹೆಚ್ಚಳ. ರಾಜ್ಯದಲ್ಲಿ ನೀರಾ ನೀತಿ ಜಾರಿ. ರಾಜ್ಯ ಅಬಕಾರಿ ಕಾಯ್ದೆಗೆ ತಿದ್ದುಪಡಿ.
- 2,200 ಕೋಟಿ ರೂಪಾಯಿ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ. ಕೆರೆ ಸಂಜೀವಿನಿ ಯೋಜನೆಗೆ 100 ಕೋಟಿ ರೂಪಾಯಿ. 200 ಕೋಟಿ ರೂಪಾಯಿ ವೆಚ್ಚದಲ್ಲಿ ಶುದ್ಧ ಕುಡಿಯುವ ಯೋಜನೆ.
- ಸ್ವಾತಂತ್ರ್ಯ ಯೋಧರ ಮಾಸಾಶನ 8,000 ರೂಗಳಿಂದ 10,000 ರೂಗಳಿಗೆ ಮತ್ತು ಗೋವಾ ವಿಮೋಚನಾ ಹೋರಾಟಗಾರರ ಮಾಸಾಶನ 3,000 ರೂಗಳಿಂದ 4,000 ರೂಗಳಿಗೆ ಹೆಚ್ಚಳ.

- ಬೆಂಗಳೂರನ್ನು ವಿದ್ಯುತ್ ಚಾಲಿತ ವಾಹನಗಳ ರಾಜಧಾನಿಯನ್ನಾಗಿ ರೂಪಿಸಲು ಚಿಂತನೆ. ಬೆಂಗಳೂರಿನ ಐಐಐಟಿಯಲ್ಲಿ ರೋಬೋಟಿಕ್ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ.
- ಖಾದಿ, ಗ್ರಾಮೋದ್ಯಮ ಉತ್ತೇಜಿಸಲು 4 ಕೋಟಿ ರೂ. ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯದ ಎರಡು ಕಡೆ ಖಾದಿ ಪ್ಲಾಜಾ ಸ್ಥಾಪಿಸಲು ನಿರ್ಧಾರ.
- ರಾಜ್ಯ ಸರ್ಕಾರದಿಂದ 50 'ಸಾಲು ಮರದ ತಿಮ್ಮಕ್ಕ' ವೃಕ್ಷ ಪಾರ್ಕ್ ಅಭಿವೃದ್ಧಿ.
- ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡನೇ ಟರ್ಮಿನಲ್ ನಿರ್ಮಾಣಕ್ಕೆ ಕ್ರಮ.
- ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡನೇ ಟರ್ಮಿನಲ್ ನಿರ್ಮಾಣಕ್ಕೆ ಕ್ರಮ.
- 'ಜನೌಷಧಿ ಜೆನರಿಕ್ ಔಷಧಿ ಮಳಿಗೆ' ಯೋಜನೆ ಅಡಿಯಲ್ಲಿ 200 ಜೆನರಿಕ್ ಮೆಡಿಕಲ್ ಸ್ಟೋರ್‌ಗಳ ಸ್ಥಾಪನೆ.
- ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ. ಭಾರತ ಭಾಗ್ಯವಿದಾತ ಧ್ವನಿ ಬೆಳಕು ಯೋಜನೆ. ಗೇರು ಅಭಿವೃದ್ಧಿ ಮಂಡಳಿ ಸ್ಥಾಪನೆ.
- ಕೆಎಸ್ ಆರ್ ಟಿಸಿಗೆ 3,250 ಹೊಸ ಬಸ್ ಸೇರ್ಪಡೆ. ಬೆಂಗಳೂರು ನಗರಕ್ಕೆ 150 ಎಲೆಕ್ಟ್ರಿಕ್ ಬಸ್.
- ಸಣ್ಣ ನೀರಾವರಿ 2099, ಪಶುಸಂಗೋಪನೆ 2245 ಕೋಟಿ, ಅರಣ್ಯ, ಪರಿಸರ ಮತ್ತು ಸಂರಕ್ಷಣೆ 1732 ಕೋಟಿ , ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ 3154 ಕೋಟಿ ಅನುದಾನ.
- ಐಟಿ, ಬಿಟಿ ವಿಜ್ಞಾನ ತಂತ್ರಜ್ಞಾನಕ್ಕೆ 299 ಕೋಟಿ, ಕಾನೂನು, ಕ್ರೀಡಾ ಮತ್ತು ಯುವಜನ 285 ಕೋಟಿ, ನ್ಯಾಯಾಲಯಕ್ಕೆ 731 ಕೋಟಿ ಅನುದಾನ.
- ಉನ್ನತ ಶಿಕ್ಷಣಕ್ಕೆ 4401 ಕೋಟಿ, ವೈದ್ಯಕೀಯ ಶಿಕ್ಷಣಕ್ಕೆ 2004 ಕೋಟಿ, ಸಮಾಜ ಕಲ್ಯಾಣಕ್ಕೆ 6363 ಕೋಟಿ, ವಸತಿ 4708 ಕೋಟಿ, ಮೀನುಗಾರಿಕೆಗೆ 337 ಕೋಟಿ ಅನುದಾನ.
- "ಕೆ' ಶಿಪ್ 3 ಯೋಜನೆಯಡಿ 418.5 ಕಿಮೀ ರಸ್ತೆ ಅಭಿವೃದ್ಧಿ. 5310 ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ಬೆಂಗಳೂರು ನಗರದ ವಾಹನ ದಟ್ಟಣೆ ನಿಯಂತ್ರಿಸಲು ಕ್ರಮ. ಬೆಂಗಳೂರು, ಮಾಗಡಿ 50 ಕಿಮೀ ರಸ್ತೆ ಅಭಿವೃದ್ಧಿ. 1455 ಕೋಟಿ ವೆಚ್ಚದಲ್ಲಿ 150 ಕಿಮೀ ರಸ್ತೆ ಅಭಿವೃದ್ಧಿ.
- ಶಬರಿಮಲೆಯಲ್ಲಿ ಕರ್ನಾಟಕದ ಉಪ ಕಚೇರಿ ಆರಂಭಿಸಲಾಗುವುದು. ರಾಜ್ಯದ 50ಲಕ್ಷಕ್ಕೂ ಹೆಚ್ಚು ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಈ ಯೋಜನೆ. ಕಚೇರಿಯಲ್ಲಿ ವೈದ್ಯಕೀಯ ಸೌಲಭ್ಯ, ಸಹಾಯವಾಣಿ ಮತ್ತು ರಕ್ಷಣೆಗಾಗಿ ಕ್ರಮ.
- ಜೈಲುಗಳಲ್ಲಿ ಕೈದಿಗಳ ವಿಚಾರಣೆಗಾಗಿ ವಿಡಿಯೋ ಕಾನ್ಫರೆನ್ಸ್. ಬಾಲಕಾರ್ಮಿಕ ಮುಕ್ತ ರಾಜ್ಯವಾಗಿಸಲು ಯೋಜನೆ.
- ಉತ್ತರಕರ್ನಾಟಕಕ್ಕೆ ಪ್ರತ್ಯೇಕ ಬಯಲಾಟ ಅಕಾಡೆಮಿ. ಬನವಾಸಿ ಹಾಗೂ ಸರ್ವಜ್ಞ ಪೀಠ ಅಭಿವೃದ್ಧಿಗೆ 5 ಕೋಟಿ ಮೀಸಲು.

- ಕೃಷಿಯಲ್ಲಿ ತಾಂತ್ರಿಕ ಬಳಕೆಗೆ ಪ್ರೋತ್ಸಾಹ. ಬೇಸಾಯದಲ್ಲಿ ತಾಂತ್ರಿಕತೆ ಬಳಸುವ ರೈತರಿಗೆ ಸಹಾಯಧನ.
- 16, 500 ನರ್ಸ್ ಗಳಿಗೆ ಕಂಪ್ಯೂಟರ್ ಟ್ಯಾಬ್ ನೀಡಲಾಗುವುದು. ಆರೋಗ್ಯಕರ, ಪರಿಸರ ಸ್ನೇಹಿ ವ್ಯವಸ್ಥೆ ಜಾರಿಗೊಳಿಸಲು ಬಾಡಿಗೆ ಸೈಕಲ್ ಒದಗಿಸುವ ಯೋಜನೆ ಜಾರಿ. ಎಲ್ಲಾ ಇಎಸ್ಐ ಆಸ್ಪತ್ರೆಗಳಲ್ಲಿ ಆಯೂಷ್ ವಿಭಾಗ ಆರಂಭ.
- ಭಾಗ್ಯಜ್ಯೋತಿ ಯೋಜನೆಯಡಿ ನೀಡುವ ಉಚಿತ ವಿದ್ಯುತ್ 18 ಯೂನಿಟ್ ನಿಂದ 40 ಯೂನಿಟ್ ಗೆ ಏರಿಕೆ.
- ಒಲಿಂಪಿಕ್ಸ್ ಪದಕ ವಿಜೇತರಿಗೆ ಎ ದರ್ಜೆ ಹುದ್ದೆ. ಏಷ್ಯನ್ ಮತ್ತು ಕಾಮನ್ ವೆಲ್ತ್ ಪದಕ ವಿಜೇತರಿಗೆ ಬಿ ದರ್ಜೆ ಹುದ್ದೆ. ಒಲಿಂಪಿಕ್ ಸ್ವರ್ಣ ವಿಜೇತರಿಗೆ 5 ಕೋಟಿ ಬಹುಮಾನ, ರಜತ ಪದಕ ವಿಜೇತರಿಗೆ 3 ಕೋಟಿ, ಕಂಚು ವಿಜೇತರಿಗೆ 2 ಕೋಟಿ.
- ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ವಿಶೇಷ App.
- ವೃದ್ದಾಪ್ಯ ವೇತನ 200 ರಿಂದ 500 ರುಪಾಯಿಗೆ ಹೆಚ್ಚಳ. 60ರಿಂದ 64 ವಯಸ್ಸಿನ ವೃದ್ದರಿಗೆ ಈ ಯೋಜನೆ ಲಾಭ.
- ವಿಶ್ವಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 20 ಕೋಟಿ ಅನುದಾನ. 60 ವರ್ಷಗಳ ಏಕೀಕರಣ ಸವಿನೆನಪಿಗಾಗಿ ವಿಶ್ವಕನ್ನಡ ಸಮ್ಮೇಳನ.
- ಶೌಚಾಲಯಕ್ಕಾಗಿ ಸಮರ ಎಂಬ ಹೆಸರಿನಲ್ಲಿ ಯೋಜನೆ. 28 ಲಕ್ಷ ಶೌಚಾಲಯ ನಿರ್ಮಾಣಕ್ಕೆ ಕ್ರಮ.
- ರಾಜ್ಯದ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಒಂದು ಸಾವಿರ ರೂಪಾಯಿ ವಿಶೇಷ ಗೌರವಧನ.
- ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ 2 ಸಾವಿರ ರೂಪಾಯಿ ಪಿಂಚಣಿ. ಗ್ರಾಮಗಳಲ್ಲಿ ಸಮುದಾಯ ದನದ ಕೊಟ್ಟಿಗೆ ನಿರ್ಮಾಣ. "ನಮ್ಮ ಹೊಲ, ನಮ್ಮ ದಾರಿ ಯೋಜನೆಯಡಿ ಮಣ್ಣಿನ ರಸ್ತೆ. 25 ಕಿ.ಮೀ. ಉದ್ದದ ಹೊಲಗಳಿಗೆ ಹೋಗುವ ಮಣ್ಣಿನ ರಸ್ತೆ.
- ಬೆಂಗಳೂರಿನಲ್ಲಿ ಉಪನಗರ ಯೋಜನೆ. ರಾಜ್ಯದಲ್ಲಿ ಹೊಸದಾಗಿ 460 ಗ್ರಾಮ ಪಂಚಾಯ್ತಿಗಳ ಆರಂಭ.
- ಕರಾವಳಿ ವ್ಯಾಪ್ತಿಯಲ್ಲಿ ಪಶ್ಚಿಮ ವಾಹಿನಿ ಯೋಜನೆ. ಚಿಕ್ಕಮಗಳೂರು, ಹಾಸನದಲ್ಲಿ ಚೆಕ್ ಡ್ಯಾಂ ನಿರ್ಮಾಣ.
- ಜನಪ್ರತಿನಿಧಿಗಳ ಗೌರವಧನ ಹೆಚ್ಚಳ. ತಾಪಂ ಅಧ್ಯಕ್ಷರ ಗೌರವಧನ 4.5ರಿಂದ 6 ಸಾವಿರಕ್ಕೆ ಏರಿಕೆ. ಜಿಪಂ ಸದಸ್ಯರ ಗೌರವಧನ 3 ಸಾವಿರದಿಂದ 5 ಸಾವಿರಕ್ಕೆ ಏರಿಕೆ. ತಾಲೂಕು ಪಂಚಾಯ್ತಿ ಸದಸ್ಯರ ಗೌರವಧನ 3 ಸಾವಿರ ಮತ್ತು ಗ್ರಾ.ಪಂ ಸದಸ್ಯರ ಗೌರವಧನ 1 ಸಾವಿರಕ್ಕೆ ಏರಿಕೆ.
- ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ.

- ಮಾತೃಪೂರ್ಣ ಯೋಜನೆಗೆ 302 ಕೋಟಿ ಅನುದಾನ, ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಬಿಸಿಯೂಟ. ಪೌಷ್ಠಿಕಾಂಶ ಕೊರತೆ ನಿವಾರಣೆಗೆ ಮಾತೃಪೂರ್ಣ ಯೋಜನೆ ಜಾರಿ.
- ಹೆಬ್ಬಾಳ ಜಂಕ್ಷನ್ ನಲ್ಲಿ ಅಂಡರ್ ಪಾಸ್ ನಿರ್ಮಾಣ. ಮೇಲ್ಸೆತುವೆ ಅಗಲಿಕರಣಕ್ಕೆ 88 ಕೋಟಿ ಅನುದಾನ. 690 ಕೋಟಿ ವೆಚ್ಚದಲ್ಲಿ ರಸ್ತೆಗಳ ಮೇಲ್ದರ್ಜೆಗೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 43 ಪ್ರಮುಖ ರಸ್ತೆಗಳ ಅಭಿವೃದ್ಧಿ. ಟೆಂಡರ್ ಶ್ಯೂರ್ ಮಾದರಿಯಲ್ಲಿ 25 ಕಿ.ಮೀ ರಸ್ತೆ ಅಭಿವೃದ್ಧಿ.
- ಕೃಷಿ ಕ್ಷೇತ್ರಕ್ಕೆ 5080 ಕೋಟಿ ರೂಪಾಯಿ ಮೀಸಲು, ಮಾವು ಬೆಳೆಗಾರರ ಉತ್ತೇಜನಕ್ಕೆ 88 ಕೋಟಿ ಮೀಸಲು.
- ರಾಜ್ಯದ 16 ಪ್ರವಾಸಿ ಕೇಂದ್ರಗಳು ವಿಶ್ವದರ್ಜೆಗೆ.
- ನಮ್ಮ ಮೆಟ್ರೋ ಹೆಚ್ಚುವರಿ ಮಾರ್ಗ ನಿರ್ಮಾಣ. ಸಿಲ್ಕ್ ಬೋರ್ಡ್ ನಿಂದ ಕೆಆರ್ ಪುರಂ ಜಂಕ್ಷನ್ ವರೆಗೆ ಮಾರ್ಗ. ಡಯಲ್ 100 ಜಿಲ್ಲಾ ಕೇಂದ್ರಗಳಿಗೂ ವಿಸ್ತರಣೆ.
- ನಿವೃತ್ತ ಪತ್ರಕರ್ತರ ಮಾಸಾಶನ 8 ಸಾವಿರದಿಂದ 10 ಸಾವಿರಕ್ಕೆ ಹೆಚ್ಚಳ. ಜಿಲ್ಲಾ ಕೇಂದ್ರಗಳಲ್ಲಿನ ಪತ್ರಕರ್ತರಿಗೆ ಉಚಿತ ಬಸ್ ಪಾಸ್.
- ಕಲಬುರಗಿಯಲ್ಲಿ ಪೊಲೀಸ್ ಆಯುಕ್ತಾಲಯ ಸ್ಥಾಪನೆ. ಪೊಲೀಸ್ ತರಬೇತಿ ಶಾಲೆಗಳ ಬಲವರ್ಧನೆಗೆ 10 ಕೋಟಿ ಅನುದಾನ.
- 2 ಸ್ಟ್ರೋಕ್ ಆಟೋಗಳ ರದ್ದತಿಗೆ ಕ್ರಮ. 4 ಸ್ಟ್ರೋಕ್ ಎಲ್ ಪಿಜಿ 10 ಸಾವಿರ ಆಟೋಗಳಿಗೆ 30 ಸಾವಿರ ರೂ. ಸಹಾಯಧನ.
- ಚಿಂತಾಮಣಿ, ರಾಣೆಬೆನ್ನೂರು, ಬಂಟ್ವಾಳದಲ್ಲಿ ಆರ್ ಟಿ ಒ ಸ್ಥಾಪನೆ.
- ಹಂತಗಳಲ್ಲಿ 1191 ಪಿಯು ಉಪನ್ಯಾಸಕರ ನೇಮಕ. ರಾಯಚೂರಿನಲ್ಲಿ ಹೊಸ ವಿವಿ ಸ್ಥಾಪನೆ. 1626 ಪ್ರೌಢಶಿಕ್ಷಕರ ನೇಮಕ. ಪ್ರೌಢಶಿಕ್ಷಣ ಇಲಾಖೆಗೆ 18, 266 ಕೋಟಿ ರೂಪಾಯಿ ಮೀಸಲು.
- ಉಡುಪಿ ಜಿಲ್ಲೆಯ ಬೈಂದೂರು, ಬ್ರಹ್ಮಾವರ,ಕಾಪು ಹೊಸ ತಾಲೂಕುಗಳಾಗಿ ಘೋಷಣೆ. ರಾಯಚೂದು ಜಿಲ್ಲೆಯ ಮಸ್ಕಿ, ಸಿರವಾರ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ, ಕಡಬ ಹೊಸ ತಾಲೂಕುಗಳಾಗಿ ಘೋಷಣೆ.
- ಬೆಂಗಳೂರಿನಲ್ಲಿ ವಾಯು, ಶಬ್ಧ ಮಾಲಿನ್ಯ ತಡೆಗೆ ಕ್ರಮ. ಬೆಂಗಳೂರಿನ ಸಬ್ ಅರ್ಬನ್ ರೈಲ್ವೆ ಯೋಜನೆಗೆ 345 ಕೋಟಿ.
- ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ 10 ಕೋಟಿ ರುಪಾಯಿ ಅನುದಾನ. ತೋಟಗಾರಿಕೆ ಇಲಾಖೆಗೆ 1091 ಕೋಟಿ ಅನುದಾನ.ದುಬಾರಿ ದ್ವಿಚಕ್ರ ವಾಹನ ಕೊಳ್ಳುವವರಿಗೆ ಬರೆ.
- ಮಡಿಕೇರಿ, ಕಾರವಾರ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏರ್ ಸ್ಟ್ರಿಪ್ ನಿರ್ಮಾಣ. 10 ಸಾವಿರ ಉತ್ಕೃಷ್ಟ ಟಗರು ಉತ್ಪಾದನಾ ಘಟಕ. ರಾಜ್ಯದ ಪ್ರತೀ ಮಾಂಸದಂಗಡಿಗೆ 1.25 ಲಕ್ಷ ರೂ. ಅನುದಾನ
- ಉನ್ನತ ಶಿಕ್ಷಣ ಇಲಾಖೆಗೆ ಒಟ್ಟು 4,401 ಕೋಟಿ ರೂಪಾಯಿ ಅನುದಾನ. ಶಾಲಾ ನಿರ್ವಹಣೆ, ಸುಧಾರಣೆಗೆ ಶಿಕ್ಷಣ ಕಿರಣ ಯೋಜನೆ ಜಾರಿ. ಹಂಪಿ ಕನ್ನಡ ವಿವಿಗೆ 25 ಕೋಟಿ ಯೋಜನೆ.

ಗ್ರಾಮೀಣ ಪ್ರದೇಶದಲ್ಲಿ 25 ಪಾಲಿಟೆಕ್ನಿಕ್ ಕಾಲೇಜು ಆರಂಭ. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 23 ಹೊಸ ಮಹಿಳಾ ಹಾಸ್ಟೆಲ್ ನಿರ್ಮಾಣ.

- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ವೈಫೈ ಯೋಜನೆ. ಖಾಸಗಿ ಸಂಸ್ಥೆಗಳಲ್ಲಿ ನಿವೃತ್ತಿ ವಯಸ್ಸು 58ರಿಂದ 60ಕ್ಕೆ ಏರಿಕೆ.
- ಬೆಂಗಳೂರು ವನ್ ಮಾದರಿಯಲ್ಲಿ ಕರ್ನಾಟಕ ವನ್. ರಾಜ್ಯದ 9 ಜಿಲ್ಲೆಗಳಲ್ಲಿ ಕರ್ನಾಟಕ ವನ್ ಕೇಂದ್ರ ಸ್ಥಾಪನೆ.

# ರಾಷ್ಟ್ರೀಯ

**<u>ದೇಶದ ಮೊದಲ ಸಮಗ್ರ ಹೆಲಿಪೋರ್ಟ್ (Heliport)ಗೆ ನವದೆಹಲಿಯಲ್ಲಿ ಚಾಲನೆ</u>**



ಭಾರತದ ಮೊದಲ ಸಮಗ್ರ ಹೆಲಿಪೋರ್ಟ್ ಗೆ ಉತ್ತರ ದೆಹಲಿಯ ರೋಹಿಣಿ ಬಳಿ ಚಾಲನೆ ನೀಡಲಾಯಿತು. ಪವನ್ ಹನ್ಸ್ ಲಿಮಿಟೆಡ್ ಈ ಹೆಲಿಪೋರ್ಟ್ ಅನ್ನು ಅಭಿವೃದ್ಧಿಪಡಿಸಿದೆ. ಕಡಲಾಚೆಗಿನ ಸಾರಿಗೆ ಸೇರಿದಂತೆ ಅಂಡಮಾನ್ & ನಿಕೋನರ್ ನ ಕೆಲವು ದುರ್ಗಮ ದ್ವೀಪ ಪ್ರದೇಶಗಳಿಗೆ ಸಂಚಾರ ಕಲ್ಪಿಸಲು ಈ ಹೆಲಿಪೋರ್ಟ್ ಮಹತ್ವದ ಪಾತ್ರವಹಿಸಲಿದೆ.

**ಪ್ರಮುಖಾಂಶಗಳು**:

- ಸುಮಾರು 25 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಈ ಹೆಲಿಪೋರ್ಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ. 150 ಪ್ರಯಾಣಿಕರ ಸಾಮರ್ಥ್ಯದ ಟರ್ಮಿನಲ್ಸ್ ಹಾಗೂ 16 ಹೆಲಿಕಾಪ್ಟರ್ ಗಳನ್ನು ನಿಲ್ಲಿಸಬಹುದಾದ ವ್ಯವಸ್ಥೆಯನ್ನು ಇದು ಒಳಗೊಂಡಿದೆ.
- ಹೆಲಿಕಾಪ್ಟರ್ ಗಳ ನಿರ್ವಹಣೆ, ರಿಪೇರಿ ಹಾಗೂ ಸಂಪೂರ್ಣ ದುರಸ್ತಿ ವ್ಯವಸ್ಥೆಯನ್ನು ಸಹ ಇಲ್ಲಿ ಕಲ್ಪಿಸಲಾಗಿದೆ.
- ವಿಪತ್ತು ನಿರ್ವಹಣೆ, ತುರ್ತು ವೈದ್ಯಕೀಯ ಸೇವೆ, ಕಾನೂನು ಸುವ್ಯವಸ್ಥೆ ಮತ್ತು ಪೈಲಟ್ ಹಾಗೂ ಎಂಜನಿಯರ್ ಗಳ ಕೌಶಲ್ಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಲಿದೆ.
- ಎಲ್ಲಕ್ಕಿಂತ ಮುಖ್ಯವಾಗಿ ದೆಹಲಿ ವಿಮಾನ ನಿಲ್ದಾಣದಲ್ಲಿ ಹೆಲಿಕಾಪ್ಟರ್ ಗಳ ಸಂಚಾರ ದಟ್ಟಣೆಯಲ್ಲಿ ಗಣನೀಯವಾಗಿ ಇಳಿಕೆಯಾಗಲಿದೆ. ಪ್ರಸ್ತುತ ದೆಹಲಿ ವಿಮಾನ ನಿಲ್ದಾಣದಲ್ಲಿ ಪ್ರತಿ ದಿನ 40-50 ಹೆಲಿಕಾಪ್ಟರ್ ಗಳು ಹಾರಾಟ ನಡೆಸುತ್ತಿವೆ.

## <u>ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾಗಿ ನಂದ್ ಕುಮಾರ್ ಸಾಯ್ ಅಧಿಕಾರ ಸ್ವೀಕಾರ</u>

National Commission for Scheduled Tribes

ಹಿರಿಯ ಬುಡಕಟ್ಟು ಜನಾಂಗದ ನಾಯಕ ಹಾಗೂ ಮಾಜಿ ಸಂಸದ ನಂದ್ ಕುಮಾರ್ ಸಾಯ್ ಅವರು "ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ (National Commission for Schedule Tribes)"ದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ರಾಮೇಶ್ವರ್ ಒರಯನ್ ಅವರ ಅಧಿಕಾರ ಅವಧಿ ಅಕ್ಟೋಬರ್ 31, 2016 ರಂದು ಅಂತ್ಯಗೊಂಡಿದ್ದು, ಅವರ ಉತ್ತರಾಧಿಕಾರಿಯಾಗಿ ಸಾಯ್ ನೇಮಕಗೊಂಡಿದ್ದಾರೆ. ಸಾಯ್ ಅವರು ಮುಂದಿನ ಮೂರು ವರ್ಷಗಳ ಕಾಲ ಸೇವೆಯಲ್ಲಿ ಇರಲಿದ್ದು, ಕೇಂದ್ರ ಸಂಪುಟ ಸಚಿವರ ಸ್ಥಾನಮಾನವನ್ನು ಹೊಂದಿರಲಿದ್ದಾರೆ.

**ನಂದ್ ಕುಮಾರ್ ಸಾಯ್:**

- ಬುಡಕಟ್ಟು ಜನಾಂಗದವರಲ್ಲಿ ಶೈಕ್ಷಣಿಕ ಪ್ರಸಾರ ಮಾಡುವಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಬುಡಕಟ್ಟು ಜನರ ವಿರುದ್ದ ಶೋಷಣೆ ಮತ್ತು ದೌರ್ಜನ್ಯವನ್ನು ವಿರೋಧಿಸಲು ವಿವಿಧ ಚಳುವಳಿಗಳಲ್ಲಿ ಭಾಗವಹಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ.
- ಸಾಯ್ ಅವರು 1977, 1985 ಹಾಗೂ 1998 ರಲ್ಲಿ ಮಧ್ಯಪ್ರದೇಶ ವಿಧಾನ ಸಭೆಗೆ ಆಯ್ಕೆಯಾಗಿದ್ದರು. 2000 ರಲ್ಲಿ ಚತ್ತೀಸಘರ್ ವಿಧಾನಸಭೆಗೆ ಆಯ್ಕೆಯಾಗಿದ್ದರು. ಚತ್ತೀಸ್ ಘರದ ವಿಧಾನಸಭೆಯ ವಿರೋಧ ಪಕ್ಷದ ಮೊದಲ ನಾಯಕ.
- 1989, 1996 ಮತ್ತು 2004 ರಲ್ಲಿ ಲೋಕಸಭೆಗೆ ಹಾಗೂ 2009 ಮತ್ತು 10 ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

**ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ:**

- ಪರಿಶಿಷ್ಠ ಪಂಗಡಗಳ ರಾಷ್ಟ್ರೀಯ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಸಂವಿಧಾನದ ವಿಧಿ 338ಎ ರಡಿ ರಚಿಸಲಾಗಿದೆ. ಈ ಮುಂಚೆ ಇದ್ದ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗವನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಈ ಆಯೋಗವನ್ನು ಸ್ಥಾಪಿಸಲಾಗಿದೆ.
- ಮೊದಲ ಆಯೋಗವನ್ನು 2004 ರಲ್ಲಿ ಸ್ಥಾಪಿಸಲಾಯಿತು. ಕುನ್ವರ್ ಸಿಂಗ್ ಆಯೋಗದ ಮೊದಲ ಅಧ್ಯಕ್ಷರು.
- ಆಯೋಗವು ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಹಾಗೂ ಮೂವರು ಪೂರ್ಣ ಕಾಲಿಕ ಸದಸ್ಯರನ್ನು ಒಳಗೊಂಡಿದೆ. ಇವರ ಅಧಿಕಾರ ಅವಧಿ ಅಧಿಕಾರ ಸ್ವೀಕಾರವಾದ ದಿನದಿಂದ ಮೂರು ವರ್ಷಗಳ ಕಾಲ ಇರಲಿದೆ.

## ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-4: ಲಿಂಗಾನುಪಾತದಲ್ಲಿ ಹೆಚ್ಚಳ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷ 2015-16 ವರದಿಯನ್ನು ಬಹಿರಂಗಪಡಿಸಿದೆ. ವರದಿಯ ಪ್ರಕಾರ 2015-16ರಲ್ಲಿ ಶಿಶು ಮರಣ ಪ್ರಮಾಣದಲ್ಲಿ ಕುಸಿತ ಹಾಗೂ ಲಿಂಗಾನುಪಾತದಲ್ಲಿ ಹೆಚ್ಚಳ ಕಂಡು ಬಂದಿದೆ. ಸಮೀಕ್ಷೆಗೆ ಸುಮಾರು 6 ಲಕ್ಷ ಕುಟುಂಬಗಳು, 7 ಲಕ್ಷ ಮಹಿಳೆಯರು ಹಾಗೂ 1.3 ಲಕ್ಷ ಪುರುಷರನ್ನು ಒಳಪಡಿಸಲಾಗಿದೆ. ಇದೇ ಮೊದಲ ಬಾರಿಗೆ ಜಿಲ್ಲಾಮಟ್ಟದ ಅಂಕಿಅಂಶಗಳನ್ನು ನೀಡಲಾಗಿದೆ.

**ಪ್ರಮುಖಾಂಶಗಳು**:

- **ಶಿಶು ಮರಣ ಪ್ರಮಾಣ:** ಶಿಶು ಮರಣ ಪ್ರಮಾಣ 2005-06 ಸಮೀಕ್ಷೆಗೆ ಹೋಲಿಸಿದರೆ 51 ರಿಂದ 47ಕ್ಕೆ ಇಳಿದಿದೆ. ಕಳೆದ ಒಂದು ದಶಕದಲ್ಲಿ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಶಿಶು ಮರಣ ಪ್ರಮಾಣ ಕಡಿಮೆ ಆಗಿದೆ. ತ್ರಿಪುರ, ಜಾರ್ಖಂಡ್, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ, ರಾಜಸ್ತಾನ ಮತ್ತು ಒಡಿಶಾದಲ್ಲಿ ಶೇ 20% ರಷ್ಟು ಕಡಿಮೆ ಆಗಿದೆ.
- **ಹುಟ್ಟುವಾಗ ಲಿಂಗ ಅನುಪಾತ:** ಕಳೆದ ದಶಕದಲ್ಲಿ ಈ ಪ್ರಮಾಣ 914 ರಿಂದ 919ಕ್ಕೆ ಏರಿಕೆಯಾಗಿದೆ. ಕೇರಳ (1,047), ಮೇಘಾಲಯ (1,009) ಮತ್ತು ಚತ್ತೀಸಘರ್ (977) ಮೊದಲ ಮೂರು ಸ್ಥಾನದಲ್ಲಿವೆ.
- **ಸಾಂಸ್ಥಿಕ ಹೆರಿಗೆ:** ಸಾಂಸ್ಥಿಕ ಹೆರಿಗೆ ಪ್ರಮಾಣ ಕಳೆದ ಸಮೀಕ್ಷೆಗೆ ಹೋಲಿಸಿದಾಗ ಶೇ 40ರಷ್ಟು ಹೆಚ್ಚಳವಾಗಿದೆ.
- **ಪೂರ್ಣ ಲಸಿಕೆ ಪ್ರಮಾಣ:** 12-23 ತಿಂಗಳು ವಯಸ್ಸಿನ ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆಯನ್ನು ಹಾಕಿಸಲಾಗಿದೆ (ಬಿಸಿಜಿ, ದಡಾರ ಮತ್ತು ಪೋಲಿಯೋ).
- **ಕಡಿಮೆ ತೂಕದ ಮಕ್ಕಳು:** ಶೇ 7% ರಷ್ಟು ಕಡಿಮೆಯಾಗಿದೆ. ಎದೆ ಹಾಲು ಉಣಿಸುವುದು ಹಾಗೂ ಮಕ್ಕಳ ಪೋಷಕಾಂಶ ಆಹಾರದ ಬಳಕೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಅನಿಮೀಯಾ ಕಾಯಿಲೆಯ ಪ್ರಮಾಣ ಸಾಕಷ್ಟು ಕಡಿಮೆಯಾಗಿದೆ.

## ನಗರ ಆಡಳಿತ ಶ್ರೇಯಾಂಕದಲ್ಲಿ ಕೇರಳದ ತಿರುವನಂತಪುರಂ ಮೊದಲ ಸ್ಥಾನ



ಭಾರತದ ನಗರ ವ್ಯವಸ್ಥೆ ವಾರ್ಷಿಕ ಸಮೀಕ್ಷೆ (Annual Survey's of India's City System) ವರದಿಯ ಪ್ರಕಾರ ನಗರ ಆಡಳಿತದಲ್ಲಿ ಕೇರಳದ ರಾಜಧಾನಿ ತಿರುವನಂತಪುರಂ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಜನಾಗ್ರಹ ಸೆಂಟರ್ ಫಾರ್ ಸಿಟಿಜಿನ್ ಷಿಪ್ ಅಂಡ್ ಡೆಮಾಕ್ರಸಿ ಈ ಸಮೀಕ್ಷೆಯನ್ನು ನಡೆಸುತ್ತಿದೆ. ಈ ವರ್ಷದ ಸಮೀಕ್ಷೆ ನಾಲ್ಕನೇ ವಾರ್ಷಿಕ ಸಮೀಕ್ಷೆಯಾಗಿದ್ದು, 18 ರಾಜ್ಯಗಳ 21 ಪ್ರಮುಖ ನಗರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ನಗರ ಆಡಳಿತ ಕೊರತೆಯಿಂದ ಸಾರ್ವಜನಿಕ ಸೇವೆ ಮತ್ತು ಜೀವನ ಗುಣಮಟ್ಟದ ಮೇಲೆ ಪರಿಣಾಮ ಬೀರಲಿದೆ ಎಂದು ಸಮೀಕ್ಷೆಯಲ್ಲಿ ಪ್ರಮುಖವಾಗಿ ತಿಳಿಸಲಾಗಿದೆ.

**ASICS ಎಂದರೇನು?**

- ASICS ಅನ್ನು ನಗರ ಆಡಳಿತದಲ್ಲಿನ ಕುಂದು ಕೊರತೆಗಳ ಬಗ್ಗೆ ಆಡಳಿತ ಮುಖಂಡರ ಗಮನಕ್ಕೆ ತರುವ ಮೂಲಕ ವಾಸಯೋಗ್ಯ ಸುಧಾರಿಸಲು ಅಗತ್ಯ ಕ್ರಮಕೈಗೊಳ್ಳಲು ಅಭಿವೃದ್ಧಿಪಡಿಸಲಾಗಿದೆ.
- 0-10 ಅಂಕಗಳನ್ನು ನೀಡುವ ಮೂಲಕ ನಗರಗಳಿಗೆ ಶ್ರೇಯಾಂಕವನ್ನು ನೀಡಲಾಗುವುದು. ಉತ್ತಮ ಅಂಕ ಪಡೆದ ನಗರವು ಸಾರ್ವಜನಿಕರಿಗೆ ಉತ್ತಮ ಆಡಳಿತವನ್ನು ನೀಡುವಲ್ಲಿ ಶಕ್ತವಾಗಿದೆ ಎಂದು ಅರ್ಥ.
- ನಗರ ಸಾಮರ್ಥ್ಯ ಮತ್ತು ಸಂಪನ್ಮೂಲ, ನಗರ ಯೋಜನೆ ಮತ್ತು ವಿನ್ಯಾಸ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಭಾಗವಹಿಸುವಿಕೆಯನ್ನು ಸಮೀಕ್ಷೆಯಲ್ಲಿ ಪರಿಗಣಿಸಲಾಗುವುದು.

**2016 ಸಮೀಕ್ಷೆಯ ಪ್ರಮುಖಾಂಶಗಳು**:

- 2016 ಸಮೀಕ್ಷೆಯಲ್ಲಿ ತಿರುವನಂತಪುರಂ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಪುಣೆ ಎರಡನೇ ಸ್ಥಾನವನ್ನು ಹಾಗೂ ಕಲ್ಕತ್ತಾ ಮೂರನೇ ಸ್ಥಾನದಲ್ಲಿವೆ.
- ರಾಷ್ಟ್ರ ರಾಜಧಾನಿ ನವ ದೆಹಲಿ ಏಳನೇ ಸ್ಥಾನದಿಂದ ಒಂಬತ್ತನೇ ಸ್ಥಾನಕ್ಕೆ ಕುಸಿದಿದೆ.
- ಕರ್ನಾಟಕದ ರಾಜಧಾನಿ ಬೆಂಗಳೂರು ನಾಲ್ಕನೇ ಸ್ಥಾನದಿಂದ 16ನೇ ಸ್ಥಾನಕ್ಕೆ ಕುಸಿದಿದೆ. ಲೂಧಿಯಾನ, ಜೈಪುರ್ ಮತ್ತು ಚಂಡೀಗರ್ 19, 20 ಮತ್ತು 21ನೇ ಸ್ಥಾನವನ್ನು ಪಡೆದುಕೊಂಡು ಕಳೆದ ವರ್ಷದಲ್ಲಿ ಪಡೆದುಕೊಂಡಿದ್ದ ಸ್ಥಾನದಲ್ಲಿವೆ.

## <u>ಅಳಿವಿನಂಚಿನಲ್ಲಿರುವ ಕುರುಖ್ ಭಾಷೆಗೆ ಪಶ್ಚಿಮ ಬಂಗಾಳದಲ್ಲಿ ಅಧಿಕೃತ ಭಾಷೆ ಸ್ಥಾನಮಾನ</u>

ಅಳಿವಿನ ಅಂಚಿನಲ್ಲಿರುವ ಬುಡಕಟ್ಟು ಕುರುಖ್ ಭಾಷೆಗೆ ಪಶ್ಚಿಮ ಬಂಗಾಳ ಸರ್ಕಾರ ಅಧಿಕೃತ ಭಾಷೆ ಸ್ಥಾನಮಾನವನ್ನು ನೀಡಿದೆ. ಕುರುಖ್ ಭಾಷೆ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ್ದು ಮದ್ಯ ಹಾಗೂ ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ಮೂರು ಭಾಷೆಗಳಲ್ಲೊಂದು.

**ಪ್ರಮುಖಾಂಶಗಳು**:

- ಪಶ್ಚಿಮ ಬಂಗಾಳದಲ್ಲಿ ಈ ಭಾಷೆಯನ್ನು ಒರಯನ್ ಸಮುದಾಯದವರು ಮಾತನಾಡುತ್ತಾರೆ. ಪಶ್ಚಿಮ ಬಂಗಾಳದ ಡೂವರ್ಸ್ ಪ್ರದೇಶದಲ್ಲಿ ಈ ಸಮುದಾಯದವರು ಹೆಚ್ಚಾಗಿ ಕಂಡುಬರುತ್ತಾರೆ.
- ಪಶ್ಚಿಮ ಬಂಗಾಳದಲ್ಲಿ ಮಾತನಾಡುವ ಅನೇಕ ಬುಡಕಟ್ಟು ಭಾಷೆಗಳು ಆಸ್ಟ್ರೋ-ಏಷ್ಯಾಟಿಕ್ ಮತ್ತು ಟಿಬೆಟೊ-ಬರ್ಮನ್ ಪರಿವಾರಕ್ಕೆ ಸೇರಿವೆ. ಆದರೆ ಕುರುಖ್ ಭಾಷೆ ಇದಕ್ಕೆ ಹೊರತಾಗಿದ್ದು ದ್ರಾವಿಡ ಭಾಷೆ ಪರಿವಾರಕ್ಕೆ ಸೇರಿದೆ ಮಾಲ್ಟೊದಿಂದ ಬಂದಿದೆ.

ಮಾಲ್ತೋವನ್ನು ಜಾರ್ಖಂಡಿನ ರಾಜಮಹಲ್ ಹಿಲ್ ಪ್ರದೇಶದಲ್ಲಿ ಮಾತನಾಡಲಾಗುತ್ತಿದೆ.

**ಕುರುಖ್ ಭಾಷೆ:**

ಕುರುಖ್ ಭಾಷೆ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ್ದು ಮದ್ಯ ಹಾಗೂ ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ಮೂರು ಭಾಷೆಗಳಲ್ಲೊಂದು. ಉಳಿದೆರಡು ಮಾಲ್ತೋ ಮತ್ತು ಬ್ರಾಹು ಈ, ಇವೆಲ್ಲವನ್ನೂ ಉತ್ತರ ದ್ರಾವಿಡ ಭಾಷೆಗಳು ಎಂದು ಕರೆವುದಿದೆ. ಕುರುಖ್ ಭಾಷೆ ಛೋಟಾನಾಗಪುರ, ಒರಿಸ್ಸ, ಬಂಗಾಳ ಮತ್ತು ಅಸ್ಸಾಂಪ್ರದೇಶಗಳ ಗುಡ್ಡಗಾಡುಗಳಲ್ಲಿ ವಾಸಮಾಡುವ ಕೆಲವು ಮೂಲನಿವಾಸಿಗಳಲ್ಲಿ ಬಳಕೆಯಲ್ಲಿದೆ. ಇದನ್ನು ಕುಡುಖ್ ಎಂದೂ ಒರಾನ್ ಎಂದೂ ಕರೆಯುತ್ತಾರೆ. ಕುರುಖ್ ಮಾತಾಡುವವರ ಸಂಖ್ಯೆ ಸಮಾರು ಹದನೇಳು ಲಕ್ಷ. ಕುರುಖಿ ಎಂಬ ಶಬ್ದಕ್ಕೆ ಮಾತಾಡುವವರು ಎಂದೂ ಒರಾನ್ ಎಂಬ ಶಬ್ದಕ್ಕೆ ಮನುಷ್ಯರು ಎಂದೂ ಅರ್ಥ ಹೇಳಬಹುದು. ಈ ಜನಾಂಗದವರು ಬ್ರಾಹುಈ ಭಾಷೆ ಮಾತಾಡುವ ಪ್ರದೇಶವಾದ ಬಲೂಚಿಸ್ತಾನದಿಂದ ದಕ್ಷಿಣಕ್ಕೆ ಬಂದು ಉತ್ತರ ಕರ್ಣಾಟಕ ರಾಜ್ಯಗಳಲ್ಲಿ ನೆಲೆಸಿರಬೇಕೆಂದೂ ಅಲ್ಲಿಂದ ಸರ್ಮದಾ ನದಿಯ ಮಾರ್ಗವಾಗಿ ಶಹಾಬಾದ್ ಜಿಲ್ಲೆಯ ಕಡೆ ಹೋಗಿರಬೇಕೆಂದೂ ಅಲ್ಲಿಂದ ಮುಸಲ್ಮಾನರಿಂದ ಓಡಿಸಲ್ಪಟ್ಟು ಛೋಟಾನಾಗಪುರ, ರಾಜಮಹಲ್ ಬೆಟ್ಟಗಳ ಕಡೆಗೆ ಹೋಗಿರಬೇಕೆಂದೂ ಊಹಿಸಲಿಕ್ಕೆ ಕೆಲವು ಆಧಾರಗಳಿವೆ. ಮುಂಡಾ ಮತ್ತು ಭೋಜಪುರಿ ಹಿಂದಿಯ ಪ್ರಭಾವ ಈ ಭಾಷೆಯ ಮೇಲೆ ಸಾಕಷ್ಟು ಬಿದ್ದಿದೆ. ಅಲ್ಲದೆ ಒರಿಯಾ ಮತ್ತು ಬಂಗಾಳಿಯ ಪ್ರಭಾವವೂ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ.

## <u>ಹರಿಯಾಣ ಸರ್ಕಾರದಿಂದ ಹಿರಿಯ ನಾಗರಿಕರಿಗೆ ತೀರ್ಥ ದರ್ಶನ ಯೋಜನೆ</u>



ಹಿರಿಯ ನಾಗರಿಕರಿಗೆ ಹರಿಯಾಣ ಸರ್ಕಾರ ತೀರ್ಥ ದರ್ಶನ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ರಾಜ್ಯ ಸರ್ಕಾರದ ಹಣದಲ್ಲಿ ತೀರ್ಥಯಾತ್ರೆಯನ್ನು ಕೈಗೊಳ್ಳಬಹುದು. ಬಜೆಟ್ ಅಧಿವೇಶನದ ವೇಳೆ ಮುಖ್ಯಮಂತ್ರಿ ಮನೋಹರ್ ಲಾಲ್ ಖತ್ತರ್ ಅವರು ಈ ಯೋಜನೆಯನ್ನು ಘೋಷಣೆ ಮಾಡಿದ್ದಾರೆ.

**ಪ್ರಮುಖಾಂಶಗಳು**:

- ಈ ಯೋಜನೆಯಡಿ ಬಿಪಿಎಲ್ ಕುಟುಂಬಗಳಿಗೆ ಸೇರಿದ ಹಿರಿಯ ನಾಗರಿಕರು ಕೈಗೊಳ್ಳುವ ತೀರ್ಥಯಾತ್ರೆಯ ಖರ್ಚನ್ನು ಸರ್ಕಾರವೇ ಸಂಪೂರ್ಣವಾಗಿ ಭರಿಸಲಿದೆ.

- ಒಂದು ವೇಳೆ ಬಿಪಿಎಲ್ ವರ್ಗಕ್ಕೆ ಸೇರಿದ ದಂಪತಿಗಳು ತೀರ್ಥಯಾತ್ರೆ ಕೈಗೊಂಡಿದ್ದಾರೆ ದಂಪತಿಗಳ ಖರ್ಚನ್ನು ಸರ್ಕಾರವೇ ಭರಿಸಲಿದೆ. ಜೊತೆಗೆ ತಮಗೆ ನೆರವಾಗಲು ಸಹಾಯಕರನ್ನು ಕರೆದುಕೊಂಡು ಹೋಗಬಹುದು.
- ಹಿರಿಯ ನಾಗರಿಕರು ಬಿಪಿಎಲ್ ಕುಟುಂಬಕ್ಕೆ ಸೇರಿಲ್ಲವಾದರೆ ಶೇ 70% ಖರ್ಚನ್ನು ಸರ್ಕಾರ ಭರಿಸುತ್ತದೆ. ತೀರ್ಥಯಾತ್ರೆಗೆ ಹಿರಿಯ ನಾಗರಿಕರನ್ನು ಲಾಟರಿ ಎತ್ತುವ ಮೂಲಕ ಆಯ್ಕೆಮಾಡಲಾಗುವುದು.
- ಯೋಜನೆಯಡಿ ಸುಮಾರು 400 ಪುಣ್ಯಕ್ಷೇತ್ರಗಳನ್ನು ನೋಡಬಹುದು. ಪ್ರತಿ ವರ್ಷ ಕೇವಲ 250 ಜನರು ಮಾತ್ರ ಯೋಜನೆಯ ಉಪಯೋಗಪಡೆದುಕೊಳ್ಳಬಹುದು. ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ತೀರ್ಥಯಾತ್ರಿಗಳನ್ನು ಆಯ್ಕೆಮಾಡುತ್ತದೆ.

**<u>ದೌರ್ಜನ್ಯ ತಡೆಗೆ ಕಾಮನ್ ವೆಲ್ತ್ ನಿಂದ "ಪೀಸ್ ಇನ್ ದಿ ಹೋಮ್" ಕಾರ್ಯಕ್ರಮ</u>**



ಕಾಮನ್ ವೆಲ್ತ್ ಆಫ್ ನೇಷನ್ಸ್ ತನ್ನ ಸದಸ್ಯ ರಾಷ್ಟ್ರಗಳಲ್ಲಿ ದೌರ್ಜನ್ಯ ತಡೆಯುವ ಸಲುವಾಗಿ ಮುಖ್ಯವಾಗಿ ಸಮುದಾಯ ಹಾಗೂ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಯಲು "ಪೀಸ್ ಇನ್ ದಿ ಹೋಮ್ (Peace in the Home)" ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆ ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, 2018 ರವರೆಗೆ ಚಾಲನೆಯಲ್ಲಿ ಇರಲಿದೆ. 2018ರ ವೇಳೆಗೆ ಕಾಮನ್ ವೆಲ್ತ್ ರಾಷ್ಟ್ರಗಳಲ್ಲಿ ದೌರ್ಜನ್ಯ ನಿಲ್ಲಲಿದೆ ಎಂದು ಭಾವಿಸಲಾಗಿದೆ.

**ಪ್ರಮುಖಾಂಶಗಳು**:

- ದೇಶಿಯ ಹಿಂಸಾಚಾರವನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರ, ಸಾಮಾಜಿಕ ಸಂಸ್ಥೆಗಳು, ಮಾನವ ಹಕ್ಕು ಸಂಸ್ಥೆಗಳು ಹಾಗೂ ನಾಗರಿಕರ ನಡುವೆ ಸಂಪರ್ಕವನ್ನು ಸಾಧಿಸಲಾಗುವುದು.
- ಕಾಮನ್ ವೆಲ್ತ್ ರಾಷ್ಟ್ರಗಳಲ್ಲಿನ ಶಾಲೆಗಳು, ಆಸ್ಪತ್ರೆಗಳು ಮತ್ತು ವೈದ್ಯರು ಹಾಗೂ ಕಾನೂನು ಜಾರಿ ಸಂಸ್ಥೆಗಳು ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಲು ಅಗತ್ಯ ಸಹಾಯವನ್ನು ಒದಗಿಸಲಾಗುವುದು.
- ದೇಶಿಯ ಹಿಂಸಾಚಾರವನ್ನು ಹತ್ತಿಕ್ಕಲು ಸದಸ್ಯ ರಾಷ್ಟ್ರಗಳು ಕೈಗೊಂಡಿರುವ ಕ್ರಮಗಳು ಹಾಗೂ ಯಶಸ್ವಿಯಾಗಿರುವ ಸೂತ್ರಗಳನ್ನು ಎತ್ತಿ ತೋರಿಸುವ ಮೂಲಕ ಇತರೆ ಸದಸ್ಯ ರಾಷ್ಟ್ರಗಳಿಗೆ ಸಹಾಯ ಮಾಡುವುದು.
- ಮಹಿಳೆಯರಿಗೆ ಪ್ರತ್ಯೇಕವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು. ಅಲ್ಲದೇ ರಾಜಕೀಯ ಮತ್ತು ಚುನಾವಣೆ ಸಂದರ್ಭದಲ್ಲಾಗುವ ಹಿಂಸಾಚಾರವನ್ನು ತಡೆಯಲು ಅಗತ್ಯಕ್ರಮವನ್ನು ರಚಿಸುವುದು.

**ಕಾಮನ್ ವೆಲ್ತ್ ಆಫ್ ನೇಷನ್ಸ್:**

- ಕಾಮನ್ ವೆಲ್ತ್ ಆಫ್ ನೇಷನ್ಸ್ ಅನ್ನು 1949ರ ಲಂಡನ್ ಘೋಷಣೆಯಡಿಯಲ್ಲಿ ಸ್ಥಾಪಿಸಲಾಗಿದೆ. ಇದೊಂದು ಅಂತಾರಾಷ್ಟ್ರೀಯ ಅಂತರ್ ಸರ್ಕಾರಗಳ ಒಕ್ಕೂಟವಾಗಿದೆ. ಈ ಹಿಂದೆ ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿದ್ದ ರಾಷ್ಟ್ರಗಳು ಇದರ ಸದಸ್ಯ ರಾಷ್ಟ್ರಗಳಾಗಿವೆ.
- ಪ್ರಸ್ತುತ ಕಾಮನ್ ವೆಲ್ತ್ ಒಕ್ಕೂಟ 52 ರಾಷ್ಟ್ರಗಳನ್ನು ಒಳಗೊಂಡಿದೆ.
- ರಾಣಿ ಎಲಿಜಬೆತ್-II ಕಾಮನ್ ವೆಲ್ತ್ ಆಫ್ ನೇಷನ್ಸ್ ನ ಮುಖ್ಯಸ್ಥೆ.

**ಐಎನ್ಎಸ್ ತಿಲಾನ್ ಚಾಂಗ್ ಸೇನಾನೌಕೆ ಕಾರ್ಯಾರಂಭ**



ಐಎನ್ಎಸ್ ತಿಲಾನ್‌ಚಾಂಗ್ ಸೇನಾನೌಕೆಯು ಕಾರವಾರದ ಸೀಬರ್ಡ್ ನೌಕಾನೆಲೆಯಲ್ಲಿ ಕಾರ್ಯಾಚರಣೆ ಆರಂಭಿಸಿದೆ. ನೌಕಾಸೇನೆಯ ಪಶ್ಚಿಮ ವಿಭಾಗದ ವೈಸ್ ಅಡ್ಮಿರಲ್ ಗಿರೀಶ್ ಲೂಥ್ರಾ ನೌಕೆಗೆ ಐಎನ್ಎಸ್ ತಿಲಾನ್‌ಚಾಂಗ್ ಚಾಲನೆ ನೀಡಿದರು.

**ಪ್ರಮುಖಾಂಶಗಳು**:

- ಐಎನ್ಎಸ್ ತಿಲಾನ್‌ಚಾಂಗ್ ಸೇನಾನೌಕೆಯನ್ನು ಕೊಲ್ಕತ್ತದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ (GRSE) ಸಂಸ್ಥೆ ಅಭಿವೃದ್ಧಿಪಡಿಸಿದೆ. ಇದು ಮೂರನೇ ನೌಕೆಯಾಗಿದ್ದು, ಇನ್ನೆರಡು ವಿಶಾಖಪಟ್ಟಣ ನೌಕಾನೆಲೆಯಲ್ಲಿ 2016ರಿಂದ ಕಾರ್ಯನಿರ್ವಹಿಸುತ್ತಿವೆ.
- ಇದು ಗಂಟೆಗೆ 35 ನಾಟಿಕಲ್ ಮೈಲು (50 ಕಿ.ಮೀ.) ವೇಗದಲ್ಲಿ ಕಡಲಲ್ಲಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವನ್ನು ಹೊಂದಿದೆ.
- ಈ ನೌಕೆಯ ಉದ್ದ 48.9 ಮೀಟರ್ ಇದ್ದು, 50 ಸಿಬ್ಬಂದಿಯನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.
- ಈ ನೌಕೆಯನ್ನು ಕಡಲತೀರದಲ್ಲಿ ಭಯೋತ್ಪಾದನೆ, ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಹಾಗೂ ದಾಳಿ ನಡೆಸಲು ಬಳಸಲಾಗುತ್ತದೆ. ಕಡಲಲ್ಲಿ ದುರಂತ ಸಂಭವಿಸಿದಾಗ ರಕ್ಷಣೆ ಹಾಗೂ ಹುಡುಕಾಟ ಕಾರ್ಯಚರಣೆಯಲ್ಲೂ ಈ ನೌಕೆ ಭಾಗಿಯಾಗಲಿದೆ.

## ಗಡಿ ಭದ್ರತೆ: ವರದಿ ಸಲ್ಲಿಸಿದ ಮಧುಕರ್ ಗುಪ್ತಾ ಸಮಿತಿಯಿಂದ ವರದಿ ಸಲ್ಲಿಕೆ



ಗಡಿ ಭದ್ರತೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರಚಿಸಿದ್ದ ಮಧುಕರ್ ಗುಪ್ತಾ ಸಮಿತಿ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿಯಲ್ಲಿ ಭದ್ರತೆಯನ್ನು ಬಲಗೊಳಿಸಲು ಅಗತ್ಯವಿರುವ ಕ್ರಮಗಳನ್ನು ಶಿಫಾರಸ್ಸು ಮಾಡಲು ಈ ಸಮಿತಿಯನ್ನು ರಚಿಸಲಾಗಿತ್ತು.

**ಪ್ರಮುಖಾಂಶಗಳು**:

- ಗಡಿ ಭದ್ರತೆ, ಸೇನಾ ಪಡೆಗಳ ಮೌಲ್ಯಮಾಪನ, ಮೂಲಭೂತ ಸೌಕರ್ಯ ಮತ್ತು ತಂತ್ರಜ್ಞಾನ ಸೇರಿದಂತೆ ವಿವಿಧ ವಿಷಯಗಳ ಮೇಲೆ ವಿಸ್ತಾರವಾದ ಶಿಫಾರಸ್ಸುಗಳನ್ನು ಸಮಿತಿ ನೀಡಿದೆ.
- ಸಮಿತಿಯ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

**ಹಿನ್ನಲೆ**:

ಮಾಜಿ ಗೃಹ ಕಾರ್ಯದರ್ಶಿ ಮಧುಕರ್ ಗುಪ್ತಾ ಅವರ ನೇತೃತ್ವದ ಸಮಿತಿಯನ್ನು ಕೇಂದ್ರ ಸರ್ಕಾರ ಏಪ್ರಿಲ್ 2016 ರಲ್ಲಿ ರಚಿಸಿತ್ತು. ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿಯಲ್ಲಿರುವ ನ್ಯೂನ್ಯತೆಗಳನ್ನು ಗುರುತಿಸುವುದು ಹಾಗೂ ಗಡಿ ರಕ್ಷಣೆ ಬಲಪಡಿಸಲು ಅಗತ್ಯ ಕ್ರಮಗಳನ್ನು ಶಿಫಾರಸ್ಸು ಮಾಡಲು ಸಮಿತಿಗೆ ಸೂಚಿಸಲಾಗಿತ್ತು. ಪಠಾಣ್ ಕೋಟ್ ಸೇನಾ ನೆಲೆ ಮೇಲೆ ಪಾಕಿಸ್ತಾನ ಮೂಲದ ಜೈಶ್-ಇ-ಮೊಹಮ್ಮದ್ ಸಂಘಟನೆ ದಾಳಿ ನಡೆಸಿದ ನಂತರ ಸಮಿತಿಯನ್ನು ರಚಿಸಲಾಗಿದೆ.

## ನೀಲಿ ಕ್ರಾಂತಿ ಸಾಧಿಸಲು ಕೇಂದ್ರ ಸರ್ಕಾರದ "ಮಿಷನ್ ಫಿಂಗರ್ಲಿಂಗ್" ಜಾರಿ



ದೇಶದಲ್ಲಿ ಮೀನುಗಾರಿಕೆ ವಲಯದ ಸಮಗ್ರ ಅಭಿವೃದ್ದಿ ಮತ್ತು ನಿರ್ವಹಣೆಗಾಗಿ ಕೇಂದ್ರ ಕೃಷಿ ಸಚಿವಾಲಯ "ಮಿಷನ್ ಫಿಂಗರ್ಲಿಂಗ್ (Mission Fingerling)" ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಇದಕ್ಕಾಗಿ 52000 ಲಕ್ಷ ಹಣವನ್ನು ಮೀಸಲಿಡಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ 2014-15ನೇ ಸಾಲಿನಲ್ಲಿ 10.79 ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟಿರುವ ಮೀನು ಉತ್ಪಾದನೆಯನ್ನು 2020-21ನೇ ಅವಧಿಗೆ 15 ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಹೆಚ್ಚಿಸುವುದಾಗಿದೆ.

**ಪ್ರಮುಖಾಂಶಗಳು**:

- ಮೀನು ಉತ್ಪಾದನೆಗೆ ಹೇರಳ ಅವಕಾಶವಿರುವ 20 ರಾಜ್ಯಗಳನ್ನು ಕೇಂದ್ರ ಸರ್ಕಾರ ಈ ಯೋಜನೆಯಡಿ ಗುರುತಿಸಿದ್ದು, ಮೀನು ಮರಿಗಳ ಉತ್ಪಾದನೆ ಹಾಗೂ ಮೀನು ಉತ್ಪಾದನೆ ಮೂಲಸೌಕರ್ಯಗಳನ್ನು ಅಭಿವೃದ್ದಿಪಡಿಸಲಾಗುವುದು.
- ಮೀನು ಮರಿಗಳು, ಶ್ರಿಂಪ್ ಮತ್ತು ಕ್ರಾಬ್ ಗಳ ಉತ್ಪಾದನೆಗೆ ಹೊಂಡಗಳ ನಿರ್ಮಾಣಗಳನ್ನು ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವುದು.

- ಇದರಿಂದ ಪ್ರತಿ ವರ್ಷ 20 ಲಕ್ಷ ಟನ್ ಮೀನು ಉತ್ಪಾದನೆ ಹಾಗೂ ಸುಮಾರು 4 ಮಿಲಿಯನ್ ಕುಟುಂಬಗಳಿಗೆ ಅನುಕೂಲವಾಗಲಿದೆ.

**ನೀಲಿ ಕ್ರಾಂತಿ:**

ದೇಶದಲ್ಲಿ ಲಭ್ಯವಿರುವ ಅಪಾರ ಮೀನುಗಾರಿಕೆ ಸಂಪನ್ಮೂಲವನ್ನು ಗುರುತಿಸಿ ಸಮಗ್ರವಾಗಿ ಬಳಸಿಕೊಳ್ಳುವ ಸಲುವಾಗಿ ನೀಲಿ ಕ್ರಾಂತಿಯನ್ನು ಆರಂಭಿಸಲಾಗಿದೆ. ಜೊತೆಗೆ ಮೀನುಗಾರಿಕೆ ಕ್ಷೇತ್ರವನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸುವುದು ನೀಲಿ ಕ್ರಾಂತ್ರಿಯ ಗುರಿ.

**<u>ಮದ್ರಾಸ್ ಐಐಟಿಗೆ “2017 ಐಇಇಇ ಸ್ಪೆಕ್ಟ್ರಂ ಟೆಕ್ನಾಲಜಿ ಪ್ರಶಸ್ತಿ(IEEE Spectrum Technology)”</u>**

ಮದ್ರಾಸಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಭಿವೃದ್ಧಿಪಡಿಸಿರುವ ಸೋಲಾರ್ ಇನ್ವರ್ಟರ್ ವ್ಯವಸ್ಥೆಗೆ 2017 ಐಇಇಇ ಸ್ಪೆಕ್ಟ್ರಂ ಟೆಕ್ನಾಲಜಿ ಪ್ರಶಸ್ತಿ ಲಭಿಸಿದೆ. ಈ ವಿನೂತನ ತಂತ್ರಜ್ಞಾನವನ್ನು ಐಐಟಿ ಮದ್ರಾಸಿನ ಸೆಂಟರ್ ಫಾರ್ ಡಿಸೆಂಟ್ರಲೈಸ್ಡ್ ಪವರ್ ಸಿಸ್ಟಂ ಅಭಿವೃದ್ಧಿಪಡಿಸಿದೆ. ಮೈಕ್ರೋ ಗ್ರಿಡ್ ತಂತ್ರಜ್ಞಾನವನ್ನು ಬಳಸಿ ವಿನ್ಯಾಸಗೊಳಿಸಲಾಗಿದೆ.

**ಪ್ರಮುಖಾಂಶಗಳು**:

- ಈ ವಿನೂತನ ವ್ಯವಸ್ಥೆಯು ಗೃಹ ಬಳಕೆಗೆ ಬಳಸುವ 230Vಎಸಿ ಕರೆಂಟ್ ಅನ್ನು 48V ಡಿಸಿ ಕರೆಂಟ್ ಆಗಿ ಪರಿವರ್ತಿಸುತ್ತದೆ.
- ಮೇಲ್ಚಾವಣೆಯಲ್ಲಿ ಅಳವಡಿಸುವ ಸೌರ ಫಲಕಗಳಲ್ಲಿ ಇದನ್ನು ಬಳಸಲಾಗುತ್ತಿದೆ. ಡಿಸಿ ಸೌರ ವಿದ್ಯುತ್ ಉತ್ಪಾದನೆ, ಡಿಸಿ ವಿದ್ಯುತ್ ವರ್ಗಾವಣೆ ಹಾಗೂ ಡಿಸಿ ವಿದ್ಯುತ್ ಉಪಕರಣಗಳಿಗೆ ಈ ವ್ಯವಸ್ಥೆಯಿಂದ ಭಾರಿ ಅನುಕೂಲವಾಗಲಿದೆ.
- ರಾಜಸ್ತಾನದ ಜೋದ್ ಪುರ ಹಾಗೂ ಜೈಸಲ್ಮೇರ್ ಹಾಗೂ ಅಸ್ಸಾಂ ರಾಜ್ಯಗಳ ಸಾಕಷ್ಟು ಮನೆಗಳಲ್ಲಿ ಈಗಾಗಲೇ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ.
- ಅಲ್ಲದೇ ಕರ್ನಾಟಕ, ಒಡಿಶಾ, ತಮಿಳುನಾಡು, ಆಂಧ್ರ ಮತ್ತು ತೆಲಂಗಣದ ಗ್ರಾಮೀಣ ಪ್ರದೇಶಗಳಲ್ಲೂ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

## 15 ಐಐಐಟಿಗಳಿಗೆ ರಾಷ್ಟ್ರೀಯ ಪ್ರಮುಖ ಸಂಸ್ಥೆ ಸ್ಥಾನಮಾನ




ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಮಸೂದೆ-(ಸರ್ಕಾರಿ ಮತ್ತು ಖಾಸಗಿ ಪಾಲುದಾರಿಕೆ) 2017ಗೆ ಅನುಮೋದನೆ ನೀಡಿದೆ.

**ಪ್ರಮುಖಾಂಶಗಳು**:

- ಪ್ರಸ್ತುತ ಇರುವ ಐಐಐಟಿ ಗಳನ್ನು ಸರ್ಕಾರಿ-ಖಾಸಗಿ ಪಾಲುದಾರಿಕೆಯಲ್ಲಿ ರಾಷ್ಟ್ರೀಯ ಪ್ರಮುಖ ಸಂಸ್ಥೆಗಳ ಸ್ಥಾನಮಾನವನ್ನು ನೀಡಲು ಮಸೂದೆ ಅವಕಾಶ ಕಲ್ಪಿಸಿದೆ.
- ಈ ಸ್ಥಾನಮಾನದಿಂದ ಐಐಐಟಿ ಸಂಸ್ಥೆಗಳು ಬಿ.ಟೆಕ್ ಅಥವಾ ಎಂ.ಟೆಕ್ ಅಥವಾ ಪಿ.ಎಚ್.ಡಿ ಹೆಸರಿನಲ್ಲಿ ಪದವಿಗಳನ್ನು ನೀಡಬಹುದಾಗಿದೆ.
- ಮೇಲಿನ ಪದವಿಗಳನ್ನು ನೀಡುವುದರಿಂದ ಐಐಐಟಿ ಕಡೆಗೆ ವಿದ್ಯಾರ್ಥಿಗಳು ಹೆಚ್ಚು ಆಕರ್ಷಿತ ಆಗುವುದಲ್ಲದೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಸಂಶೋಧನಾ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಸಹಕರಿಯಾಗಲಿದೆ.

**ಯಾವುವು ಈ ಐಐಐಟಿಗಳು?**

ಅಸ್ಸಾಂ (ಗುವಾಹಟಿ), ಆಂಧ್ರ ಪ್ರದೇಶ (ಚಿತ್ತೂರು), ಹರಿಯಾಣ (ಸೊನಿಪತ್), ಗುಜರಾತ್ (ವಡೋದರ), ಹಿಮಾಚಲ ಪ್ರದೇಶ (ಉನ), ಕೇರಳ (ಕೊಟ್ಟಯಂ), ಜಾರ್ಖಂಡ್ (ರಾಂಚಿ), ಕರ್ನಾಟಕ (ಧಾರವಾಡ), ಮಹಾರಾಷ್ಟ್ರ (ಪುಣೆ & ನಾಗ್ಪುರ), ರಾಜಸ್ತಾನ (ಕೋಟ), ಮಣಿಪುರ (ಸೇನಾಪತಿ), ತಮಿಳುನಾಡು (ತಿರುಚನಪಲ್ಲಿ), ಉತ್ತರ ಪ್ರದೇಶ (ಲಕ್ನೋ), ಪಶ್ಚಿಮ ಬಂಗಾಳ (ಕಲ್ಯಾಣಿ).

## ಮಾತೃತ್ವ ಅನುಕೂಲ ಮಸೂದೆ-2016ಗೆ ಸಂಸತ್ತು ಅಂಗೀಕಾರ



ಉದ್ಯೋಗಸ್ಥ ಮಹಿಳೆಯರಿಗೆ ಇದುವರೆಗೂ ಸಂಭಾವನೆ ಸಹಿತ 12 ವಾರಗಳಷ್ಟೇ ಇದ್ದ ಮಾತೃತ್ವ ರಜೆಯನ್ನು 26 ವಾರಗಳಿಗೆ ಹೆಚ್ಚಿಸುವ ಮಾತೃತ್ವ ಅನುಕೂಲ ಮಸೂದೆ-2016ಗೆ ಸಂಸತ್ತು ಅಂಗೀಕಾರ ನೀಡಿದೆ. ಈಗಾಗಲೇ ಮಸೂದೆಗೆ ರಾಜ್ಯ ಸಭಾದಲ್ಲಿ ಅನುಮೋದನೆ ದೊರೆತಿದ್ದು, ಇದೀಗ ಲೋಕಸಭೆಯಲ್ಲಿ ಅನುಮೋದನೆ ದೊರೆತಿದೆ. ನಾರ್ವೆ (44 ವಾರ), ಕೆನಡಾ (50 ವಾರ) ನಂತರ ವಿಶ್ವದಲ್ಲೆ ಅತಿ ಹೆಚ್ಚು ವಾರಗಳ ಹೆರಿಗೆ ರಜೆ ನೀಡುವ ಮೂರನೇ ರಾಷ್ಟ್ರ ಭಾರತ ಎನಿಸಿದೆ.

**ಮಸೂದೆಯ ಮುಖ್ಯಾಂಶಗಳು:**

- ಮಸೂದೆಯು ಮಾತೃತ್ವ ಅನುಕೂಲ ಕಾಯಿದೆ-1961ಕ್ಕೆ ತಿದ್ದುಪಡಿ ತರಲಿದೆ.
- ಈ ಮಸೂದೆಯಿಂದ ಸಂಘಟಿತ ವಲಯದ 18 ಲಕ್ಷ ಮಹಿಳೆಯರಿಗೆ ಅನುಕೂಲವಾಗಲಿದೆ.
- ಮಹಿಳಾ ಉದ್ಯೋಗಿ ಗರ್ಭಿಣಿಯಾದರೆ ಕೇವಲ 3 ತಿಂಗಳಷ್ಟೇ ಸಂಭಾವನೆ ಸಹಿತ ರಜೆ ಸಿಗುತ್ತಿತ್ತು. ಈಗ ಇದು ಆರೂವರೆ ತಿಂಗಳಿಗೆ ವಿಸ್ತರಣೆ ಆದಂತಾಗಿದೆ. ಮೊದಲ ಎರಡು ಮಕ್ಕಳಿಗೆ 26 ವಾರಗಳ ರಜೆ ಸಿಗಲಿದೆ. ಮೂರನೇ ಅಥವಾ ಅದಕ್ಕಿಂತ ಹೆಚ್ಚು ಮಕ್ಕಳಿಗೆ 12 ತಿಂಗಳ ರಜೆ ಲಭಿಸಲಿದೆ.
- ಮೂರು ತಿಂಗಳಿಗಿಂತಲೂ ಕಡಿಮೆ ವಯಸ್ಸಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳಾ ಉದ್ಯೋಗಿಗೂ 12 ವಾರಗಳ ಕಾಲ ರಜೆ ಸಿಗಲಿದೆ.
- ಗುರುವಾರ ಲೋಕಸಭೆಯಲ್ಲಿ ಅನುಮೋದನೆ ಪಡಕೊಂಡಿದೆ. ಆರಂಭದ ಎರಡು ಮಕ್ಕಳಿಗೆ ಸೌಲಭ್ಯ ಸಿಗಲಿದೆ. ಮೂರನೇ ಮಗುವಿನ ಅವಧಿಯಲ್ಲಿ ಕೇವಲ 12 ವಾರ ಮಾತ್ರ ಸಂಭಾವನೆ ಸಹಿತ ರಜೆ ಇರಲಿದೆ.
- ಶಿಶುಪಾಲನ ಸೌಲಭ್ಯ: ಐವತ್ತಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳಲ್ಲಿ ಶಿಶುಪಾಲನ ಸೌಲಭ್ಯವನ್ನು ನೀಡಬೇಕು. ಕೆಲಸದ ಅವಧಿಯಲ್ಲಿ ಕನಿಷ್ಠ ನಾಲ್ಕು ಬಾರಿ ಮಗುವಿನ ಆರೈಕೆಗೆ ಅವಕಾಶ ನೀಡಬೇಕು.
- ಸೌಲಭ್ಯದ ಬಗ್ಗೆ ಮಾಹಿತಿ: ಮಹಿಳಾ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ವೇಳೆ ಕಾಯಿದೆಯ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡುವುದು ಕಡ್ಡಾಯ.

**“ರಾಷ್ಟ್ರೀಯ ಆರೋಗ್ಯ ನೀತಿ-2017” ವಿಶೇಷತೆಗಳು:**




ಪ್ರತಿಯೊಬ್ಬರಿಗೂ ಗುಣಮಟ್ಟದ ಮತ್ತು ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ಒದಗಿಸುವ ಉದ್ದೇಶದ ‘ರಾಷ್ಟ್ರೀಯ ಆರೋಗ್ಯ ನೀತಿ– 2017’ರ ಅನುಷ್ಠಾನಕ್ಕೆ ಕಡೆಗೂ ಕೇಂದ್ರ ಸರ್ಕಾರ ಮುಂದಾಗಿದೆ. ಈ ನೀತಿಯ ಪ್ರಮುಖಾಂಶಗಳು ಹೀಗಿವೆ.

- ಸಾರ್ವಜನಿಕ ಆರೋಗ್ಯ ವೆಚ್ಚವನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 1.4ರಿಂದ ಶೇ 2.5ಕ್ಕೆ ಹೆಚ್ಚಿಸುವುದು ಈ ಯೋಜನೆಯ ಮಹತ್ವದ ಅಂಶಗಳಲ್ಲಿ ಒಂದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೊರೆಯುವ ಸೇವೆಗಳು ಮತ್ತು ಜಿಲ್ಲಾಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದಲ್ಲದೆ ಮಾನವನ ಜೀವಿತಾವಧಿಯನ್ನು 67.5 ವರ್ಷಗಳಿಂದ 70 ವರ್ಷಗಳಿಗೆ ಹೆಚ್ಚಿಸುವ ಗುರಿಯನ್ನೂ ಈ ನೀತಿ ಹೊಂದಿದೆ.

- ಕಾಯಿಲೆಗಳು ಬರದಂತೆ ಮುಂಜಾಗ್ರತಾ ಕ್ರಮಗಳಿಗೆ ಈ ನೀತಿಯಲ್ಲಿ ಆದ್ಯತೆ ನೀಡಲಾಗಿದೆ. ಚಿಕಿತ್ಸೆ ಪಡೆಯುವಾಗ ಹಣಕಾಸು ಸಂಕಷ್ಟ ಎದುರಾಗದಂತೆ ನೋಡಿಕೊಳ್ಳುವ ಕಾಳಜಿಯನ್ನೂ ಒಳಗೊಂಡಿರುವುದು ಈ ನೀತಿಯ ಪ್ರಮುಖ ಅಂಶ.
- ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ವಿನಿಯೋಗಿಸುವ ಮೊತ್ತದಲ್ಲಿ ಗಮನಾರ್ಹ ಹೆಚ್ಚಳ, ಶಾಲೆ ಮತ್ತು ಕೆಲಸ ಮಾಡುವ ಸ್ಥಳಗಳಲ್ಲಿ ಯೋಗ ಶಿಕ್ಷಣ ಜಾರಿ ಈ ನೀತಿಯಲ್ಲಿ ಸೇರಿವೆ.
- 2025ರ ವೇಳೆಗೆ ರಾಷ್ಟ್ರ ಮಟ್ಟದಲ್ಲಿ ಒಟ್ಟಾರೆ ಫಲವತ್ತತೆಯ ದರವನ್ನು 2.1ಕ್ಕೆ ಇಳಿಸುವ ಗುರಿಯನ್ನು ಈ ನೀತಿಯಡಿ ಹೊಂದಲಾಗಿದೆ.
- ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು 1000 ದಲ್ಲಿ 23ಕ್ಕೆ ಹಾಗೂ ತಾಯಂದಿರ ಮರಣ ಪ್ರಮಾಣವನ್ನು 2020 ರ ವೇಳೆಗೆ 100ಕ್ಕೆ ಇಳಿಸುವ ಉದ್ದೇಶವನ್ನು ಹೊಂದಲಾಗಿದೆ.
- ಹೆರಿಗೆ ಸಂದರ್ಭದಲ್ಲಿ ತಾಯಿ ಮತ್ತು ಶಿಶು ಮರಣ ತಗ್ಗಿಸುವ ವಿಚಾರ ಆದ್ಯತೆ ಪಡೆದುಕೊಂಡಿದೆ. ಇದು ಸದ್ಯದ ತುರ್ತು ಅಗತ್ಯವಾಗಿತ್ತು ಎಂಬುದನ್ನು ಗಮನಿಸಬೇಕು. ಜೊತೆಗೆ ಚಿಕಿತ್ಸೆಯಲ್ಲಿನ ಲೋಪದೋಷಗಳ ವಿರುದ್ಧ ನ್ಯಾಯಮಂಡಳಿಗೆ ದೂರು ನೀಡಲು ಅವಕಾಶ ಕಲ್ಪಿಸಿರುವುದು ರೋಗಿಗಳ ಹಕ್ಕುಗಳ ರಕ್ಷಣೆಯ ಪ್ರಮುಖ ಕ್ರಮವಾಗಿದೆ.

## <u>ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಮನ್ಹರ್ ವಾಲ್ಜಿಬಾಯ್ ಝಲ ನೇಮಕ</u>

NCSK

ಗುಜರಾತಿನ ಮಾಜಿ ಬಿಜೆಪಿ ಶಾಸಕ ಮನ್ಹರ್ ವಾಲ್ಜಿಬಾಯ್ ಝಲ ಅವರು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಇವರ ಜೊತೆಗೆ ಮಹಾರಾಷ್ಟ್ರದ ದಿಲೀಪ್ ಕಲ್ಲು ಹಥಿವೆದ್ ಹಾಗೂ ಉತ್ತರ ಪ್ರದೇಶದ ಮಂಜು ದಿಲೆರ್ ಅವರು ಆಯೋಗದ ಸದಸ್ಯರಾಗಿ ನೇಮಕಗೊಂಡಿದ್ದಾರೆ.

**ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ?**

- ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗವನ್ನು 1994ರಲ್ಲಿ ಸ್ಥಾಪಿಸಲಾಗಿದೆ. ಸಫಾಯಿ ಕರ್ಮಚಾರಿಗಳ (ಮಲ ಹೊರುವವರು, ಚರಂಡಿ ಸ್ವಚ್ಛಗೊಳಿಸುವವರು) ಕುಂದು ಕೊರತೆಗಳ ನಿವಾರಣೆ ಮಾಡುವ ಜವಾಬ್ದಾರಿಯನ್ನು ಆಯೋಗ ಹೊಂದಿದೆ.

- ಇದೊಂದು ಸಂವಿಧಾನಿಕ ಸಂಸ್ಥೆಯಾಗಿದ್ದು, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಕಾಯಿದೆ-1993ರಡಿ ಸ್ಥಾಪನೆಗೊಂಡಿದೆ. ಸಫಾಯಿ ಕರ್ಮಚಾರಿಗಳ ಹಿತಾಸಕ್ತಿ ಕಾಪಾಡುವುದು ಇದರ ಧ್ಯೇಯ.
- ಆಯೋಗವು ನಾಲ್ಕು ಸದಸ್ಯರು ಹಾಗೂ ಒಬ್ಬ ಅಧ್ಯಕ್ಷರನ್ನು ಒಳಗೊಂಡಿದೆ.

**ಪಂಚರಾಜ್ಯಗಳ ಚುನಾವಣಾ ಫಲಿತಾಂಶ: ಬಿಜೆಪಿ ಮೇಲುಗೈ**



ತೀವ್ರ ಕುತೂಹಲ ಕೆರಳಿಸಿದ್ದ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟಗೊಂಡಿದೆ. ನೋಟು ರದ್ದತಿ ನಂತರ ಮೋದಿ ಅವರ ಮೇಲೆ ಜನರ ವಿಶ್ವಾಸ ಹೇಗಿರಲಿದೆ ಎಂಬುದರ ಬಗ್ಗೆ ಫಲಿತಾಂಶ ತೀವ್ರ ಕುತೂಹಲವನ್ನು ಕೆರಳಿಸಿತ್ತು. ನರೇಂದ್ರಮೋದಿ ನೇತೃತ್ವದ ಬಿಜೆಪಿ ಉತ್ತರಪ್ರದೇಶ, ಉತ್ತರಾಖಂಡ್`ನಲ್ಲಿ ಐತಿಹಾಸಿಕ ಜಯ ದಾಖಲಿಸಿದೆ. ಕಾಂಗ್ರೆಸ್ ಪಂಜಾಬ್`ನಲ್ಲಿ ಗೆಲುವು ಸಾಧಿಸಿದೆ. ಗೋವಾ ಮತ್ತು ಮಣಿಪುರದಲ್ಲಿ ಅತಂತ್ರ ಪರಿಸ್ಥಿತಿ ನಿರ್ಮಾಣವಾಗಿದೆ.

**ಚುನಾವಣೆ ಫಲಿತಾಂಶ ಹೀಗಿದೆ**:

**ಉತ್ತರ ಪ್ರದೇಶ ಒಟ್ಟು ಸ್ಥಾನ: 403,** ಬಿಜೆಪಿ 325, ಎಸ್.ಪಿ-ಕಾಂಗ್ರೆಸ್-54, ಬಿಎಸ್ಪಿ-19, ಇತರೆ-05

**ಪಂಜಾಬ್ ಒಟ್ಟು ಸ್ಥಾನ 117:** ಕಾಂಗ್ರೆಸ್ 77, ಆಪ್ ಪಕ್ಷ -20, ಬಿಜೆಪಿ-ಅಕಾಲಿದಳ-18, ಇತರೆ-02

**ಮಣಿಪುರ ಒಟ್ಟು ಸ್ಥಾನ 60:** ಕಾಂಗ್ರೆಸ್ 27, ಬಿಜೆಪಿ 22, ಎನ್ ಫಿಎಫ್-04, ಇತರೆ-07

**ಗೋವಾ ಒಟ್ಟು ಸ್ಥಾನ 40:** ಕಾಂಗ್ರೆಸ್ 17, ಬಿಜೆಪಿ 13, ಇತರೆ 10.

**ಉತ್ತರಖಂಡ್ ಒಟ್ಟು ಸ್ಥಾನ 70:** ಜಿಜೆಪಿ 57, ಕಾಂಗ್ರೆಸ್ 11, ಇತರೆ 02.

**ಮಣಿಪುರ, ಗೋವಾ, ಉತ್ತರಖಂಡ್, ಉತ್ತರ ಪ್ರದೇಶ ಮತ್ತು ಪಂಜಾಬ್ ಗೆ ನೂತನ ಮುಖ್ಯಮಂತ್ರಿಗಳು**

**ಮಣಿಪುರ**

ಮಣಿಪುರದ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ಎನ್. ಬಿರೇನ್ ಸಿಂಗ್ ಅವರು ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ಇಂಫಾಲದ ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಬಿರೇನ್ ಅವರೊಂದಿಗೆ ಇತರ ಇಬ್ಬರ ಚುನಾಯಿತ ಸದಸ್ಯರಾದ ವಿಶ್ವಜೀತ್ ಸಿಂಗ್ ಮತ್ತು ಜೋಯ್ ಕುಮಾರ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು. ಜೋಯ್ ಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ಮಣಿಪುರ ರಾಜ್ಯಪಾಲ ನಜ್ಮಾ ಹೆಪ್ತುಲ್ಲಾ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಮೂಲಕ ಮಣಿಪುರದಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದ

ಸರ್ಕಾರ ಅಸ್ತಿತ್ವಕ್ಕೆ ಬಂದಂತಾಗಿದೆ. ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಹುದ್ದೆಗೆ ಹೇರಿದ ಮೊದಲ ಬಿಎಸ್ಎಫ್ ಯೋಧ.

**<u>ಪಂಜಾಬ್</u>**

ಪಂಜಾಬ್ ನ ನೂತನ ಮುಖ್ಯಮಂತ್ರಿಯಾಗಿ ಕ್ಯಾಪ್ಟನ್ ಅಮರೀಂದರ್ ಸಿಂಗ್ ಅವರು ಪ್ರಮಾಣ ವಚನ ಸ್ವೀಕರಿಸಿದರು. ಅಮರೀಂದರ್ ಸಿಂಗ್ ಜೊತೆ ನವಜೋತ್ ಸಿಂಗ್ ಸಿಧು, ಮನ್ ಪ್ರೀತ್ ಬಾದಲ್, ಬ್ರಹ್ಮ ಮಹೀಂದ್ರಾ, ಚರಂಜಿತ್ ಚನ್ನಿ, ರಾಣಾ ಗುರ್ಜಿತ್, ಸಾಧು ಸಿಂಗ್ ಧರಮ್ಸೋತ್, ತ್ರಿಪಾಠ್ ಬಜ್ವಾ ಸಚಿವರಾಗಿಪ್ರಮಾಣವಚನ ಸ್ವಿಕರಿಸಿದರು. ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಭಾಗವಹಿಸಿದ್ದರು.

**<u>ಉತ್ತರ ಪ್ರದೇಶ</u>**



ಉತ್ತರ ಪ್ರದೇಶದ ನೂತನ ಮುಖ್ಯ ಮಂತ್ರಿಯಾಗಿ ಯೋಗಿ ಆದಿತ್ಯನಾಥ್ ರವರು ಪ್ರಮಾಣ ವಚನ ಸ್ವೀಕರಿಸಿದರು. ಯೋಗಿ ಆದಿತ್ಯನಾಥ್ ಹಿಂದು ಯುವ ವಾಹಿನಿ ಎಂಬ ಸಂಘದ ಸ್ಥಾಪಕರು. ಯೋಗಿಜೀ ಗೋರಕ್ ಪುರದ ಗೋರಕ್ ನಾಥ ಮಠದ ಪ್ರಧಾನ ಅರ್ಚಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಯೋಗಿ ಆದಿತ್ಯನಾಥ್ ತಮ್ಮ 26ನೆ ವಯಸ್ಸಿನಲ್ಲಿಯೇ ಉತ್ತರ ಪ್ರದೇಶದ ಗೋರಕ್ ಪುರದ ಮೂಲಕ ಲೋಕಸಭೆಗೆ ಆಯ್ಕೆಯಾಗಿದ್ದರು. 1998, 1999, 2004, 2009 ಮತ್ತು 2014ರ ಲೋಕಸಭಾ ಚುನಾವಣೆಗಳಲ್ಲಿ ಸತತವಾಗಿ ಜಯ ಗಳಿಸುತ್ತಾ ಬಂದಿದ್ದಾರೆ. ಯೋಗಿ ಅವರು ಉತ್ತರ ಪ್ರದೇಶದ 21ನೇ ಮುಖ್ಯಮಂತ್ರಿಯಾಗಿದ್ದಾರೆ.

**<u>ಗೋವಾ</u>**

ಗೋವಾದ ನೂತನ ಮುಖ್ಯಮಂತ್ರಿಯಾಗಿ ಪರ್ಸೇಕರ್ ಅವರೊಂದಿಗೆ ಇತರೆ 9 ಮಂದಿ ಸಚಿವರು ಸಹ ಪ್ರಮಾಣ ವಚನ ಸ್ವೀಕರಿಸಿದರು. ಪರ್ಸೇಕರ್ ಅವರು ಮನೋಹರ್ ಪರಿಕ್ಕರ್ ಸಚಿವ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದರು. ಉಪ ಮುಖ್ಯಮಂತ್ರಿ ಫ್ರಾನ್ಸಿಸ್ ಡಿಸೋಜಾ ಕೂಡ ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದರು.

## **ಉತ್ತರಖಂಡ**

ಉತ್ತರಖಂಡ್ ನ ಮಾಜಿ ಬಿಜೆಪಿ ಅಧ್ಯಕ್ಷ ತ್ರಿವೇಂದ್ರ ಸಿಂಗ್ ರಾವತ್ ಅವರು ಉತ್ತರಖಂಡದ ಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಉತ್ತರಖಂಡ ವಿಧಾನಸಭೆ ಚುನಾವಣೆಯಲ್ಲಿ 70 ಕ್ಷೇತ್ರಗಳ ಪೈಕಿ 57 ಕ್ಷೇತ್ರಗಳಲ್ಲಿ ಜಿಜೆಪಿ ಗೆಲುವು ಸಾಧಿಸಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ರಾವತ್ ಅವರು ಉತ್ತರಖಂಡದ 9ನೇ ಮುಖ್ಯಮಂತ್ರಿ.

## **ಪ್ರಪ್ರಥಮ ಸ್ವದೇಶಿ ನಿರ್ಮಿತ "ಮೇಧಾ" ರೈಲಿಗೆ ಚಾಲನೆ**



ಭಾರತದಲ್ಲಿ ಮಾಡಿ (ಮೇಕ್ ಇನ್ ಇಂಡಿಯಾ) ಅಭಿಯಾನದಡಿ ಸಂಪೂರ್ಣವಾಗಿ ಸ್ವದೇಶದಲ್ಲೆ ತಯಾರಿಸಲಾದ "ಮೇಧಾ" ರೈಲಿಗೆ ಚಾಲನೆ ನೀಡಲಾಯಿತು. ಮುಂಬೈನ ದದರ್ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಸಚಿವ ಸುರೇಶ್ ಪ್ರಭು ಅವರು ವಿಡಿಯೋ ಸಂವಾದದ ಮೂಲಕ ರೈಲಿಗೆ ಚಾಲನೆ ನೀಡಿದರು. ಈ ರೈಲಿನ ಬೋಗಿಗಳನ್ನು ರೂ 43.23 ಕೋಟಿ ವೆಚ್ಚದಲ್ಲಿ ತಯಾರಿಸಲಾಗಿದ್ದು, ಜರ್ಮನಿಯಿಂದ ಆಮದು ಮಾಡಿಕೊಳ್ಳುವ ಬೋಗಿಗಳಿಗೆ ಹೋಲಿಸಿದಾಗ ರೂ 1 ಕೋಟಿ ಉಳಿತಾಯವಾಗಲಿದೆ. ಅಲ್ಲದೇ ವಿದೇಶಿ ವಿನಿಮಯದಿಂದ ಸರಿ ಸುಮಾರು $50 ಲಕ್ಷ ಉಳಿತಾಯವಾಗಲಿದೆ.

**ಪ್ರಮುಖಾಂಶಗಳು**:

- ಮೇಧಾ ರೈಲು ತಮಿಳುನಾಡಿನ ರಾಜಧಾನಿಯಾದ ಚೆನ್ನೈನಲ್ಲಿ ಇರುವ ಇಂಟೆಗ್ರಾಲ್ ಕೋಚ್ ಫ್ಯಾಕ್ಟರಿ (ICF) ಯಲ್ಲಿ ನಿರ್ಮಾಣಗೊಂಡಿದೆ.
- 12 ಬೋಗಿಗಳನ್ನು ಒಳಗೊಂಡಿರುವ ಮೇಧಾ ರೈಲಿನಲ್ಲಿ 6,050 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ ಹಾಗೂ 1,168 ಆಸನಗಳನ್ನು ಒಳಗೊಂಡಿದೆ.
- ಗಂಟೆಗೆ 110 ಕಿ.ಮೀ ಚಲಿಸುವ ಸಾಮರ್ಥ್ಯವನ್ನು ಮೇಧಾ ರೈಲು ಹೊಂದಿದೆ. ಇತರೆ ರೈಲುಗಳು 90 ರಿಂದ 100 ಕಿ.ಮೀ ವೇಗದಲ್ಲಿ ಚಲಿಸಬಲ್ಲವು.
- ಪ್ರತಿ ಬೋಗಿಗಳಲ್ಲಿ ಎಲ್ಇಡಿ ದೀಪಗಳನ್ನು ಅಳವಡಿಸಲಾಗಿದ್ದು, 30-35% ಇಂಧನ ಉಳಿತಾಯ ಆಗಲಿದೆ.
- ಈ ರೈಲಿನಲ್ಲಿ ಜಿಪಿಎಸ್ ಅಳವಡಿಸಲಾಗಿದ್ದು, ರೈಲು ನಿಲ್ದಾಣಗಳ ಬಗ್ಗೆ ಪೂರ್ವ ಮಾಹಿತಿಯನ್ನು ಪ್ರಯಾಣಿಕರಿಗೆ ಒದಗಿಸಲಿದೆ.

## ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಕರಡು ಕಾರ್ಮಿಕ ನೀತಿ



ಸ್ವ ಉದ್ಯೋಗಿಗಳು, ಕೃಷಿ ಕಾರ್ಮಿಕರು ಸೇರಿದಂತೆ ದೇಶವ್ಯಾಪ್ತಿ ಇರುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸಲುವಾಗಿ ಕೇಂದ್ರ ಕಾರ್ಮಿಕ ಸಚಿವಾಲಯ ಕರಡು ಕಾರ್ಮಿಕ ನೀತಿಯನ್ನು ಜಾರಿಗೆ ತರಲು ಉದ್ದೇಶಿಸಿದೆ. ದೇಶದ ಸುಮಾರು 45 ಕೋಟಿ ಕಾರ್ಮಿಕರಿಗೆ ಇದರಿಂದ ಅನುಕೂಲವಾಗಲಿದೆ ಎನ್ನಲಾಗುತ್ತಿದೆ.

**ಪ್ರಮುಖಾಂಶಗಳು**:

- ಸಂಘಟಿತ ಅಥವಾ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕಾರ್ಮಿಕರಿಗೂ ಈ ನೀತಿ ಅನ್ವಯವಾಗಲಿದೆ.
- ಆ ಮೂಲಕ ಇದೆ ಮೊದಲ ಬಾರಿಗೆ ಕೃಷಿ ಕಾರ್ಮಿಕರು ಹಾಗೂ ಸ್ವಯಂ ಉದ್ಯೋಗಿಗಳನ್ನು ಸಾಮಾಜಿಕ ಭದ್ರತೆಗೆ ಒಳಪಡಿಸಲಾಗುತ್ತಿದೆ. ಅಲ್ಲದೇ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಮಿಕನು ಸಹ ಸಾಮಾಜಿಕ ಭದ್ರತೆ ಅನುಕೂಲಗಳಿಗೆ ವಂತಿಗೆ ನೀಡಬೇಕು.
- ಎಲ್ಲಾ ತರಹದ ಕೈಗಾರಿಕೆಗಳು, ಗಣಿಗಾರಿಕೆ, ಚಾರಿಟಬಲ್ ಸಂಸ್ಥೆಗಳು, ಪೂರ್ಣ ಕಾಲಿಕ, ಅರೆ ಕಾಲಿಕವಾಗಿ ಮನೆಗಳಲ್ಲಿ ಕೆಲಸವನ್ನು ನಿರ್ವಹಿಸುವವರು ಇದರ ವ್ಯಾಪ್ತಿಗೆ ಬರಲಿದ್ದಾರೆ.
- ಯಾವುದೇ ಕೈಗಾರಿಕೆಗಳು ತಮ್ಮ ನೌಕರರಿಗೆ ಸಾಮಾಜಿಕ ಭದ್ರತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ವಿಫಲವಾದರೆ, ಪರಿಹಾರ ನೀಡಲು ಬದ್ದರಿರತಕ್ಕದ್ದು.
- ಪ್ರಧಾನ ಮಂತ್ರಿ ರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಾಮಾಜಿಕ ಭದ್ರತೆ ಮಂಡಳಿಯನ್ನು (NSSC) ಸ್ಥಾಪಿಸಲು ನೀತಿಯಡಿ ಅವಕಾಶ ಕಲ್ಪಿಸಲಾಗಿದೆ. ಆ ಮೂಲಕ ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಯೋಜನೆಗಳನ್ನು ಸುಲಭವಾಗಿ ಅನುಷ್ಠಾನಕ್ಕೆ ತರಲು ಸಹಾಯವಾಗಲಿದೆ.
- ಕೇಂದ್ರ ಹಣಕಾಸು ಸಚಿವರು, ಕಾರ್ಮಿಕ ಸಚಿವರು, ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣ ಸಚಿವರು NSSC ಯ ಸದಸ್ಯರಾಗಿರಲಿದ್ದಾರೆ.

## ರಾಜ್ಯ ಮತ್ತು ಕೇಂದ್ರಾಡಳಿತ ಜಿಎಸ್‌ಟಿ ಮಸೂದೆಗೆ ಒಪ್ಪಿಗೆ




ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಜಿಎಸ್‌ಟಿ ಯನ್ನು ಜಾರಿಗೆ ತರಲು ರಾಜ್ಯ ಮತ್ತು ಕೇಂದ್ರಾಡಳಿತ ಜಿಎಸ್‌ಟಿ ಮಸೂದೆಗಳಿಗೆ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ನೇತೃತ್ವದ ಸಭೆಯಲ್ಲಿ ಅನುಮೋದಿಸಲಾಯಿತು. ಇದು ಜಿಎಸ್‌ಟಿ ಮಂಡಳಿಯ 12ನೇ ಸಭೆಯಾಗಿದೆ. 2 ಪ್ರಮುಖ ವಿಷಯಗಳಾದ ಕೇಂದ್ರ ಜಿಎಸ್‌ಟಿ (ಸಿ-ಜಿಎಸ್‌ಟಿ), ಇಂಟಿಗ್ರೇಟೆಡ್ ಜಿಎಸ್‌ಟಿ (ಐ-ಜಿಎಸ್‌ಟಿ) ಹಾಗೂ ರಾಜ್ಯಗಳಿಗೆ ನಷ್ಟ ಪರಿಹಾರ ಕರಡು ಮಸೂದೆಗೆ ಮಂಡಳಿ ಈಗಾಗಲೇ ಅನುಮೋದನೆ ನೀಡಿದೆ. ಮಸೂದೆಗೆ ಅನುಮೋದನೆ ದೊರೆತಿರುವುದರಿಂದ ಜಿಎಸ್‌ಟಿ ಯನ್ನು ಪ್ರಾಯೋಗಿಕವಾಗ ಕೇಂದ್ರ ಮತ್ತು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗುವುದು.

**ಪ್ರಮುಖಾಂಶಗಳು:**

- ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಶೇ.5, 12, 18 ಮತ್ತು 28 ಸ್ಲಾಬ್ ನಲ್ಲಿ ವಿಧಿಸಲು ಮಂಡಳಿಯಲ್ಲಿ ನಿರ್ಧರಿಸಲಾಗಿದೆ.
- **ಕಪ್ಪುಹಣಕ್ಕೂ ಕಡಿವಾಣ:** ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದ ಕಪ್ಪುಹಣ ಹರಿವು ಕಂಡುಬಂದಿರುವುದರಿಂದ ಇದನ್ನೂ ಜಿಎಸ್‌ಟಿ ಅಡಿಯಲ್ಲಿ ತರಲು ನಿರ್ಧರಿಸಲಾಗಿದೆ. ಇದರಿಂದ ಕಪ್ಪುಹಣ ನಿಯಂತ್ರಣ ಸಾಧ್ಯವಾಗಲಿದೆ ಎಂದು ಕೌನ್ಸಿಲ್ ಅಭಿಪ್ರಾಯಪಟ್ಟಿದೆ.
- **ಸಿ-ಜಿಎಸ್‌ಟಿ:** ಇದರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವಿರಲಿದೆ. ಇದರಲ್ಲಿ ಅಬಕಾರಿ ಮತ್ತು ಸೇವಾ ತೆರಿಗೆ ಜಿಎಸ್‌ಟಿಯಲ್ಲೇ ಅಂತರ್ಗತಗೊಳ್ಳಲಿವೆ. ಐ-ಜಿಎಸ್‌ಟಿ ಅಂತಾರಾಜ್ಯ ವಹಿವಾಟಿನ ಮೇಲೆ ವಿಧಿಸುವ ತೆರಿಗೆಯಾಗಿದೆ. ಮಾರ್ಚ್ 9ರಂದು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ಮಸೂದೆ ಮಂಡನೆ ಮಾಡಲಾಗುತ್ತದೆ.
- **ಎಸ್-ಜಿಎಸ್‌ಟಿ:** ಇದು ಸರಕು ಮತ್ತು ಸೇವಾ ತೆರಿಗೆ ವಿಧಿಸಲು ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರವಾಗಿರುತ್ತದೆ. ಇದರಲ್ಲಿ ರಾಜ್ಯದಿಂದ ವಿಧಿಸಲಾಗಿರುವ ಉಳಿದ ತೆರಿಗೆಗಳನ್ನು ಅಂತರ್ಗತಗೊಳಿಸಲಾಗುತ್ತದೆ. ಇದಕ್ಕೆ ರಾಜ್ಯ ವಿಧಾನಸಭೆಯಲ್ಲಿ ಅನುಮೋದನೆ ಪಡೆಯಬೇಕಿದೆ. ಯುಟಿ-ಜಿಎಸ್‌ಟಿ ಕೂಡಾ ಲೋಕಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಬೇಕಿದೆ.

**ಯಾವ ತೆರಿಗೆಗಳು?**

ಕೇಂದ್ರ ಅಬಕಾರಿ ಸುಂಕ, ಕೇಂದ್ರ ಕಂದಾಯ ತೆರಿಗೆ (ಸೇಲ್ಸ್ ಟ್ಯಾಕ್ಸ್), ಸೇವಾ ತೆರಿಗೆ ಮತ್ತು ಕೇಂದ್ರದಿಂದ ಅನ್ವಯವಾಗುವ ಪರೋಕ್ಷ ತೆರಿಗೆಗಳು ಸಿ-ಜಿಎಸ್‌ಟಿಯಲ್ಲಿ ಅಂತರ್ಗತಗೊಳ್ಳಲಿದೆ. ರಾಜ್ಯದಿಂದ ಅನ್ವಯವಾಗುವ ಕಂದಾಯ ತೆರಿಗೆ, ವ್ಯಾಟ್, ಐಷಾರಾಮಿ ತೆರಿಗೆ ಮತ್ತು ಮನೋರಂಜನಾ ತೆರಿಗೆಗಳು ಎಸ್-ಜಿಎಸ್‌ಟಿಯಲ್ಲಿ ಅಂತರ್ಗತಗೊಳ್ಳಲಿವೆ.

**ಕೃಷಿಕರಿಗೂ ವಿನಾಯಿತಿ**

ಕೇಂದ್ರ, ರಾಜ್ಯ ಸರ್ಕಾರಗಳು ಜಿಎಸ್‌ಟಿ ಅಡಿ ನೋಂದಣಿ ಮಾಡಿಕೊಳ್ಳಲು ಕೃಷಿಕರು, ಸಣ್ಣ ವ್ಯಾಪಾರಿಗಳಿಗೆ ವಿನಾಯಿತಿ ನೀಡಿವೆ. ವಾರ್ಷಿಕ ವಹಿವಾಟು -ರ; 20 ಲಕ್ಷ ಮೀರಿದರಷ್ಟೇ ಜಿಎಸ್‌ಟಿ ಅಡಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಆದಾಗ್ಯೂ ಜಿಎಸ್‌ಟಿ ವಿನಾಯಿತಿಯಾಗಿ ಈಶಾನ್ಯ ರಾಜ್ಯಗಳಿಗೆ ವಾರ್ಷಿಕ ವಹಿವಾಟಿನ ಮಿತಿ 10 ಲಕ್ಷ ರೂ.ಗಳಿಗೆ ನಿಗದಿಪಡಿಸಲಾಗಿದೆ.

**ರೆಸ್ಟೋರೆಂಟ್‌ಗಳಿಗೆ ಶೇ.5 ತೆರಿಗೆ**

ವಾರ್ಷಿಕ 50 ಲಕ್ಷ ರೂ.ವರೆಗೆ ವಹಿವಾಟು ಹೊಂದಿರುವ ಹೋಟೆಲ್, ರೆಸ್ಟೋರೆಂಟ್ ಮತ್ತು ದಾಬಾಗಳಿಗೆ ಶೇ.5 ತೆರಿಗೆ ವಿಧಿಸಲು ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸಿದೆ. ಈ ಮೊತ್ತವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮಾನವಾಗಿ ಹಂಚಿಕೊಳ್ಳಲಿವೆ. 50 ಲಕ್ಷ ರೂಪಾಯಿಗಿಂತ ಕಡಿಮೆ ವಹಿವಾಟು ಹೊಂದಿರುವ ಉದ್ಯಮಗಳಿಗೆ ಶೇ.1 ಮತ್ತು ಶೇ.2 ತೆರಿಗೆ ವಿಧಿಸಲಾಗುತ್ತದೆ. ಸೇವೆಗಳಿಗೆ ಮಾತ್ರ ಶೇ.5ರಷ್ಟು ತೆರಿಗೆ ಇದೆ.

## <u>ಬಂಗಾಳದಲ್ಲಿ 1.04 ಕೋಟಿ ಜನರು ಆರ್ಸನೆಕ್ ಕಲುಷಿತಕ್ಕೆ ತುತ್ತು: ವರದಿ</u>



ಪಶ್ಚಿಮ ಬಂಗಾಳದಲ್ಲಿ ದೇಶದಲ್ಲೆ ಅತಿ ಹೆಚ್ಚು ಜನರು ಆರ್ಸನಿಕ್ ಕಲುಷಿತದಿಂದ ಭಾದಿತರಿರುವುದಾಗಿ ಲೋಕಸಭೆಯಲ್ಲಿ ಮಂಡಿಸಿದ ವರದಿಯೊಂದರಲ್ಲಿ ಹೇಳಲಾಗಿದೆ. ಪಶ್ಚಿಮ ಬಂಗಾಳದ ಎಂಟು ಜಿಲ್ಲೆಗಳ 83 ತಾಲ್ಲೂಕಿನ ಅಂತರ್ಜಲ ಆರ್ಸನೆಕ್ ರಾಸಾಯನಿಕ ಅಂಶದಿಂದ ಕಲುಷಿತಗೊಂಡಿದೆ ಎನ್ನಲಾಗಿದೆ. ಆರ್ಸೆನಿಕ್ ಗಂಭೀರತೆಯನ್ನು ನಿರ್ಮೂಲನೆ ಮಾಡಲು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಆದರೂ ಇನ್ನೂ ಸಾಕಷ್ಟು ಮಾಡಬೇಕಿದೆ. ಇಲ್ಲಿಯವರೆಗೆ ಶೇ 52% ಆರ್ಸೆನಿಕ್ ಭಾದಿತ ಪ್ರದೇಶಗಳಿಗೆ ಮಾತ್ರ ಶುದ್ದ ನೀರನ್ನು ಪೂರೈಸಲಾಗುತ್ತಿದೆ.

**ಪ್ರಮುಖಾಂಶಗಳು**:

- ಮಾರ್ಚ್ 2017ರ ಹೊತ್ತಿಗೆ ದೇಶದಲ್ಲಿ ಒಟ್ಟಾರೆ 1.48 ಕೋಟಿ ಜನರು ಆರ್ಸೆನಿಕ್ ನಿಂದ ಭಾದಿತರಾಗಿದ್ದಾರೆ.
- ಪಶ್ಚಿಮ ಬಂಗಾಳ ಒಂದರಲ್ಲೆ 1.04 ಕೋಟಿ ಜನರು ಆರ್ಸೆನಿಕ್ ಕಲುಷಿತ ನೀರಿಗೆ ತುತ್ತಾಗಿದ್ದು, ದೇಶದಲ್ಲೆ ಅತಿ ಹೆಚ್ಚು.
- ಬಿಹಾರ್ (16.44 ಲಕ್ಷ) ಹಾಗೂ ಅಸ್ಸಾಂ (14.48 ಲಕ್ಷ) ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.
- ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿ ಪ್ರಕಾರ ಕುಡಿಯುವ ನೀರಿನಲ್ಲಿ ಆರ್ಸೆನಿಕ್ ಮಿತಿ 0.1 m/litre.

**ಆರ್ಸೆನಿಕ್:**

- ಆರ್ಸೆನಿಕ್ ಭೂಮಿಯ ಹೊರಪದರದಲ್ಲಿರುವ ಒಂದು ನೈಸರ್ಗಿಕ ಅಂಶ. ಇದು ಗಾಳಿ, ನೀರು ಹಾಗೂ ಭೂಮಿಯಲ್ಲಿ ವ್ಯಾಪಕವಾಗಿ ಪಸರಿಸಿದೆ. ಆರ್ಸೆನಿಕ್ ಅಜೈವಿಕ ರೂಪದಲ್ಲಿ ಅತ್ಯಂತ ವಿಷಕಾರಿ.
- ಆರ್ಸೆನಿಕ್ ಕಲುಷಿತ ನೀರನ್ನು ಕುಡಿಯಲು ಬಳಸುವುದು, ಆಹಾರ ಬೆಳೆಗಳನ್ನು ಬೆಳೆಯಲು ಬಳಸುವುದು ಹಾಗೂ ಆಹಾರ ತಯಾರಿಕೆಯಲ್ಲಿ ಬಳಸುವುದರಿಂದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.
- ದೀರ್ಘಕಾಲದವರೆಗೆ ಆರ್ಸೆನಿಕ್ ಬಳಸುವುದರಿಂದ ಕ್ಯಾನ್ಸರ್, ನರ ಸಂಬಂಧಿ ಹಾಗೂ ಹೃದಯ ಸಂಬಂಧಿ ಕಾಯಿಲೆಗಳು ಹಾಗೂ ಚರ್ಮದ ಕಲೆಗಳು ಉಂಟಾಗುತ್ತದೆ.
- ಗಂಗಾ ನದಿ ಭೂಮಿಯಲ್ಲಿ ಅತಿ ಆಳದ ಬೋರ್ ವೆಲ್ ಕೊರೆಸಿ ಕುಡಿಯಲು ಬಳಸುತ್ತಿರುವುದು ಪಶ್ಚಿಮ ಬಂಗಾಳದಲ್ಲಿ ಆರ್ಸೆನಿಕ್ ಭಾದಿತರ ಸಂಖ್ಯೆ ಹೆಚ್ಚಿದೆ.

## <u>ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿ ದೇಶದ ಮೊದಲ ಸನ್ನೆ ಭಾಷೆ ನಿಘಂಟು</u>

ಕಿವುಡರು ಹಾಗೂ ಮಾತು ಬಾರದವರು ಬಳಸುವ ಸನ್ನೆ ಭಾಷೆಯಲ್ಲಿ ಐಕ್ಯತೆ ತರಲು ಕೇಂದ್ರ ಸರ್ಕಾರ ಅತಿ ಶೀಘ್ರದಲ್ಲಿ ದೇಶದ ಮೊದಲ ಸನ್ನೆ ಭಾಷೆ ನಿಘಂಟನ್ನು ಹೊರತರಲಿದೆ. ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ ಈ ನಿಘಂಟನ್ನು ಅಭಿವೃದ್ಧಿಪಡಿಸಿದ್ದು, ವಿಡಿಯೋ ಹಾಗ್ಯೆ ಮುದ್ರಿತ ವಿಧಾನದಲ್ಲಿ ಲಭ್ಯವಿರಲಿದೆ.

**ಪ್ರಮುಖಾಂಶಗಳು**:

- ಶ್ರವಣ ದೋಷಿಗಳು ಹಾಗೂ ಮಾತು ಬಾರದವರು ಬಳಸುವ ಜನಪ್ರಿಯ ಗ್ರಾಫಿಕ್ ಚಿತ್ರಣಗಳನ್ನು ಈ ನಿಘಂಟು ಒಳಗೊಂಡಿರಲಿದೆ. ಅಲ್ಲದೆ ಕಾನೂನು, ತಾಂತ್ರಿಕ ಹಾಗೂ ವೈದ್ಯಕೀಯ ಪದಗಳನ್ನು ಒಳಗೊಂಡಿರಲಿದೆ.
- ಶ್ರವಣ ದೋಷ ಮತ್ತು ಮೂಕತನದಿಂದ ಬಳಲುತ್ತಿರುವ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಸನ್ನೆ ಭಾಷೆಯ ಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಸಂವಹನ ಕೊರತೆಯನ್ನು ನೀಗಿಸಲಿದೆ.
- ಅಲ್ಲದೇ ಆಸ್ಪತ್ರೆ, ಬ್ಯಾಂಕ್, ನ್ಯಾಯಾಲಯ, ವಿಮಾನ ನಿಲ್ದಾಣಗಳಲ್ಲಿ ಸೇವೆಯನ್ನು ಒದಗಿಸಲು ಸಹಾಯವಾಗಲಿದೆ.

**ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ:**

ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ ಒಂದು ಸ್ವಾಯತತೆ ಸಂಸ್ಥೆಯಾಗಿದ್ದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ. ಸೊಸೈಟಿ ನೋಂದಣಿ ಕಾಯಿದೆಯಡಿ ಇದನ್ನು ಸ್ಥಾಪಿಸಲಾಗಿದೆ. ಭಾರತೀಯ ಸನ್ನೆ ಭಾಷೆಯಲ್ಲಿ ಸಂಶೋಧನೆ ಕೈಗೊಂಡು ಅಭಿವೃದ್ಧಿಪಡಿಸುವುದು ಸಂಸ್ಥೆಯ ಮುಖ್ಯ ಉದ್ದೇಶ.

## <u>ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿ ದೇಶದ ಮೊದಲ ಸನ್ನೆ ಭಾಷೆ ನಿಘಂಟು</u>



ಕಿವುಡರು ಹಾಗೂ ಮಾತು ಬಾರದವರು ಬಳಸುವ ಸನ್ನೆ ಭಾಷೆಯಲ್ಲಿ ಐಕ್ಯತೆ ತರಲು ಕೇಂದ್ರ ಸರ್ಕಾರ ಅತಿ ಶೀಘ್ರದಲ್ಲಿ ದೇಶದ ಮೊದಲ ಸನ್ನೆ ಭಾಷೆ ನಿಘಂಟನ್ನು ಹೊರತರಲಿದೆ. ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ ಈ ನಿಘಂಟನ್ನು ಅಭಿವೃದ್ಧಿಪಡಿಸಿದ್ದು, ವಿಡಿಯೋ ಹಾಗ್ಯೆ ಮುದ್ರಿತ ವಿಧಾನದಲ್ಲಿ ಲಭ್ಯವಿರಲಿದೆ.

**ಪ್ರಮುಖಾಂಶಗಳು**:

- ಶ್ರವಣ ದೋಷಿಗಳು ಹಾಗೂ ಮಾತು ಬಾರದವರು ಬಳಸುವ ಜನಪ್ರಿಯ ಗ್ರಾಫಿಕ್ ಚಿತ್ರಣಗಳನ್ನು ಈ ನಿಘಂಟು ಒಳಗೊಂಡಿರಲಿದೆ. ಅಲ್ಲದೆ ಕಾನೂನು, ತಾಂತ್ರಿಕ ಹಾಗೂ ವೈದ್ಯಕೀಯ ಪದಗಳನ್ನು ಒಳಗೊಂಡಿರಲಿದೆ.
-

- ಶ್ರವಣ ದೋಷ ಮತ್ತು ಮೂಕತನದಿಂದ ಬಳಲುತ್ತಿರುವ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಸನ್ನೆ ಭಾಷೆಯ ಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಸಂವಹನ ಕೊರತೆಯನ್ನು ನೀಗಿಸಲಿದೆ.
- ಅಲ್ಲದೇ ಆಸ್ಪತ್ರೆ, ಬ್ಯಾಂಕ್, ನ್ಯಾಯಾಲಯ, ವಿಮಾನ ನಿಲ್ದಾಣಗಳಲ್ಲಿ ಸೇವೆಯನ್ನು ಒದಗಿಸಲು ಸಹಾಯವಾಗಲಿದೆ.

**ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ:**

ಭಾರತೀಯ ಸನ್ನೆ ಭಾಷೆ ಸಂಶೋಧನೆ ಮತ್ತು ತರಭೇತಿ ಸಂಸ್ಥೆ ಒಂದು ಸ್ವಾಯತತೆ ಸಂಸ್ಥೆಯಾಗಿದ್ದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ. ಸೊಸೈಟಿ ನೋಂದಣಿ ಕಾಯಿದೆಯಡಿ ಇದನ್ನು ಸ್ಥಾಪಿಸಲಾಗಿದೆ. ಭಾರತೀಯ ಸನ್ನೆ ಭಾಷೆಯಲ್ಲಿ ಸಂಶೋಧನೆ ಕೈಗೊಂಡು ಅಭಿವೃದ್ಧಿಪಡಿಸುವುದು ಸಂಸ್ಥೆಯ ಮುಖ್ಯ ಉದ್ದೇಶ.

## <u>ಅಣೆಕಟ್ಟುಗಳ ಸುರಕ್ಷತೆಗೆ ಹೊಸ ಕಾಯಿದೆ ತರಲು ಕೇಂದ್ರ ಸರ್ಕಾರ ಚಿಂತನೆ</u>



ದೇಶದಾದ್ಯಂತ ಇರುವ ಸರಿ ಸುಮಾರು 5300ಕ್ಕೂ ಹೆಚ್ಚು ಅಣೆಕಟ್ಟುಗಳ ಸುರಕ್ಷತೆ ಉತ್ತಮಗೊಳಿಸಲು ಸಾಂಸ್ಥಿಕ ಯಾಂತ್ರಿಕ ಅವಲೋಕನ ನಡೆಸುವ ಸಲುವಾಗಿ ಹೊಸ ಕಾಯಿದೆಯ ಕರಡನ್ನು ಸಿದ್ದಪಡಿಸಿದೆ. ಕೇಂದ್ರ ಕಾನೂನು ಸಚಿವಾಲಯ ಈ ಕಾಯಿದೆಯ ಕರಡು ಪ್ರತಿಯನ್ನು ಸಿದ್ದಪಡಿಸಿದ್ದು, ಕೇಂದ್ರ ಸಚಿವ ಸಂಪುಟದ ಅನುಮೋದನೆ ಪಡೆದ ನಂತರ ಸಂಸತ್ತಿನಲ್ಲಿ ಮಂಡಿಸಲಾಗುವುದು.

**ಕಾಯಿದೆಯ ಅಗತ್ಯವೇನು?**

- ದೇಶವ್ಯಾಪ್ತಿ ಸರಿಸುಮಾರು 4900ಕ್ಕೂ ಹೆಚ್ಚು ದೊಡ್ಡ ಅಣೆಕಟ್ಟುಗಳಿವೆ, ಅಲ್ಲದೇ ಸಾವಿರಾರು ಸಣ್ಣ ಜಲಾಶಯಗಳಿವೆ. ಆದಾಗ್ಯೂ ಜಲಾಶಯಗಳು, ನೀರಿನ ಸಂಗ್ರಹ ಮೂಲಗಳನ್ನು ಕಳೆದ ಕೆಲವು ದಶಕಗಳಿಂದ ಸುರಕ್ಷತೆಯ ಮಾದರಿ ಎಂದು ಪರಿಗಣಿಸಲಾಗಿಲ್ಲ.
- ಸುರಕ್ಷತೆಯ ಕೊರತೆಯಿಂದ ಅಣೆಕಟ್ಟುಗಳ ವೈಫಲ್ಯ ಕಂಡುಬಂದರೆ ಅದರಿಂದಾಗುವ ಅನಾಹುತ ಅಷ್ಟಿಷ್ಟಲ್ಲ. 1979 ರಲ್ಲಿ ಗುಜರಾತಿನ ಮಚ್ಚು ಅಣೆಕಟ್ಟು ಒಡೆದು 25,000ಕ್ಕೂ ಹೆಚ್ಚು ಜನ ಸಾವನ್ನಪ್ಪಿದರು.
- ಅಲ್ಲದೇ ಭಾರತದ ಅಣೆಕಟ್ಟುಗಳ ಸ್ಥಿತಿಗಳ ಬಗ್ಗೆ ಇತ್ತೀಚೆಗೆ ನಡೆಸಲಾದ ಅಧ್ಯಯನದ ಪ್ರಕಾರ ದೇಶದ ಅರ್ಧದಷ್ಟು ಅಣೆಕಟ್ಟುಗಳು ಸುರಕ್ಷತೆ ಗುಣಮಟ್ಟದ ಕೊರತೆ ಇದೆ. ಆಗಾಗಿ ಕಠಿಣ ಸುರಕ್ಷತೆ ಕ್ರಮದ ಅಗತ್ಯವಿದೆ.

**<u>ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆ-2016ಗೆ ಸಂಸತ್ತಿನಲ್ಲಿ ಅಂಗೀಕಾರ</u>**



ಕಾರ್ಮಿಕರ ಪರಿಹಾರಕ್ಕಾಗಿ ಹೆಚ್ಚುತ್ತಿರುವ ಕಾನೂನು ವಿವಾದಗಳನ್ನು ಕಡಿಮೆಗೊಳಿಸುವ 'ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆ-2016'ಗೆ ಸಂಸತ್ತಿನಲ್ಲಿ ಅಂಗೀಕಾರ ದೊರೆತಿದೆ. ಈ ಮಸೂದೆಯು ಕಾರ್ಮಿಕರ ಪರಿಹಾರ ಕಾಯಿದೆ 1923ಕ್ಕೆ ತಿದ್ದುಪಡಿ ತರಲಿದೆ. ಯಾವುದಾದರೂ ಅಪಘಾತದಿಂದ ಗಾಯಗೊಳ್ಳುವ ಕಾರ್ಮಿಕರಿಗೆ 1 ಲಕ್ಷ ಪರಿಹಾರವನ್ನು ಮಸೂದೆಯಡಿ ಕಲ್ಪಿಸಲಾಗಿದೆ. ಅಲ್ಲದೇ ಕಾಯಿದೆಯ ಉಲ್ಲಂಘನೆ ಮಾಡುವ ಉದ್ಯೋಗದಾತರಿಗೆ ಕಠಿಣ ಶಿಕ್ಷೆಯನ್ನು ವಿಧಿಸುವ ಅವಕಾಶವನ್ನು ಸಹ ಮಸೂದೆ ಒಳಗೊಂಡಿದೆ.

**ಪ್ರಮುಖಾಂಶಗಳು**:


- ಕಾಯಿದೆಯಡಿ ಉದ್ಯೋಗದಾತರು ತನ್ನ ಕಾರ್ಮಿಕರಿಗೆ ಪರಿಹಾರ ಪಡೆದುಕೊಳ್ಳುವ ಹಕ್ಕನ್ನು ತಿಳಿಸುವುದು ಕಡ್ಡಾಯ. ಈ ಮಾಹಿತಿಯನ್ನು ಕೆಲಸಕ್ಕೆ ನೇಮಕಾತಿ ಮಾಡಿಕೊಳ್ಳುವಾಗಲೇ ನೀಡುವುದು ಕಡ್ಡಾಯ.
- ಮಾಹಿತಿಯನ್ನು ನೀಡಲು ವಿಫಲವಾಗುವ ಉದ್ಯೋಗದಾತರಿಗೆ ರೂ 50,000 ದಿಂದ ರೂ 1 ಲಕ್ಷ ವರೆಗೆ ದಂಡ ವಿಧಿಸಲಾಗುವುದು.
- ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆಯಿಂದ ಕಾರ್ಮಿಕರು ಹಾಗೂ ಅವರ ಅವಲಂಬಿತರು ಉದ್ಯೋಗ ಮಾಡುವ ಸಮಯದಲ್ಲಿ ವೃತ್ತಿ ಸಂಬಂಧಿತ ಕಾಯಿಲೆ ಹಾಗೂ ಅವರನ್ನು ಸಾವು ಹಾಗೂ ಸಾವಿನವರೆಗೂ ನಿಷ್ಕ್ರಿಯಗೊಳಿಸುವ ತೊಂದರೆ, ಕೈಗಾರಿಕಾ ಅಪಘಾತಗಳಿಂದ ಗಾಯ ಸೇರಿದಂತೆ ಆಗುವ ತೊಂದರೆಗಳಿಗೆ ಪರಿಹಾರವನ್ನು ಪಡೆಯಬಹುದು.

**ಕಾರ್ಮಿಕರ ಪರಿಹಾರ ಕಾಯಿದೆ-1923**

- ಇದರಡಿ ಕಾರ್ಮಿಕರು ಹಾಗೂ ಅವರ ಅವಲಂಬಿತರು ಉದ್ಯೋಗ ಮಾಡುವ ಸಮಯದಲ್ಲಿ ವೃತ್ತಿ ಸಂಬಂಧಿತ ಕಾಯಿಲೆ ಹಾಗೂ ಅವರನ್ನು ಸಾವು ಹಾಗೂ ಸಾವಿನವರೆಗೂ ನಿಷ್ಕ್ರಿಯಗೊಳಿಸುವ ತೊಂದರೆ, ಕೈಗಾರಿಕಾ ಅಪಘಾತಗಳಿಂದ ಗಾಯ ಸೇರಿದಂತೆ ಆಗುವ ತೊಂದರೆಗಳಿಗೆ ಪರಿಹಾರವನ್ನು ಪಡೆಯಬಹುದು.
- ಕಾಯಿದೆಯ ಸೆಕ್ಷನ್ 30ರ ಅಡಿಯಲ್ಲಿ ಕಾರ್ಮಿಕರು ತಮ್ಮ ಪರಿಹಾರ ವಿವಾದಕ್ಕೆ ಸಂಬಂಧಪಟ್ಟಂತೆ 300ರೂ.ಗಳಿಗಿಂತ ಹೆಚ್ಚಿನ ಮೊತ್ತವನ್ನು ಪಡೆಯಲು ಹೈಕೋರ್ಟ್'ಗಳವರೆಗೂ ಕಾನೂನು ಹೋರಾಟ ನಡೆಸಬಹುದು.

# ವಿಜ್ಞಾನ-ತಂತ್ರಜ್ಞಾನ

**ಫೆಬ್ರುವರಿ 28: ರಾಷ್ಟ್ರೀಯ ವಿಜ್ಞಾನ ದಿನ (National Science Day)**




ಪ್ರತಿ ವರ್ಷ ಫೆಬ್ರುವರಿ 28 ರಂದು "**ರಾಷ್ಟ್ರೀಯ ವಿಜ್ಞಾನ ದಿನ**"ವನ್ನು ಆಚರಿಸಲಾಗುತ್ತದೆ. ವಿಜ್ಞಾನ ಹಾಗೂ ನಮ್ಮ ಜೀವನದಲ್ಲಿ ಅದರ ಮಹತ್ವದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ರಾಷ್ಟ್ರೀಯ ವಿಜ್ಞಾನ ದಿನ ಆಚರಣೆಯ ಉದ್ದೇಶ. "Science and Technology for Specially Abled Persons" ಇದು ಈ ವರ್ಷದ ರಾಷ್ಟ್ರೀಯ ವಿಜ್ಞಾನ ದಿನ ಧ್ಯೇಯವಾಕ್ಯವಾಗಿದೆ. ಭಾರತದ ಹೆಮ್ಮೆಯ ವಿಜ್ಞಾನಿ ಸರ್ ಸಿ ವಿ ರಾಮನ್ ಅವರ ಅಪೂರ್ವ ಸಾಧನೆಯ ನೆನಪಿನಲ್ಲಿ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನ ಎಂದು ಗುರುತಿಸಲಾಗಿದೆ. 1928ರ ಫೆಬ್ರುವರಿ 28ರಂದು 'ರಾಮನ್ ಇಫೆಕ್ಟ್' ಎಂದೇ ಪ್ರಸಿದ್ಧವಾದ ತಮ್ಮ ಅಧ್ಯಯನದ ವಿವರಗಳನ್ನು ಜಗತ್ತಿಗೆ ತಿಳಿಸಿದ್ದರು. ರಾಮನ್ ಅವರ ಈ ಆವಿಷ್ಕಾರಕ್ಕಾಗಿ 1930 ರಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು.

**ಹಿನ್ನಲೆ**:

- 1986 ರಿಂದ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತಿದೆ.
- ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ ಕಮ್ಯೂನಿಕೇಷನ್ ಸರ್ಕಾರಕ್ಕೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುವಂತೆ ಮನವಿ ಮಾಡಿದ ಹಿನ್ನಲೆಯಲ್ಲಿ ಫೆಬ್ರುವರಿ 28 ಅನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಘೋಷಿಸಲಾಯಿತು.
- ಮೊಟ್ಟ ಮೊದಲ ರಾಷ್ಟ್ರೀಯ ವಿಜ್ಞಾನ ದಿನವನ್ನು 28ನೇ ಫೆಬ್ರುವರಿ 1987 ರಂದು ಆಚರಿಸಲಾಯಿತು.

## ರಾಮನ್ ಎಫೆಕ್ಟ್ ಎಂದರೇನು?

ಯಾವುದೇ ಪಾರದರ್ಶಕ ರಾಸಾಯನಿಕ ವಸ್ತುವಿನ ಮೂಲಕ ಬೆಳಕನ್ನು ಹಾಯಿಸಿದಾಗ ಅದರಿಂದ ಹೊರಬರುವ ಕಿರಣಗಳು ಒಳಬರುವ ಕಿರಣಗಳಿಗಿಂತ ಭಿನ್ನವಾದ ದಿಕ್ಕಿನತ್ತ ಹೊರಳಿರುವುದನ್ನು ನಾವು ನೋಡಬಹುದು (ಗಾಜಿನ ಪಟ್ಟಕದ ಮೂಲಕ ಬೆಳಕನ್ನು ಹಾಯಿಸುವ ಉದಾಹರಣೆ ನೆನಪಿಸಿಕೊಳ್ಳಿ). ಹೀಗೆ ಚದುರಿದ ಬಹುಪಾಲು ಕಿರಣಗಳ ಸ್ವರೂಪ ಮೂಲ ಕಿರಣದಂತೆಯೇ ಇರುತ್ತದಾದರೂ ಒಂದಷ್ಟು ಭಾಗದ ಕಿರಣಗಳ ತರಂಗಾಂತರ ಮೂಲಕ್ಕಿಂತ ಬದಲಾಗಿರುತ್ತದೆ. ಇದನ್ನು ರಾಮನ್ ಪರಿಣಾಮವೆಂದು ಕರೆಯಲಾಗುತ್ತದೆ.

**<u>ಶತ್ರು ಶಸ್ತ್ರಾಸ್ತ್ರ ಪತ್ತೆ ಹಚ್ಚುವ ರಾಡರ್ “ಸ್ವಾತಿ” ಸೇನೆಗೆ ಸೇರ್ಪಡೆ</u>**



ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ದಿ ಸಂಸ್ಥೆ (ಡಿಆರ್ಡಿಒ) ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರ ಪತ್ತೆಹಚ್ಚುವ ರಾಡರ್ “ಸ್ವಾತಿ (SWATHI)”ಯನ್ನು ಸೇನೆಗೆ ಹಸ್ತಾಂತರ ಮಾಡಿದೆ. ಇದೇ ವೇಳೆ ರಕ್ಷಣಾ ಇಲಾಖೆಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ ವಿಶೇಷ ವಾಹನ `ಎನ್‌ಬಿಸಿಆರ್ ವಿ` ಯನ್ನು ಸಹ ಸೇನೆಗೆ ಹಸ್ತಾಂತರಗೊಳಿಸಲಾಯಿತು, ಇದು ನ್ಯೂಕ್ಲಿಯರ್, ಜೈವಿಕ, ರಾಸಾಯನಿಕ ಸೇರಿದಂತೆ ಯಾವುದೇ ಮಾದರಿಯ ಯುದ್ಧವನ್ನು ಎದುರಿಸುವ ಸಾಮರ್ಥ್ಯ ಹೊಂದಿದೆ.

**ಸ್ವಾತಿ ರಾಡರ್ ಬಗ್ಗೆ:**

- ಡಿಆರ್ಡಿಒ ದ ಎಲೆಕ್ಟ್ರಾನಿಕ್ಸ್ ಮತ್ತು ರಾಡರ್ ಡೆವಲಪ್ಮೆಂಟ್ ಎಸ್ಟಬ್ಲಿಷ್ಮೆಂಟ್ (LADE) ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಇದರ ವ್ಯಾಪ್ತಿ 50 ಕಿ.ಮೀ. ಪ್ರಸ್ತುತ ಜಗತ್ತಿನಾದ್ಯಂತ ಬಳಕೆಯಲ್ಲಿರುವ ಫಿರಂಗಿ ಬಂದೂಕುಗಳನ್ನು ತನ್ನ ವ್ಯಾಪ್ತಿಯಡಿ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ.
- ಎದುರಾಳಿ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚುವ ಹಾಗೂ ನಿಖರವಾಗಿ ಹೊಡೆದು ಉರುಳಿಸುವ ಕಾರ್ಯವನ್ನು ಇದು ಮಾಡಲಿದೆ.
- ಇದು ಅತ್ಯಂತ ನಿಖರವಾಗಿ ಮತ್ತು ಕ್ಷಿಣವಾಗಿ ಕ್ಷಿಪಣಿ, ಶೆಲ್, ಮಾರ್ಟಲ್ಸ್ ಮತ್ತು ರಾಕೆಟ್‌ಗಳನ್ನು ಪತ್ತೆಹಚ್ಚಿ ವಿಫಲಗೊಳಿಸುವ ಸಾಮರ್ಥ್ಯ ಹೊಂದಿದೆ.
- ಪ್ರಸ್ತುತ ಇಂತಹ ನಾಲ್ಕು ವ್ಯವಸ್ಥೆಗಳನ್ನು ಸೇನೆ ಹೊಂದಿದ್ದು, ಇನ್ನು 30 ಅನ್ನು ಖರೀದಿಸಲು ಆದೇಶ ಹೊರಡಿಸಲಾಗಿದೆ.
- ಭಾರತೀಯ ಸೇನೆಗೆ ಇಂತಹ ವ್ಯವಸ್ಥೆ ಅತ್ಯಂತ ಅವಶ್ಯವೆನಿಸಿತ್ತು. ಕಾರ್ಗಿಲ್ ಯುದ್ಧದಂತಹ ನಂತರ ಅಮೆರಿಕದಿಂದ ಆಮದು ಮಾಡಿಕೊಳ್ಳಲಾಗಿತ್ತು.

**ವಿಶೇಷ ರಕ್ಷಣಾ ವಾಹನ ಎಂಕೆ-1:**

ಡಿಆರ್ಡಿಒ ದ ವೆಹಿಕಲ್ಸ್ ರಿಸರ್ಚ್ ಮತ್ತು ಡೆವಲಪ್ಮೆಂಟ್ ಎಸ್ಟಬ್ಲಿಷ್ಮೆಂಟ್ ಇದನ್ನು ಅಭಿವೃದ್ಧಿಪಡಿಸಿದೆ. ಈ ವಾಹನ ಯಾವುದೇ ಮಾದರಿಯ ಭೂಪ್ರದೇಶದೊಳಗೆ ನುಗ್ಗಬಲ್ಲದು. ಕೆಮಿಕಲ್, ನ್ಯೂಕ್ಲಿಯರ್, ಜೈವಿಕ ಸೇರಿದಂತೆ ಸ್ಥಳದಿಂದ ಮಾದರಿಗಳನ್ನು ಸಂಗ್ರಹಿಸಿ ತಲುಪಿಸುತ್ತದೆ. ಈ ಮಾದರಿಗಳನ್ನು ಡಿಆರ್ ಡಿಒಗಳನ್ನು ಪರಿಶೀಲಿಸಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬಹುದಾಗಿದೆ.

**ಸೂಪರ್ ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ**



ಸ್ವದೇಶಿ ನಿರ್ಮಿತ ಸೂಪರ್ ಸಾನಿಕ್ ಕ್ಷಿಪಣಿ ಪರೀಕ್ಷೆಯನ್ನು ಭಾರತ ಯಶಸ್ವಿಯಾಗಿ ನಿರ್ವಹಿಸಿದೆ. ಒಡಿಶಾದ ಚಂಡೀಪುರದಲ್ಲಿರುವ ಸಂಯುಕ್ತ ಪರೀಕ್ಷಾ ವ್ಯಾಪ್ತಿಯಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು, ಶತ್ರು ರಾಷ್ಟ್ರಗಳ ಖಂಡಾಂತರ ಕ್ಷಿಪಣಿಗಳನ್ನು ಪತ್ತೆ ಹಚ್ಚಿ ಧ್ವಂಸ ಮಾಡಬಲ್ಲ ಸಾಮರ್ಥ್ಯವನ್ನು ಈ ಸೂಪರ್ ಸಾನಿಕ್ ಕ್ಷಿಪಣಿ ಹೊಂದಿದೆ.

**ಪ್ರಮುಖಾಂಶಗಳು:**

- ಸೂಪರ್ ಸಾನಿಕ್ ಕ್ಷಿಪಣಿ ಪರೀಕ್ಷೆಯನ್ನು ಡಿಆರ್ಡಿಓ ಸಂಸ್ಥೆ ಸ್ವದೇಶಿ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಿದೆ. ಈ ಕ್ಷಿಪಣಿಯು 7.5 ಮೀ ಉದ್ದವಿದೆ.
- ನ್ಯಾವಿಗೇಷನ್ ವ್ಯವಸ್ಥೆ, ಹೈ-ಟೆಕ್ ಕಂಪ್ಯೂಟರ್ ಸೇರಿದಂತೆ ಅತ್ಯಾಧನಿಕ ತಂತ್ರಜ್ಞಾನವನ್ನು ಈ ಕ್ಷಿಪಣಿಯಲ್ಲಿ ಅಳವಡಿಸಲಾಗಿದೆ.
- 30 ಕಿ.ಮೀಗಿಂತ ಕಡಿಮೆ ಎತ್ತರದ ವಾತಾವರಣದಲ್ಲಿ ಹಾರಿ ಬರುವ ಶತ್ರು ಕ್ಷಿಪಣಿಗಳನ್ನು ಧ್ವಂಸ ಮಾಡುವ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.

**ಭಾರತದ ಖಂಡಾಂತರ ಕ್ಷಿಪಣಿ ರಕ್ಷಣಾ ವ್ಯವಸ್ಥೆ (Ballistic Missile Defence System):**

- ಡಿಆರ್ಡಿಓ ದ "ರಿಸರ್ಚ್ ಸೆಂಟರ್ ಇಮರತ್" ಎಲ್ಲಾ ರೀತಿಯ ಅತ್ಯಾಧುನಿಕ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ರಕ್ಷಣಾ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿದೆ.
- ಖಂಡಾಂತರ ಕ್ಷಿಪಣಿ ರಕ್ಷಣಾ ವ್ಯವಸ್ಥೆಯು ಎರಡು ರೀತಿಯ ಕ್ಷಿಪಣಿಗಳನ್ನು ಒಳಗೊಂಡಿದೆ. ಅವುಗಳೆಂದರೆ ಕಡಿಮೆ ಎತ್ತರದ ಅಡ್ವಾನ್ಸ್ಡ್ ಏರಿಯಾ ಡಿಫೆನ್ಸ್ ಕ್ಷಿಪಣಿ ಮತ್ತು ಪೃಥ್ವಿ ರಕ್ಷಣಾ ವಾಹನ ಕ್ಷಿಪಣಿ (ಹೊರ ವಾತಾವರಣಕ್ಕೆ).
- 2022 ರ ವೇಳೆಗೆ ಈ ರಕ್ಷಣಾ ಕವಚ ಸೇವೆಯನ್ನು ಡಿಆರ್ಡಿಓ ಒದಗಿಸಲಿದೆ. ಅಮೆರಿಕಾ, ರಷ್ಯಾ ಮತ್ತು ಇಸ್ರೇಲ್ ನಂತರ ಖಂಢಾತರ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಹೊಂದಲಿರುವ ವಿಶ್ವದ ನಾಲ್ಕನೇ ರಾಷ್ಟ್ರ ಭಾರತ ಎನಿಸಲಿದೆ.
- ಫೆಬ್ರುವರಿ 2017 ರಲ್ಲಿ ಪೃಥ್ವಿ ಖಂಡಾಂತರ ಕ್ಷಿಪಣಿ ವ್ಯವಸ್ಥೆಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿತ್ತು.

## ಕೆನಡಾದ ಕ್ವ್ಯುಬೆಕ್ ನಲ್ಲಿ ವಿಶ್ವದ ಅತ್ಯಂತ ಹಳೆಯ ಪಳೆಯುಳಿಕೆ ಪತ್ತೆ



ಕೆನಡಾದ ಕ್ವ್ಯುಬೆಕ್ ನಲ್ಲಿ ಭೂಮಿಯ ಮೇಲಿನ ಅತ್ಯಂತ ಹಳೆಯ ಪಳೆಯುಳಿಕೆಯನ್ನು ಪತ್ತೆಹಚ್ಚಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಕಾರ್ಬನ್ ಡೇಟಿಂಗ್ ತಂತ್ರಜ್ಞಾನದ ಪ್ರಕಾರ ಈ ಪಳೆಯುಳಿಕೆ ಸುಮಾರು 3.8 ಬಿಲಿಯನ್ ವರ್ಷ ಅಥವಾ ಅದಕ್ಕಿಂತಲೂ ಅಂದರೆ 4.3 ಬಿಲಿಯನ್ ವರ್ಷದಷ್ಟು ಹಳೆಯದಿರಬಹುದು ಎಂದು ಅಂದಾಜಿಸಲಾಗಿದೆ.

**ಪ್ರಮುಖಾಂಶಗಳು**:

- ಪಳೆಯುಳಿಕೆಗಳು ಸಣ್ಣದಾಗಿ, ಕೊಳವೆ ರೀತಿಯಲ್ಲಿದ್ದು, ಸುಮಾರು ಅರ್ಧ ಮಿಲಿಮೀಟರ್ ಉದ್ದವಿದೆ. ಮಾನವ ಕೂದಲಿನ ಅರ್ಧದಷ್ಟು ಅಗಲವನ್ನು ಹೊಂದಿವೆ.
- ಈ ಪಳೆಯುಳಿಕೆಗಳು ಬ್ಯಾಕ್ಟೀರಿಯಾದ ಅವಶೇಷ ಎನ್ನಲಾಗಿದೆ. ಈ ಬ್ಯಾಕ್ಟೀರಿಯಾದ ಸಮುದ್ರದ ತಳದಲ್ಲಿ ಖನಿಜ ಭರಿತ ಬಿಸಿ ನೀರಿನ ಬುಗ್ಗೆಗಳ ಬಳಿ ವಾಸವಾಗಿದ್ದವು ಎನ್ನಲಾಗಿದೆ.
- ಹೆಮಾಟೈಟ್ (ಐರನ್ ಆಕ್ಸೈಡ್ ನ ವಿಧ) ನಿಂದ ಈ ಪಳೆಯುಳಿಕೆಗಳು ರಚನೆಗೊಂಡಿವೆ.
- ಪಳೆಯುಳಿಕೆ ಪತ್ತೆಯಾಗಿರುವ ಶಿಲೆಗಳು ರೂಪಾಂತರ ಶಿಲೆಗಳಾಗಿವೆ. ಅಂದರೆ ಅತಿ ಉಷ್ಣತೆ ಮತ್ತು ಒತ್ತಡಕ್ಕೆ ಒಳಪಟ್ಟು ರಚನೆಗೊಂಡಿವೆ.

**ಸಂಶೋಧನೆಯ ಮಹತ್ವ:**

- ಭೂಮಿಯ ಮೇಲೆ ಜೀವಿಗಳ ಉಗಮ ಭೂಮಿ ರಚನೆಯಾದ ಮೇಲೆ ಸಮುದ್ರ ತಳದಲ್ಲಿನ ಬಿಸಿ ಬುಗ್ಗೆಗಳಿಂದ ಉಂಟಾಗಿದೆ ಎಂಬುದಕ್ಕೆ ಈ ಸಂಶೋಧನೆ ಪುಷ್ಠಿ ನೀಡುವಂತಿದೆ. ಆ ಮೂಲಕ ಭೂಮಿಯ ಮೇಲೆ ಜೀವಿಗಳು ಮೊದಲು ಉಗಮವಾದದ್ದು, ಸಾಗರ ತಳದಲ್ಲಿ ಪೋಷಕಾಂಶ ಭರಿತ ಬಿಸಿ ನೀರಿನ ಚಿಲುಮೆಗಳ ಬಳಿ ಎನ್ನುವುದಕ್ಕೆ ಬಲವಾದ ಪುರಾವೆ ದೊರೆತಂತೆ ಆಗಿದೆ.

## ಕೊಪರ್ನಿಕಸ್ ವೀಕ್ಷಣಾ ಕಾರ್ಯಕ್ರಮದ 5ನೇ ಉಪಗ್ರಹ ಯಶಸ್ವಿ ಉಡಾವಣೆ



ಯುರೋಪ್ ಬಾಹ್ಯಕಾಶ ಸಂಸ್ಥೆ ತನ್ನ ಬಹು ಬಿಲಿಯನ್ ಯುರೋ "ಕೊಪರ್ನಿಕಸ್ ವೀಕ್ಷಣಾ ಕಾರ್ಯಕ್ರಮ (Copernicus Observation Programme)"ದ 5ನೇ ಉಪಗ್ರಹ ಸೆಂಟಿನೆಲ್-2ಬಿ ಯನ್ನು ಯಶಸ್ವಿಯಾಗಿ ಉಡಾಯಿಸಿದೆ. ಫ್ರೆಂಚ್ ಗಯಾನದ ಬಾಹ್ಯಕಾಶ ಸಂಸ್ಥೆಯಿಂದ "ವೆಗಾ ರಾಕೆಟ್" ಬಳಸಿ ಈ ಉಪಗ್ರಹವನ್ನು ಉಡಾವಣೆ ಮಾಡಲಾಯಿತು. ವೆಗಾ ರಾಕೆಟ್ ಮೂಲಕ ಯಶಸ್ವಿಯಾಗಿ ಉಡಾಯಿಸಿದ 9ನೇ ಉಪಗ್ರಹ ಇದಾಗಿದೆ.

**ಪ್ರಮುಖಾಂಶಗಳು**:

- ಸೆಂಟಿನೆಲ್-2ಬಿ ಉಪಗ್ರಹ ಭೂಮಿಯ ಮೇಲೆ ನಿಗಾವಹಿಸುವ ಉಪಗ್ರಹ ಸಮೂಹಗಳ ಒಂದು ಭಾಗವಾಗಿದೆ. 2015ರಲ್ಲಿ ಹಾರಿ ಬಿಡಲಾದ ಅವಳಿ ಸೆಂಟಿನೆಲ್-2ಎ

ಉಪಗ್ರಹಗಳೊಂದಿಗೆ ಇದು ಕಾರ್ಯನಿರ್ವಹಿಸಲಿದೆ. ಭೂಮಿಯಿಂದ 786 ಕಿ.ಮೀ ಎತ್ತರದಲ್ಲಿ ಭೂಮಿಯ ವಿರುದ್ಧ ದಿಕ್ಕಿನಲ್ಲಿ ಇವು ಕಾರ್ಯನಿರ್ವಹಿಸಲಿವೆ.

- ಬೆಳೆ ಮುನ್ಸೂಚನೆ ಹಾಗೂ ನೈಸರ್ಗಿಕ ವಿಪತ್ತು ಸೇರಿದಂತೆ ಪರಿಸರ ಉಪಕ್ರಮಗಳ ಚಿತ್ರಗಳನ್ನು ತೆಗೆದು ಭೂಮಿಗೆ ರವಾನಿಸುವ ಕಾರ್ಯವನ್ನು ಮಾಡಲಿವೆ.
- ದೊಡ್ಡ ದೊಡ್ಡ ದ್ವೀಪ ಪ್ರದೇಶಗಳು, ಕರಾವಳಿ ಜಲಮಾರ್ಗಳು ಸೇರಿದಂತೆ ಭೂಮಿಯ ಪೂರ್ತಿ ಮೇಲ್ಮೈ ಪ್ರದೇಶದ ಹೈ ರೆಸಲ್ಯೂಷನ್ ಚಿತ್ರಗಳನ್ನು ಉಪಗ್ರಹಗಳು ತೆಗೆಯಲಿವೆ.
- ಆ ಮೂಲಕ ಸರೋವರ, ಸಾಗರ ಹಾಗೂ ಕರಾವಳಿ ತೀರಾ ಪ್ರದೇಶಗಳ ಮಾಲಿನ್ಯ,, ಭೂಮಿಯ ಬದಲಾವಣೆ, ಪ್ರವಾಹ, ಭೂಕುಸಿತ ಹಾಗೂ ಜ್ವಾಲಾಮುಖಿ ಚಟುವಟಿಕೆ ಮೇಲೆ ನಿಗಾವಹಿಸಿ ನೈಸರ್ಗಿಕ ವಿಪತ್ತು ಮ್ಯಾಪ್ ತಯಾರಿಸಲು ಸಹಾಯವಾಗಲಿದೆ.

**ಕೊಪರ್ನಿಕಸ್ ವೀಕ್ಷಣಾ ಕಾರ್ಯಕ್ರಮ:**

- ಕೊಪರ್ನಿಕಸ್ ವೀಕ್ಷಣಾ ಕಾರ್ಯಕ್ರಮ ಜಗತ್ತಿನ ಅತಿದೊಡ್ಡ ಭೂ ವೀಕ್ಷಣಾ ಕಾರ್ಯಕ್ರಮ. ಐರೋಪ್ಯ ಕಮೀಷನ್ ಹಾಗೂ ಯುರೋಪ್ ಬಾಹ್ಯಕಾಶ ಸಂಸ್ಥೆ ಜೊತೆಗೂಡಿ ಕಾರ್ಯಕ್ರಮವನ್ನು ವಿನ್ಯಾಸಪಡಿಸಿವೆ.
- ಏಳು ಸೆಂಟಿನೆಲ್ ಭೂವೀಕ್ಷಣಾ ಉಪಗ್ರಹಗಳ ಸಮೂಹವಿರುವ ಕಾರ್ಯಕ್ರಮ ಇದಾಗಿದೆ. ಇದರ ಮೊದಲ ಉಪಗ್ರಹವನ್ನು ಏಪ್ರಿಲ್ 2014ರಲ್ಲಿ ಉಡಾಯಿಸಲಾಯಿತು.

## <u>ಬ್ರಹ್ಮೋಸ್ ಕ್ಷಿಪಣಿ ಪರೀಕ್ಷಾರ್ಥ ಉಡಾವಣೆ ಯಶಸ್ವಿ</u>



'ಬ್ರಹ್ಮೋಸ್ ಸೂಪರ್ ಸಾನಿಕ್' ಕ್ಷಿಪಣಿ ಪರೀಕ್ಷಾರ್ಥ ಉಡಾವಣೆ ಒಡಿಶಾ ಕಡಲತೀರದಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. 'ಬ್ರಹ್ಮೋಸ್ ಸೂಪರ್ ಸಾನಿಕ್' ಕ್ಷಿಪಣಿಯ ಸುಧಾರಿತ ಭಾಗ ಇದಾಗಿದ್ದು, ಸಿಡಿತಲೆಗಳನ್ನು ಸಾಗಿಸುವ ಕ್ಷಿಪಣಿ ದೂರವನ್ನು 290 ಕಿಲೋ ಮೀಟರ್‌ನಿಂದ 450 ಕಿಲೋ ಮೀಟರ್‌ಗೆ ಹೆಚ್ಚಿಸಲಾಗಿದೆ.

**ಬ್ರಹ್ಮೋಸ್ ಕ್ಷಿಪಣಿ:**

- ಬ್ರಹ್ಮೋಸ್ ಕ್ಷಿಪಣಿಯನ್ನು ಬ್ರಹ್ಮೋಸ್ ಏರೋಸ್ಪೇಸ್, ರಷ್ಯಾ ಮತ್ತು ಭಾರತದ ಜಂಟಿ ಸಂಸ್ಥೆ ಅಭಿವೃದ್ಧಿಪಡಿಸಿದೆ.
- ಭಾರತದ ಬ್ರಹ್ಮಪುತ್ರ ಹಾಗೂ ರಷ್ಯಾದ ಮಾಸ್ಕ್ವ ನದಿಯ ಹೆಸರನ್ನು ಈ ಕ್ಷಿಪಣಿಗೆ ಇಡಲಾಗಿದೆ.
- ಬ್ರಹ್ಮೋಸ್ ಕ್ಷಿಪಣಿ ಮ್ಯಾಕ್-2 ಗರಿಷ್ಠ ವೇಗದಲ್ಲಿ ಚಲಿಸುವ ಸಾಮರ್ಥ್ಯವನ್ನು ಹೊಂದಿದೆ.
- ಸುಮಾರು 300 ಕೆ.ಜಿ ತೂಕದ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿದೆ.
- ಈ ಹಿಂದೆ 290 ಕಿ.ಮೀ ದೂರ ಚಲಿಸುವ ಸಾಮರ್ಥ್ಯವನ್ನು ಹೊಂದಿತ್ತು. 2016ರಲ್ಲಿ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಗೆ (ಎಂಟಿಸಿಆರ್) ಸೇರ್ಪಡೆಗೊಂಡ ನಂತರ

ಭಾರತ ಬ್ರಹ್ಮೋಸ್ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿ ಕ್ರಮಿಸುವ ದೂರವನ್ನು 450 ಕಿ.ಮೀಗೆ ಹೆಚ್ಚಿಸಿ ಪರೀಕ್ಷೆ ನಡೆಸಿದೆ.

**ಕೇರಳದಲ್ಲಿ ದೇಶದ ಅತಿದೊಡ್ಡ ತೇಲುವ ಸೋಲಾರ್ ವಿದ್ಯುತ್ ಘಟಕ ಸ್ಥಾಪನೆ**



ಸರ್ಕಾರಿ ಸ್ವಾಮ್ಯದ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಶನ್ ಲಿಮಿಟೆಡ್ (NTPCL) ದೇಶದ ಅತಿದೊಡ್ಡ ತೇಲುವ ಸೌರ ವಿದ್ಯುತ್ ಘಟಕವನ್ನು ಕೇರಳದ ಕಾಯಂಕುಲಂನಲ್ಲಿ ಸ್ಥಾಪಿಸಿದೆ. 100 ಕಿಲೋ ವ್ಯಾಟ್ ಪೀಕ್ (Kwp) ಸಾಮರ್ಥ್ಯದ ಈ ಸೌರ ವಿದ್ಯುತ್ ಘಟಕವನ್ನು ಮೇಕ್ ಇನ್ ಇಂಡಿಯಾ ಅಭಿಯಾನದಡಿ ಸ್ವದೇಶಿ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.


**ಪ್ರಮುಖಾಂಶಗಳು**:

- NTPCಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಅಂಗವಾದ NETRA (NTPC Energy Technology Reliance Alliance) ಹಾಗೂ ಚೆನ್ನೈ ಮೂಲದ ಇನ್ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ ಎಂಜನಿಯರಿಂಗ್ & ಟೆಕ್ನಾಲಜಿ (CIPET) ಈ ಸೌರವಿದ್ಯುತ್ ಘಟಕವನ್ನು ಅಭಿವೃದ್ಧಿಪಡಿಸಿವೆ.
- ಚೆನ್ನೈ ಮೂಲದ "ಸ್ವೆಲೆಕ್ಟ್ ಎನರ್ಜಿ ಸಿಸ್ಟಮ್ಸ್ ಲಿಮಿಟೆಡ್" ಈ ಘಟಕವನ್ನು CIPET & NETRA ಸಂಸ್ಥೆಗಳ ಸಹಯೋಗದೊಂದಿಗೆ ಕೇವಲ 22 ದಿನಗಳಲ್ಲಿ ಅನುಷ್ಠಾನಗೊಳಿಸಿದೆ.
- ತೇಲುವ ಸೌರ ವಿದ್ಯುತ್ ಘಟಕಗಳು ಭೂಮಿಯ ಮೇಲೆ ಸ್ಥಾಪಿಸುವ ಸಾಂಪ್ರದಾಯಿಕ ಸೌರ ವಿದ್ಯುತ್ ಘಟಕಗಳಿಗೆ ಉದಯೋನ್ಮುಖ ಪರ್ಯಾಯ ವ್ಯವಸ್ಥೆಯಾಗಿ ಜನಪ್ರಿಯಗೊಳ್ಳುತ್ತಿವೆ. ಈ ಘಟಕಗಳನ್ನು ನೀರಿನ ಮೇಲೆ ಸ್ಥಾಪಿಸುವ ಕಾರಣ ಭೂಮಿಯ ಮೇಲೆ ಅವಲಂಭಗೊಳ್ಳುವ ಪ್ರಮೇಯವಿಲ್ಲ.
- ಇದಲ್ಲದೆ, ನೀರಿನ ಮೇಲೆ ಸ್ಥಾಪಿಸುವುದರಿಂದ ನೀರಿನ ಆವಿ ತಗ್ಗಲಿದೆ ಹಾಗೂ ಸೌರ ಫಲಕಗಳು ದೂಳಿನಿಂದ ಸ್ವಚ್ಛವಾಗಿಯೇ ಇರುವ ಕಾರಣ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚು. ಅಳವಡಿಸುವುದು ಸಹ ಸುಲಭ.

**NTPC ಬಗ್ಗೆ**:

- ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಶನ್ ಲಿಮಿಟೆಡ್ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ಇಂಧನ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ. ಇದು ದೇಶದ ಅತಿದೊಡ್ಡ ವಿದ್ಯುತ್ ಉತ್ಪಾದಕ ಸಂಸ್ಥೆಯಾಗಿದ್ದು, ದೇಶದ ಒಟ್ಟಾರೆ ವಿದ್ಯುತ್ ಉತ್ಪಾದನೆಯಲ್ಲಿ ಶೇ 25% ರಷ್ಟನ್ನು NTPC ಉತ್ಪಾದಿಸುತ್ತಿದೆ.
- NTPC ಕೇಂದ್ರ ಕಚೇರಿ ನವದೆಹಲಿಯಲ್ಲಿದ್ದು, 1975ರಲ್ಲಿ ಸ್ಥಾಪಿಸಲಾಗಿದೆ.

## ನಾಸಾದ ಸಂಪರ್ಕಕ್ಕೆ ಲಭಿಸಿದ ಚಂದ್ರಯಾನ-1



ಏಳು ವರ್ಷಗಳ ಹಿಂದೆ ಭೂಮಿ ಜತೆಗಿನ ಸಂಪರ್ಕ ಕಳೆದುಕೊಂಡು "ಕಣ್ಮರೆ'ಯಾಗಿದ್ದ ಭಾರತದ ಮಹತ್ವಾಕಾಂಕ್ಷಿ ಚಂದ್ರ ಅಧ್ಯಯನ ನೌಕೆ "ಚಂದ್ರಯಾನ 1' ಅನ್ನು ನಾಸಾದ ಜೆಟ್ ಪ್ರಾಪಲÒನ್ ಲ್ಯಾಬೋರೇಟರಿ (ಜೆಪಿಎಲ್), ಪತ್ತೆಹಚ್ಚಿದೆ. ಚಂದ್ರಯಾನ-1 ನೌಕೆ ಚಂದ್ರನ ಮೇಲ್ಮೈನಿಂದ ಸರಿಸುಮಾರು 200 ಕಿಲೋಮೀಟರ್ ದೂರದಲ್ಲಿ ಚಂದ್ರನ ಸುತ್ತುತ್ತಿರುವುದಾಗಿ ನಾಸಾ ವಿಜ್ಞಾನಿಗಳ ತಂಡ ಹೇಳಿದೆ. ಅಕ್ಟೋಬರ್ 22, 2008 ರಂದು ಚಂದ್ರಯಾನ ನೌಕೆಯನ್ನು ಉಡಾಯಿಸಿದ ಸರಿಯಾಗಿ ಒಂದು ವರ್ಷಗಳ ನಂತರ ಅಂದರೆ 2009ರ ಆ.29ರಂದು ಇಸ್ರೋ ಚಂದ್ರಯಾನ-1 ನೌಕೆಯೊಂದಿಗೆ ಸಂಪರ್ಕವನ್ನು ಕಳೆದುಕೊಂಡಿತ್ತು.

### ಹೇಗೆ ಸಂಪರ್ಕವನ್ನು ಕಂಡುಕೊಳ್ಳಲಾಯಿತು?

ನಿರ್ವಹಣಾ ಘಟಕದ ಸಂಪರ್ಕ ಕಡಿದುಕೊಂಡಿದ್ದ ಈ ನೌಕೆ ಆಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿರುವ ಭೂಆಧಾರಿತ ರೇಡಾರ್‌ನಿಂದ ಇದು ಸಾಧ್ಯವಾಗಿದೆ ಎಂದಿದ್ದಾರೆ ನಾಸಾ ವಿಜ್ಞಾನಿಗಳು. ಈ ಕುರಿತು ಮಾಹಿತಿ ನೀಡಿರುವ ಜೆಪಿಎಲ್ ಮತ್ತು ಟೆಸ್ಟ್ ಪ್ರಾಜಕ್ಟ್‌ನ ರೆಡಾರ್ ವಿಜ್ಞಾನಿ ಮರಿನಾ ಬ್ರೋಜೋವಿಕ್, ನಾಸಾದ ಚಂದ್ರಾನ್ವೇಷಣೆ ಉಪಗ್ರಹ (ಎಲ್‌ಆರ್‌ಒ) ಮತ್ತು ಭಾರತೀಯ ಬಾಹ್ಯಾಕಾಶ ಅಧ್ಯಯನಾ ಕೇಂದ್ರ (ಇಸ್ರೋ) ಅಭಿವೃದ್ಧಿಪಡಿಸಿದ್ದ ಚಂದ್ರಯಾನ 1 ನೌಕೆಯನ್ನು ಚಂದ್ರ ಮೇಲ್ಮೈ ಅಧ್ಯಯನ ಯೋಗ್ಯ ರೆಡಾರ್‌ನಿಂದ ಪತ್ತೆಮಾಡಲಾಗಿದೆ ಎಂದು ತಿಳಿಸಿದೆ.

### ಪ್ರಮುಖಾಂಶಗಳು:

- ಮಾಹಿತಿ ಪ್ರಕಾರ ಚಂದ್ರಯಾನ-1 ಭೂಮಿಯಿಂದ ಅಂದಾಜು 3,80,000 ಕಿಲೋಮೀಟರ್ ದೂರದಲ್ಲಿರುವುದು ಕಂಡುಬಂದಿದೆ.
- ಈ ಕಾರ್ಯಾಚರಣೆಗೆ ಜೆಪಿಎಲ್ ತಂಡ 70 ಮೀಟರ್ ಆ್ಯಂಟೇನಾ ಬಳಸಿಕೊಂಡಿದೆ. ಇದು ಕ್ಯಾಲಿಫೋರ್ನಿಯಾದ ಗೋಲ್ಡ್‌ಸ್ಟೋನ್ ದೀಪ್ ಸ್ಪೇಸ್ ಕಮ್ಯುನಿಕೇಷನ್ ಕಾಂಪ್ಲೆಕ್ಸ್‌ನಲ್ಲಿದ್ದು, ಭಾರಿ ಪ್ರಮಾಣದ ಬೆಳಕು ಚೆಲ್ಲುವಂತೆ ಮಾಡಿ ಪತ್ತೆ ಮಾಡುವಲ್ಲಿ ನಾಸಾ ತಂಡ ಯಶಸ್ವಿಯಾಗಿದೆ.

### ಚಂದ್ರಯಾನ 1 ಸಂಕ್ಷಿಪ್ತ ಪರಿಚಯ:

ಚಂದ್ರಯಾನ-1 ನೌಕೆಯನ್ನು ಅಕ್ಟೋಬರ್ 22, 2008 ರಂದು ಯಶಸ್ವಿಯಾಗಿ ಹಾರಿ ಬಿಡಲಾಗಿತ್ತು. ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಲಿದೆ ಎಂದು ಅಂದಾಜಿಸಲಾಗಿದ್ದ, ಈ ನೌಕೆ ಕೇವಲ 312 ದಿನಗಳ ಕಾಲ ಕಾರ್ಯನಿರ್ವಹಿಸಿ ಶೇ 95% ಗುರಿಯನ್ನು ಮಾತ್ರ ಸಾಧಿಸಿತು. ಚಂದ್ರ ಹಾಗೂ ಚಂದ್ರನ ಮೇಲ್ಮೈ ಸ್ವರೂಪದ ಸುಮಾರು 70000ಕ್ಕೂ ಹೆಚ್ಚು ಚಿತ್ರಗಳನ್ನು ಈ ನೌಕೆಗೆ ಭೂಮಿಗೆ ರವಾನಿಸಿದೆ.

**<u>ಖ್ಯಾತ ಪವನಶಾಸ್ತ್ರಜ್ಞ "ದೇವ್ ರಾಜ್ ಸಿಕ್ಕಾ" ನಿಧನ</u>**



ಖ್ಯಾತ ಪವನಶಾಸ್ತ್ರಜ್ಞ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟ್ರಾಫಿಕಲ್ ಮೆಟಿಯೊರಲಾಜಿಯ ಮಾಜಿ ನಿರ್ದೇಶಕ ದೇವ್ ರಾಜ್ ಸಿಕ್ಕಾ ಅವರು ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು. ಸಿಕ್ಕಾ ಅವರು ಭಾರತ ಪವನಶಾಸ್ತ್ರದ ಪಿತಾಮಹ ಹಾಗೂ ಮಾನ್ಸೂನ್ ಮ್ಯಾನ್ ಎಂದೇ ಪ್ರಸಿದ್ದರಾಗಿದ್ದರು. ಎಲ್ ನಿನೊ ವಿದ್ಯಮಾನ ಹಾಗೂ ಭಾರತದ ಮಾನ್ಸೂನ್ ಗೆ ಇರುವ ಸಂಬಂಧವನ್ನು 1982ರಲ್ಲೆ ಪ್ರತಿಪಾದಿಸಿದ್ದರು. ಆದರೆ ಅಂದಿನ ದಿನಗಳಲ್ಲಿ ಈ ಸಂಶೋಧನೆಗೆ ಅಷ್ಟೊಂದು ಮಹತ್ವವನ್ನು ನೀಡಲಾಗಿಲ್ಲ.

**ದೇವ್ ರಾಜ್ ಸಿಕ್ಕಾ ಬಗ್ಗೆ**:

- ಸಿಕ್ಕಾ ಅವರು ಮಾರ್ಚ್ 1, 1932 ರಲ್ಲಿ ಇಂದಿನ ಪಾಕಿಸ್ತಾನದ ಭಾಗವಾದ ಜಾಂಗ್ ನಲ್ಲಿ ಜನಿಸಿದರು. ದೇಶ ವಿಭಜನೆ ನಂತರ ಭಾರತಕ್ಕೆ ವಲಸೆ ಬಂದರು.
- ಆಗ್ರಾ ವಿಶ್ವವಿದ್ಯಾಲಯದಲ್ಲಿ ಭೌತಿಕ ರಸಾಯನಶಾಸ್ತ್ರದಲ್ಲಿ ಮಾಸ್ಟರ್ ಆಫ್ ಸೈನ್ಸ್ (ಎಂ.ಎಸ್ಸಿ) ಪದವಿ ಪಡೆದಿರುವ ಇವರು 1954ರಲ್ಲಿ ಭಾರತೀತ ಪವನ ಇಲಾಖೆಗೆ ಸೇರ್ಪಡೆಗೊಂಡರು.
- 1964ರಲ್ಲಿ ಪುಣೆಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆಟಿಯೊರಲಾಜಿಗೆ ಸೇರ್ಪಡೆಗೊಂಡು, ಇದೇ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.
- ಹವಾಮಾನ ಮುನ್ಸೂಚನೆಗೆ ಸಂಬಂಧಿಸಿದ ವಿನೂತನ ಮಾದರಿಗಳನ್ನು ಅಭಿವೃದ್ದಿಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.
- ಕೇಂದ್ರ ಭೂ ವಿಜ್ಞಾನ ಸಚಿವಾಲಯದ "ಮಾನ್ಸೂನ್ ಮಿಷನ್"ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.
- ಸಿಕ್ಕಾ ಅವರು ಪವನಶಾಸ್ತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಐಎಂಡಿ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ ಸರ್ ಗಿಲ್ಬರ್ಟ್ ವಾಕರ್ ಗೋಲ್ಡ್ ಮೆಡಲ್ ಲಭಿಸಿದೆ.

**<u>ಮಾರ್ಚ್ 24: ವಿಶ್ವ ಕ್ಷಯರೋಗ ದಿನ</u>**




ವಿಶ್ವದಾದ್ಯಂತ ಮಾರ್ಚ್ 24 ರಂದು "ವಿಶ್ವ ಕ್ಷಯ ರೋಗ ದಿನ" ಎಂದು ಆಚರಿಸಲಾಗುತ್ತಿದೆ. ಕ್ಷಯರೋಗದ ಬಗ್ಗೆ ಅರಿವು ಮೂಡಿಸಿ ಕ್ಷಯ ರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 1982 ರಿಂದ ಆಚರಿಸಲಾಗುತ್ತಿದೆ. 1882ನೇ ಇಸವಿಯಲ್ಲಿ ಮಾರ್ಚ್ 24ರಂದು ಡಾ| ರಾಬರ್ಟ್ ಕ್ಷಯ ರೋಗಕ್ಕೆ ಕಾರಣವಾದ ರೋಗಾಣು ಮೈಕೊ ಬ್ಯಾಕ್ಟಿರಿಯಾ ಟ್ಯುಬರ್ ಕ್ಯುಲೋಸಿಸ್ ಎಂಬ ರೋಗಾಣುವನ್ನು ಕಂಡು ಹಿಡಿದರು. ಅದರ ಸ್ಮರಣಾರ್ಥ ಪ್ರತಿ ವರ್ಷ 24 ರಂದು ವಿಶ್ವ ಕ್ಷಯರೋಗ ದಿನ ಎಂದು ಆಚರಿಸಲಾಗುತ್ತಿದೆ.

ಪ್ರಮುಖಾಂಶಗಳು:

- ಈ ವರ್ಷದ ಧ್ಯೇಯವಾಕ್ಯ: "United to End TB.

**ಕ್ಷಯರೋಗ**:

- ಕ್ಷಯ ಮಾನವನಿಗೆ *ಮೈಕೊಬ್ಯಾಕ್ಟೀರಿಯಂ* ಜಾತಿಯ ಹಲವು ಬ್ಯಾಕ್ಟೀರಿಯಗಳಿಂದ ಬರುವ ಮಾರಕ ರೋಗ. ಪ್ರಮುಖವಾಗಿ ಪುಪ್ಪುಸಗಳಿಗೆ ಹಾನಿ ಮಾಡುವ ಈ ರೋಗ ಮುಂದೆ ದೇಹದ ಹಲವು ಅಂಗಾಂಗಗಳ ಮೇಲೆ ತನ್ನ ದುಷ್ಪರಿಣಾಮ ಬೀರುತ್ತದೆ.
- ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ 2015 ರಲ್ಲಿ 10.4 ಮಿಲಿಯನ್ ಜನರು ಈ ರೋಗಕ್ಕೆ ತುತ್ತಾಗಿದ್ದು, 1.8 ಮಿಲಿಯನ್ ಜನರು ಮರಣ ಹೊಂದಿದ್ದಾರೆ.

# ಕ್ರೀಡೆ

**2017 ಬಿಸಿಸಿಐ ವಾರ್ಷಿಕ ಪ್ರಶಸ್ತಿ ಪ್ರಕಟ: ಕೊಹ್ಲಿಗೆ ಪಾಲಿ ಉಮ್ರಿಗರ್ ಪ್ರಶಸ್ತಿ**



ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 2017 ವಾರ್ಷಿಕ ಪ್ರಶಸ್ತಿಯನ್ನು ಪ್ರಕಟಗೊಳಿಸಿದೆ. ದೇಶದ ಪ್ರಸಿದ್ಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರರನ್ನು ಗೌರವಿಸುವ ಸಲುವಾಗಿ ಪ್ರಶಸ್ತಿಯನ್ನು ವಿವಿಧ ವಿಭಾಗಗಳಲ್ಲಿ ನೀಡಲಾಗುತ್ತಿದೆ. ಮೊದಲ ಬಾರಿಗೆ ಪ್ರಶಸ್ತಿಯನ್ನು 2006-07ರಲ್ಲಿ ನೀಡಲಾಯಿತು.

**ಪ್ರಶಸ್ತಿಯನ್ನು ಪಡೆದವರು:**

- **ಸಿ.ಕೆ.ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ:** ರಾಜೀಂದರ್ ಗೊಯೆಲ್ ಮತ್ತು ಪದ್ಮಾಕರ್ ಶಿವಾಲ್ಕರ್
- **ಬಿಸಿಸಿಐ ಜೀವಮಾನ ಸಾಧನೆ ಪ್ರಶಸ್ತಿ:** ಶಾಂತ ರಂಗಸ್ವಾಮಿ
- **ಬಿಸಿಸಿಐ ವಿಶೇಷ ಪ್ರಶಸ್ತಿ:** ಲೇಟ್ ರಮಾಕಾಂತ್ ದೇಸಾಯಿ, ವಿವಿ ಕುಮಾರ್
- **ಪಾಲಿ ಉಮ್ರಿಗರ್ ಪ್ರಶಸ್ತಿ:** ವಿರಾಟ್ ಕೊಹ್ಲಿ, ವಿರಾಟ್ ಕೊಹ್ಲಿ ಅವರಿಗೆ ಮೂರನೇ ಬಾರಿಗೆ ಪಾಲಿ ಉಮ್ರಿಗರ್ ಪ್ರಶಸ್ತಿ ಗೌರವ ಒಲಿದಿದೆ. 'ವರ್ಷದ ಅಂತರರಾಷ್ಟ್ರೀಯ ಕ್ರಿಕೆಟಿಗ'ರಿಗೆ ನೀಡಲಾಗುವ ಪಾಲಿ ಉಮ್ರೀಗರ್ ಪ್ರಶಸ್ತಿಯನ್ನು ಕೊಹ್ಲಿ 2011–12 ಮತ್ತು 2014–15ರಲ್ಲಿ ಗಳಿಸಿದ್ದರು.
- **ರಣಜಿಯಲ್ಲಿ ಶ್ರೇಷ್ಠ ಆಲ್ ರೌಂಡರ್ ಗೆ ನೀಡಲಾಗುವ ಲಾಲಾ ಅಮರನಾಥ್ ಪ್ರಶಸ್ತಿ**: ಜಲಜ್ ಸಕ್ಸೇನಾ (ಮಧ್ಯ ಪ್ರದೇಶ).
- **ನಿಗದಿತ ಒವರ್ ಪಂದ್ಯಗಳಲ್ಲಿ ಅತ್ಯುತ್ತಮ ಆಲ್ ರೌಂಡರ್ ನೀಡಲಾಗುವ ಲಾಲಾ ಅಮರನಾಥ್ ಪ್ರಶಸ್ತಿ:** ಅಕ್ಸರ್ ಪಟೇಲ್ (ಗುಜರಾತ್)
- **ರಣಜಿ ಪಂದ್ಯದಲ್ಲಿ ಅತಿ ಹೆಚ್ಚು ರನ್ ಗಳಿಸಿದವರಿಗೆ ನೀಡುವ ಮಾಧವ್ ರಾವ್ ಸಿಂಧಿಯಾ:** ಶ್ರೇಯಸ್ ಅಯ್ಯರ್
- **ರಣಜಿ ಪಂದ್ಯದಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರಿಗೆ ನೀಡುವ ಮಾಧವ್ ರಾವ್ ಸಿಂಧಿಯಾ ಪ್ರಶಸ್ತಿ:** ಷಹಬಾಜ್ ನದೀಮ್
- **ದಿಲೀಪ್ ಸರದೇಸಾಯಿ ಪುರಸ್ಕಾರ:** ಆಫ್‌ಸ್ಪಿನ್ನರ್ ಆರ್. ಅಶ್ವಿನ್. ಆಲ್‌ರೌಂಡರ್ ಅಶ್ವಿನ್ ಅವರು ಎರಡನೇ ಬಾರಿ ಹೇಮಂತ್ ಸರದೇಸಾಯಿ ಪುರಸ್ಕಾರವನ್ನು ಪಡೆಯುತ್ತಿದ್ದಾರೆ. ಈ ಸಾಧನೆ ಮಾಡಿದ ಮೊದಲ ಕ್ರಿಕೆಟಿಗ ಅವರಾಗಿದ್ದಾರೆ.

**<u>ಪಂಜಾಬ್ ಮುಡಿಗೆ 2017 ಸಂತೋಷ್ ಪುಟ್ಬಾಲ್ ಟ್ರೋಫಿ</u>**



ಪಂಜಾಬ್ ತಂಡ 71ನೇ ಸಂತೋಷ್ ಪುಟ್ಬಾಲ್ ಟ್ರೋಫಿ ಟೂರ್ನಮೆಂಟ್ ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಫೈನಲ್ ಪಂದ್ಯದಲ್ಲಿ ರೈಲ್ವೆ ತಂಡವನ್ನು 2-1 ಗೋಲುಗಳಿಂದ ಮಣಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

- ಪಂಜಾಬ್ ಗೆ ಇದು ಒಂಬತ್ತನೇ ಸಂತೋಪ್ ಟ್ರೋಫಿಯಾಗಿದೆ.
- ಪಂಜಾಬ್ ತಂಡದ ಪರವಾಗಿ ರಾಜ್ಬೀರ್ ಸಿಂಗ್ ಅವರು ಎರಡು ಗೋಲುಗಳನ್ನು ಗಳಿಸಿ ತಂಡವನ್ನು ಜಯದ ದಡಕ್ಕೆ ತಲುಪಿಸಿದರು.

**ಸಂತೋಷ್ ಟ್ರೋಫಿ:**

- ಸಂತೋಷ್ ಟ್ರೋಫಿ ಭಾರತದಲ್ಲಿ ವಾರ್ಷಿಕವಾಗಿ ಆಯೋಜಿಸುವ ಪುಟ್ಬಾಲ್ ಟೂರ್ನಮೆಂಟ್ ಆಗಿದೆ. 1941 ರಲ್ಲಿ ಸ್ಥಾಪಿಸಲಾಗಿದೆ.